ಗೆಜ್ಜೆ ಮಾತಾಡುತಾನೆ

ಸಂಪಾದಕ: ಜಿ.ಎನ್. ಮೋಹನ್

ಕರ್ನಾಟಕ ಜಾನಪದ
ಮತ್ತು ಯಕ್ಷಗಾನ ಅಕಾಡೆಮಿ
ಬೆಂಗಳೂರು

ಗೆಜ್ಜೆ ಮಾತಾಡುತಾವೆ

ಪ್ರಧಾನ ಸಂಪಾದಕ

ಡಾ. ಎಸ್.ಕೆ. ಕರೀಂಖಾನ್

ಸಂಪಾದಕ

ಜಿ. ಎನ್. ಮೋಹನ್

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ

GEJJE MATADUTAVE - A collection of feature articles and news items about Karnataka Janapada and Yakshagana Academy published in various Dailies and Weekly magazines. published by Karnataka Janapada and Yakshagana Academy Bangalore - 560 002, Chief editor : Dr. S.K. Kareem Khan, Editor : G.N. Mohan, Sub-editor : Prajavani, Managing editor : Hi. Chi. Boralingaiah Pages : 72

ಬೆಲೆ : ರೂ. 5–00

ಹಕ್ಕುಗಳು ಕಾದಿರಿಸಲಾಗಿದೆ

ವ್ಯವಸ್ಥಾಪಕ ಸಂಪಾದಕ :
ಹಿ.ಚಿ. ಬೋರಲಿಂಗಯ್ಯ

ವಿನ್ಯಾಸ :
ಜಿ. ಎನ್. ಮೋಹನ್

ಪ್ರಕಾಶಕರು :
ರಿಜಿಸ್ಟ್ರಾರ್
ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ
13/3 ಕೆನರಾ ಫೈನಾನ್ಸ್ ಕಟ್ಟಡ
ನೃಪತುಂಗ ರಸ್ತೆ, ಬೆಂಗಳೂರು – 560 002

ಮುದ್ರಕರು :
ರಶ್ಮಿ ಟೈಪೋಸೆಟ್
ಸುಧಾಮನಗರ, ಬೆಂಗಳೂರು

ಕೃತಜ್ಞತೆಗಳು

ಪ್ರಜಾವಾಣಿ

ಕನ್ನಡಪ್ರಭ

ಸಂಯುಕ್ತ ಕರ್ನಾಟಕ

ಉದಯವಾಣಿ

ಮುಂಗಾರು

ಸುಧಾ

ಪ್ರಜಾಮತ

ಲಂಕೇಶ್‌ಪತ್ರಿಕೆ

ಮಾರ್ದನಿ

ಜನತಾವಾಣಿ

ಜನಪರ

DECCAN HERALD

INDIAN EXPRESS

THE HINDU

TIMES OF INDIA

ಸ್ವಾತಿ ಸಿಂಡಿಕೇಟ್ಸ್

ಅಧ್ಯಕ್ಷರ ನುಡಿ



ಕಳೆದ ಮೂರು ವರ್ಷಗಳಿಂದ ಅಕಾಡೆಮಿಯ ಅಧ್ಯಕ್ಷನಾಗಿರುವ ನಾನು ನನ್ನ ಕೈಲಾದಷ್ಟು ಕೆಲಸವನ್ನು ನಿರ್ವಂಚನೆಯಿಂದ ಮಾಡಿದ್ದೇನೆ. ಒಂದೇ ಕುಟುಂಬದಂತಿರುವ ನನ್ನ ಪ್ರೀತಿಯ ಅಕಾಡೆಮಿ ಸಿಬ್ಬಂದಿ ನನ್ನೆಲ್ಲ ಆಶಯಗಳಿಗೆ ರೂಪ ಕೊಟ್ಟಿದ್ದಾರೆ. ಅಕಾಡೆಮಿಯ ಕ್ರಿಯಾಶೀಲ ರಿಜಿಸ್ಟ್ರಾರ್ ಶ್ರೀ ಹಿ.ಚಿ. ಬೋರಲಿಂಗಯ್ಯನವರು ಸ್ವತಃ ಜಾನಪದ ವಿದ್ವಾಂಸರೂ, ಉತ್ಸಾಹಶಾಲಿಯೂ ಆದ್ದರಿಂದ ನನ್ನ ಹೆಗಲಿಗೆ ಹೆಗಲು ಕೊಟ್ಟು ದುಡಿದಿದ್ದಾರೆ. ನಾನು ಅಂದುಕೊಂಡಷ್ಟು ಕೆಲಸ ಆಗಲಿಲ್ಲವೆಂಬ ಕೊರಗು ನನಗಿದೆ. ಇದಕ್ಕೆ ಮುಖ್ಯ ಕಾರಣ ಹಣದ ಕೊರತೆ. ನಮ್ಮ ಸರ್ಕಾರ ಜಾನಪದ ಅಕಾಡೆಮಿಗೆ ಇನ್ನು ಮುಂದಾದರೂ ಹೆಚ್ಚಿನ ಹಣ ನೀಡಲಿ ಎಂಬುದು ನನ್ನ ಆಶಯ. ಆದರೂ ಈ ಮಿತಿಯ ನಡುವೆ ಕರ್ನಾಟಕ ಜಾನಪದದ ವೈವಿಧ್ಯಗಳ ಬಗ್ಗೆ ನೂರಾರು ಗಂಟೆಗಳ ವಿಡಿಯೋ ದಾಖಲಾತಿ ಮಾಡಿದ್ದೇವೆ. ವರ್ಣ ಪಾರದರ್ಶಿಕೆ ಹಾಗೂ ಛಾಯಾಚಿತ್ರಗಳ ಸಂಗ್ರಹ ಮಾಡಿದ್ದೇವೆ. ಪ್ರತಿವರ್ಷ ಮಾಡಬೇಕಾದ ನಿಯತ ಕಾರ್ಯಗಳನ್ನು ತಪ್ಪದೇ ಮಾಡಿದ್ದೇವೆ. ಅಲ್ಲದೆ ಗಿರಿಜನ ವಿಚಾರ ಸಂಕಿರಣ, ತೊಗಲುಗೊಂಬೆ ಕಮ್ಮಟ, ಗಡಿನಾಡಿನಲ್ಲಿ ಮೇಳ, ಕರ್ನಾಟಕ ಜಾನಪದ ಗ್ರಂಥ, ಹಲವಾರು ವಿಚಾರ ಸಂಕಿರಣಗಳು, ಪ್ರಾತ್ಯಕ್ಷಿಕೆಗಳು ಮುಂತಾಗಿ ನೂರಾರು ಕಾರ್ಯಕ್ರಮ ಮಾಡಿದ್ದೇವೆ. ಇವೆಲ್ಲದರ ಜೊತೆಗೆ ಸಹ್ಯಾದ್ರಿ ಮತ್ತು ಕರಾವಳಿಯಲ್ಲಿ ವ್ಯಾಪಕ ಕ್ಷೇತ್ರ ಕಾರ್ಯ ಮಾಡಿ ಗಿರಿಜನರ ಬದುಕನ್ನ ದಾಖಲು ಮಾಡುವುದರ ಜೊತೆಗೆ ಅವರನ್ನ ಹೊರಜಗತ್ತಿಗೆ ಪರಿಚಯಿಸುವ, ಅವರ ಕಲೆಗಳ ಬಗ್ಗೆ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಿದ್ದೇವೆ.

ನನ್ನ ಈ ಅವಧಿಯ ಕೊನೆಯ ಸರ್ವಸದಸ್ಯರ ಸಭೆಯಲ್ಲಿ ಒಂದು ವಿಚಾರ ಬಂತು. ಅದೇನೆಂದರೆ ಇದುವರೆಗೆ ಅಕಾಡೆಮಿಯ ಕೆಲಸ–ಕಾರ್ಯಗಳನ್ನು ಕುರಿತಂತೆ ನಾಡಿನ ನಾನಾ ಪತ್ರಿಕೆಗಳು ಸಾಕಷ್ಟು ಲೇಖನಗಳನ್ನು, ವಿಶೇಷ ವರದಿಗಳನ್ನು ಪ್ರಕಟಿಸಿವೆ. ಈ ಎಲ್ಲ ಲೇಖನ ಹಾಗೂ ವರದಿಗಳನ್ನು ಒಂದು ಪುಸ್ತಕ ರೂಪದಲ್ಲಿ ತರುವ ಮೂಲಕ ಅವುಗಳನ್ನು ಸ್ಥಾಯಿಯಾಗಿ ಇರಿಸುವ ಪ್ರಯತ್ನ ಮಾಡಬೇಕು ಎಂಬ ವಿಚಾರ ಬಂದಾಗ ಎಲ್ಲ ಸದಸ್ಯರೂ ಇದನ್ನು ಒಪ್ಪಿದರು. ಇದರ ಸಂಪಾದಕತ್ವವನ್ನು ಯಾರಿಗೆ ಕೊಡಬೇಕೆಂಬ ಪ್ರಸ್ತಾಪ ಬಂದಾಗ ನಾಲ್ಕಾರು ಸದಸ್ಯರು ಥಟ್ಟನೆ ಜಿ.ಎನ್. ಮೋಹನ್ ಅವರ ಹೆಸರು ಹೇಳಿದರು. ಶ್ರೀ ಮೋಹನ್ ಈ ಹಿಂದೆ ನಾವು ಕೈಗೊಂಡ ಗಿರಿಜನ ಯಾತ್ರೆಯಲ್ಲಿ ಹಲವು ಬಾರಿ ನಮ್ಮ ಜೊತೆಗಿದ್ದವರು, ಲೇಖನಗಳನ್ನು ಬರೆದಿದ್ದವರು. ಅಲ್ಲದೆ ಜಾನಪದ ಹಾಗೂ ಗಿರಿಜನ ಸಂಸ್ಕೃತಿಯ ಬಗ್ಗೆ ವಿಶೇಷ ಕಾಳಜಿ ಇರುವವರು. ಹೀಗಾಗಿ ಶ್ರೀ ಮೋಹನ್ ಅವರನ್ನು ನಾನು ಕೇಳಿಕೊಂಡೆ. ನನ್ನ ಮಾತಿಗೆ ಒಪ್ಪಿ ಈ ಪುಸ್ತಕವನ್ನ ಅವರು ಸಂಪಾದಿಸಿ, ಉತ್ತಮವಾದ ಚೌಕಟ್ಟಿನಲ್ಲಿ ಹೊರತಂದಿದ್ದಾರೆ. ಎಲ್ಲ ಲೇಖನಗಳು ಹಾಗೂ ವರದಿಗಳನ್ನು ಜಾಗದ ಮಿತಿಯಿಂದಾಗಿ ಇಲ್ಲಿ ಸೇರಿಸಿಲ್ಲವಾದರೂ ಪ್ರಾತಿನಿಧಿಕವಾಗಿ ಕೆಲವನ್ನಷ್ಟೇ ಆಯ್ಕೆ ಮಾಡಲಾಗಿದೆ. ಈ ಪತ್ರಿಕೆಯಲ್ಲಿರುವ ಎಲ್ಲ ಲೇಖನಗಳನ್ನು ಹಿಂದೆ ಪತ್ರಿಕೆಗಳಿಗೆ ಬರೆದ ಲೇಖಕರಿಗೆ, ಅಕಾಡೆಮಿಯ ಬಗೆಗಿನ ಲೇಖನ ಹಾಗೂ ವಿಶೇಷ ವರದಿಗಳನ್ನೂ ಪ್ರಕಟಿಸಿ, ಸಹಕರಿಸಿದ ಪತ್ರಿಕೆಗಳ ಸಂಪಾದಕರಿಗೆ ನಾನು ಕೃತಜ್ಞ.

ಈ ಮೂರು ವರ್ಷಗಳಲ್ಲಿ ನನ್ನೊಡನಿದ್ದು, ನನ್ನ ಬೆನ್ನೆಲುಬಾಗಿ ಗೌರವದಿಂದ ದುಡಿದ ಸರ್ವಸದಸ್ಯ ಮಹಾಶಯರಿಗೆ ನನ್ನ ಕೃತಜ್ಞತೆಗಳು.

ಬೆಂಗಳೂರು
24–7–1990

ಡಾ. ಎಸ್.ಕೆ. ಕರೀಂಖಾನ್
ಅಧ್ಯಕ್ಷರು

ಪ್ರಸ್ತಾವನೆ

ರಾಗಿಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡು
ಬಲ್ಲಂತ ಜಾಣರು ಬರಕೊಳ್ಳಿ / ನಮ್ಮ ಹಾಡ
ಬಳ್ಳ ತಕ್ಕೊಂಡು ಅಳಕೊಳ್ಳಿ

ಶಿವಮೊಗ್ಗ ಜನಪದ ಕಲಾಮೇಳದಲ್ಲಿ ಡಾ. ಎಸ್.ಕೆ. ಕರೀಂಖಾನ್ ತಾವು ಸಂಗ್ರಹಿಸಿದ ತ್ರಿಪದಿಯನ್ನು ಹೇಳುತ್ತಿದ್ದರು. ಜಾನಪದದ ಆಳ, ವಿಸ್ತಾರ ಬರಹಕ್ಕೆ ಮಿಗಿಲಾದದ್ದು, ಬಳ್ಳದ ಅಳತೆಗೆ ದಕ್ಕಲಾಗದ್ದು ಎನ್ನುತ್ತದೆ ಜಾನಪದ. ಬರಹಕ್ಕೆ ಮಿಗಿಲಾದ ಜಾನಪದದ ಬಗ್ಗೆ ಬಂದ ಬರಹಗಳ ಒಂದು ಕಣ್ಣೋಟ ಒದಗಿಸುವ ಪುಟ್ಟ ಪ್ರಯತ್ನ ಈ 'ಗೆಜ್ಜೆ ಮಾತಾಡುತಾವೆ'.

ಜಾನಪದ ಗೆಜ್ಜೆಗಳು ಮಾತನಾಡಿದ್ದನ್ನು ಆಲಿಸುವ, ನೋಡುವ ಅವಕಾಶ ನನಗೂ ಹಲವಾರು ಬಾರಿ ಒದಗಿಬಂದಿದೆ. ಬೆಂಗಳೂರಿನಲ್ಲಿಯೇ ಹುಟ್ಟಿ, ಬೆಳೆದ ನನಗೆ ಪಶ್ಚಿಮ ಘಟ್ಟಗಳ ಅನನ್ಯತೆ ಮಾತಿಗೆ ಸಿಕ್ಕದ ನೋಟಗಳು, ವಿಸ್ಮಯವನ್ನು ಮೂಡಿಸಿವೆ.

ಶಿವಮೊಗ್ಗ ಗಿರಿಜನ ಕಲಾಮೇಳದ ಸಂದರ್ಭದಲ್ಲಿ ಅಕಾಡೆಮಿಯ ವಿಡಿಯೋ ತಂಡ ರಿಜಿಸ್ಟ್ರಾರ್ ಹಿ.ಚಿ. ಬೋರಲಿಂಗಯ್ಯನವರ ನೇತೃತ್ವದಲ್ಲಿ ಐದು ಸಾವಿರ ಅಡಿ ಎತ್ತರದ ಮೇಘಾನೆ ಬೆಟ್ಟ ಏರಿ ಅಲ್ಲಿನ ಕುಣಬಿ ಜನಾಂಗದ ಬದುಕನ್ನು ಕ್ಯಾಮೆರಾ ಕಣ್ಣಲ್ಲಿ ಸೆರೆ ಹಿಡಿದ ಸುದ್ದಿ, ಮೊತ್ತಮೊದಲ ಬಾರಿಗೆ ಹೊಸ ರೀತಿಯ ಜಗತ್ತಿನ ಬದುಕನ್ನು ಮುಂದಿಟ್ಟದ್ದು ಕುತೂಹಲ ಕೆರಳಿಸಿತ್ತು. ಪುನಃ ಅಕಾಡೆಮಿಯೇ ಸಂಯೋಜಿಸಿದ 'ಕಾಲ್ನಡಿಗೆಯ ಮೂಲಕ ಗಿರಿಜನರ ಅಧ್ಯಯನ' ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮೇಘಾನೆಯ ಬದುಕು ನೋಡುವವರೆಗೂ ಇದು ಆಳದಲ್ಲಿ ಉಳಿದಿತ್ತು. ಕರಾವಳಿಯ ತೀರಗಳಲ್ಲಿರುವ ಬುಡಕಟ್ಟು ಜನಾಂಗಗಳು, ಕಾಲ್ನಡಿಗೆಯ ಮೂಲಕ ಕಂಡ ಗಿರಿಜನರು ಮಾತ್ರ ನನಗೆ ದಕ್ಕಿದ್ದು. ಆದರೆ ಇದಕ್ಕೂ ಮಿಗಿಲಾದದ್ದು ಹಲವು. ಅಕಾಡೆಮಿ ಸಂಗ್ರಹಿಸಿರುವ ವಿಡಿಯೋ ಚಿತ್ರಗಳನ್ನು ನೋಡುತ್ತಾ ಹೋದಂತೆ ಜಾನಪದ ಸಾಗರದ ಬೋರ್ಗರೆತ ಸ್ಪಷ್ಟವಾಗುತ್ತದೆ. 'ಗೆಜ್ಜೆ ಮಾತಾಡುತಾವೆ' ಒಂದು ರೀತಿಯಲ್ಲಿ ಸಾಗರದ ನೀರನ್ನು ಹಿಡಿಯಲ್ಲಿ ಹಿಡಿದಂತೆ.

ಎತ್ತರದ ಬೆಟ್ಟದಲ್ಲಿ ಕೊರೆಯುವ ಚಳಿ ಮಧ್ಯೆ ಬದುಕಿನ ಇಳಿಜಾರಿನಲ್ಲಿರುವ ಗಣೇಶ ಮೈದುಂಬಿ 'ಸ್ವಾಮಿ ಶರಣು ದೇವಕೋ, ಸ್ವಾಮಿ ಶರಣು ದೇವಕೋ....' ಎಂದು ಸೊಲ್ಲು ತೆಗೆದಾಗ ಪಶ್ಚಿಮ ಘಟ್ಟದ ಹಲವು ಗಿರಿಜನ ಜೀವಗಳು ಅದಕ್ಕೆ ದನಿಕೂಡಿಸಿದಂತೆನಿಸಿತು.

ಕಪ್ಪು ಮುಖದಲ್ಲಿ ಮಿರಮಿರಿ ನಗೆ ಅರಳಿಸಿ, ಸುಸ್ತು ಹೊಡಿಸುವಷ್ಟು ಹಾಡು ಚಿಮ್ಮಿಸುವ ಹಾಲಕ್ಕಿ ಹೆಂಗಳೆಯರು ಬರಿದಾಗದ ಹಾಡುಗಳ ಜೋಳಿಗೆ ಹೊಂದಿದ್ದಾರೆ. ಮುಂದೆ ಅರ್ಭಟಿಸುವ ಸಮುದ್ರ, ಹಿನ್ನೆಲೆಯಲ್ಲಿ ತೂಗಿ ತೊನೆಯುವ ಕಾಡು, ಮಧ್ಯದಲ್ಲಿ ದಿನದ ಆಯಾಸ ಮರೆತು ಹಾಡಿ ಕುಣಿಯುವ ಗಿರಿಜನರು ರೆಕ್ಕೆ ಬಿಚ್ಚಿ ಹಾರುವ ಬೆಳ್ಳಕ್ಕಿಗಳಂತೆ ಕಾಣುತ್ತಾರೆ.

'ಸಮುದ್ರ ತೀರದಲ್ಲಿ ಬೆಂಕಿ ಹಾಕಿ ವಾರಕ್ಕೊಮ್ಮೆ ಗುಮಟೆ ಹಿಡಿದು ಹಾಲಕ್ಕಿ ಒಕ್ಕಲಿಗರು ಹಾಡುತ್ತಿದ್ದ ಜನಪದ ಹಾಡುಗಳು, ನಿಸರ್ಗದ ಜೊತೆಯಲ್ಲಿ ಅವರ ನೋವುಗಳು ನನ್ನ ಆಳಕ್ಕಿಳಿಯಿತು. ಈಗ ಎಲ್ಲಾ ಬಾಣಲೆಯಲ್ಲಿದೆ. ಹೆಚ್ಚು ಗಾಢವಾಗಿ ಕುದಿಯುವ ಹಂತದಲ್ಲಿದೆ. ಅಲ್ಲಿ ಹೊಸ ಕಾವ್ಯ ಹುಟ್ಟುತ್ತದೆ. ಗುಮಟೆ ಪದಗಳು ಅದರ ಹಿಂದೆ ಕೆಲಸ ಮಾಡುತ್ತದೆ' ಎನ್ನುತ್ತಾರೆ ಕವಿ ಸು.ರಂ. ಎಕ್ಕುಂಡಿ.

ಹಲವು ಕಾವ್ಯಗಳಿಗೆ ಕಣ್ಣಾಗುವ, ಅಗೆದಷ್ಟೂ ಚಿಮ್ಮುವ ಜಾನಪದರ ಬದುಕು ಅವರ ಪರಿಸರದಲ್ಲಿಯೇ ನೋಡಬೇಕು. ಈ ಬದುಕು ನೋಡಲಾಗದ ಹಲವು ನಾಗರಿಕರಿಗೆ ಜಾನಪದ ಅಕಾಡೆಮಿಯ ವಿಡಿಯೋ ಸಂಗ್ರಹ ಅತ್ಯುತ್ತಮ ಸಂಪತ್ತಿನ ಕಣಜವಾಗುವುದರಲ್ಲಿ ಸಂದೇಹವಿಲ್ಲ. ಹಾಲಕ್ಕಿ ಒಕ್ಕಲಿಗರನ್ನು, ಕುಣಬಿಯರನ್ನು ಮಾತ್ರ ಕಂಡ ನನಗೆ ಇಡೀ ಗಿರಿಜನರ ಬದುಕು ತಡಕಾಡುವ ಬಯಕೆ ಉಂಟಾಗುವುದಾದರೆ ಇದು ಸಾಧ್ಯವಾಗದ ಜನತೆಗೆ ಕ್ಯಾಸೆಟ್ ಕಾಣಿಕೆ ಅಪಾರ.

ಡಾ. ಕರೀಂಖಾನ್ 'ಕಾಡುಗಳ ಒಡಲಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗಗಳದ್ದೇ ಒಂದು ಮಿನಿಜಗತ್ತು. ನಾವು ಬಂದ ಹಾದಿಯ ಪಳೆಯುಳಿಕೆಯಂತಿರುವ ಈ ಜನಾಂಗವನ್ನು ಕಂಪ್ಯೂಟರ್ ಯುಗಕ್ಕೆ ಧಾವಿಸುತ್ತಿರುವವರಿಗೆ ಪರಿಚಯ ಮಾಡಿಸುವುದು ನಮ್ಮ ಗುರಿ. ಇದು ಒಂದು ರೀತಿಯಲ್ಲಿ ಇಂದಿನ ಮಂದಿಗೆ ನಿನ್ನೆಯ ನೆನಪು ಮಾಡಿಕೊಡುವ ಪ್ರಯತ್ನ. ನಮ್ಮ ಮುಂದಿನ ಪೀಳಿಗೆಗೆ ಪುಟ್ಟ ಕಾಣಿಕೆ' ಎಂದಿದ್ದಾರೆ.

ಕರೀಂಖಾನ್‌ರವರು ಹೇಳಿದಂತೆಯೇ ರಾಗಿಕಲ್ಲಿನ ಮೇಲೆ ಚೆಲ್ಲಿದ ಹಾಡುಗಳನ್ನು ಅಳತೆಗೆ ಅಲ್ಲವಾದರೂ ಪ್ರೀತಿಯಿಂದ ಅಕಾಡೆಮಿ ಆಯುತ್ತಿದೆ.

ಬೇರೆಯವರ ಹೊಲದಲ್ಲಿ ಜೀತ ಮಾಡುತ್ತಾ, ಒಂದಿಷ್ಟು ಸ್ವಂತಭೂಮಿ ಹೊಂದುವ ಕನಸು ಕಾಣುತ್ತಾ ಈ ಮಧ್ಯೆ ತಾಕುವ

ಎಲ್ಲ ನೋವುಗಳಿಗೆ ಕಣ್ಣೀರು ಜಿನುಗಿಸುವ ಜನಾಂಗದ ನಿಟ್ಟುಸಿರುಗಳೇ ಹಲವು ಬಾರಿ ಹಾಡು, ಕಥೆ, ಒಡಪು ಕುಣಿತಗಳಾಗಿ ಬದಲಾಗಿವೆ. ಇಂತಹ ನಿಟ್ಟುಸಿರಿನ ಹಲವು ಮಂದಿಗೆ 'ಜೀವನದ ಇಳಿವಯಸ್ಸಿನಲ್ಲಿ ಪ್ರಶಸ್ತಿ ಸಂದಾಗ ಬದುಕಿನ ಕಠೋರ ಪುಟಗಳಲ್ಲಿ ನಲಿವಿನಿಂದ ದಾಖಲಾದ ಕ್ಷಣ ಇದಾಗಿರಬಹುದು' (ಲಂಕೇಶ್ ಪತ್ರಿಕೆ) ಪ್ರಶಸ್ತಿ ಸ್ವೀಕರಿಸಿದ ಕಲಾವಿದರನ್ನು ನೋಡಬೇಕಿತ್ತು. ಅನೇಕರಿಗೆ ಇದು ಬದುಕಿನಲ್ಲೇ ಸುದಿನ (ಪ್ರಜಾವಾಣಿ).

ಅಕಾಡೆಮಿ ಕಾರ್ಯಗಳು ಮುಖ್ಯವಾಗುವುದು ಈ ಹಿನ್ನಲೆಯಲ್ಲಿ. ಅಕಾಡೆಮಿ ಗಿರಿಜನರ ಬಗ್ಗೆ, ಜನಪದ ಕಲೆಗಳ ಬಗ್ಗೆ ವಿಶೇಷವಾಗಿ ಗಮನಹರಿಸಿದ್ದು, ಬೆಟ್ಟದಿಂದ ಬಯಲಿಗೆ, ಬಯಲಿನಿಂದ ದೆಹಲಿಗೆ ಗಿರಿಜನರನ್ನು ಕರೆತಂದದ್ದು, ಅಸ್ತವ್ಯಸ್ತವಾಗಿದ್ದ ಅವರ ಜನಪದ ಕಲೆಗಳಿಗೆ ಒಂದು ಶಿಸ್ತು ಒದಗಿಸಿದ್ದು ಗಮನಾರ್ಹ ಸಂಗತಿ.

ಈ ಎಲ್ಲಾ ಕಲೆಗಳನ್ನು ಗುರುತಿಸಿ ಅದಕ್ಕೆ ಹೊಸ ಆಯಾಮ ನೀಡುತ್ತಿರುವ ಸಂದರ್ಭದಲ್ಲಿಯೇ ಜಾನಪದ ಅಕಾಡೆಮಿ ನೀಡಿದ ಪ್ರಶಸ್ತಿಫಲಕವನ್ನು ಕೊರಳಿಗೆ ತೂಗುಹಾಕಿ ಭಿಕ್ಷೆ ಬೇಡುತ್ತಿದ್ದ ಚೆನ್ನಪ್ಪ ಬಸವಂತಪ್ಪ ಅಂಗಡಿಯ ದೃಶ್ಯವೂ ಮನದಾಳದಲ್ಲಿ ಅಳಿಸಲಾಗದಂತೆ ಮೂಡುತ್ತದೆ. ಜಾನಪದ ಅಕಾಡೆಮಿ ಇವರನ್ನು ಗುರುತಿಸುವುದು ಉತ್ತಮ ಕೆಲಸವಾದರೂ ಅವರ ಮುಂದಿನ ಬದುಕೇನಾಗಿದೆ, ಅವರಿಗೆ ಗಟ್ಟಿ ನೆಲೆ ಒದಗಿಸಲು ಸಾಧ್ಯವಾಗಿಲ್ಲವೇಕೆ? ಎಂಬ ಪ್ರಶ್ನೆ ಕಲಾವಿದರಿಗೆ ಗಂಜಿ ನೀಡುವ ಉತ್ತರವೂ ಹೌದು.

ಚೆನ್ನಪ್ಪ ಅಂಗಡಿ ಮಾತ್ರ ಈ ಬದುಕು ಬದುಕುತ್ತಿಲ್ಲ. ಚೆನ್ನಪ್ಪ ಅಂಗಡಿ ಇಂತಹ ಅಸಂಖ್ಯ ಅಜ್ಞಾತ ಕಲಾವಿದರ ಪ್ರತಿನಿಧಿ ಮಾತ್ರ. ಅಕಾಡೆಮಿಯೇ ಗುರುತಿಸಿದ ಬೆಣ್ಣೇನಹಳ್ಳಿ ಬಸಪ್ಪ ತಂಬೂರಿ ಮೀಟುತ್ತಾ ಇಂದಿಗೂ ಭಿಕ್ಷಾಟನೆ ಮಾಡಿ ಬದುಕು ದೂಡುತ್ತಿದ್ದಾರೆ. ಹಲವು ಕಲಾವಿದರ ಬದುಕು ಇವರಿಗಿಂತ ಏನೇನೂ ಭಿನ್ನವಾಗಿಲ್ಲ.

ಇಂತಹ ಹಲವು ಜೀವಗಳಿಗೆ ಒಂದಿಷ್ಟು ಆಸರೆ ನೀಡಬಹುದಾಗಿದ್ದ ಗೌರವ ಧನ, ಮಾಸಾಶನ ಯೋಜನೆಯೂ ನಿಂತುಹೋಗಿದೆ. ಗೌರವಧನ, ಮಾಸಾಶನ ಯೋಜನೆ ಹಲವಾರು ಭಾರಿ ಸರ್ಕಾರದ ಹಸ್ತಕ್ಷೇಪದಲ್ಲಿ ನರಳಿದೆ. ಈ ಕಾರಣದಿಂದಾಗಿಯೇ ಕರ್ನಾಟಕದಲ್ಲಿ ಭೂಮಿ, ಹಣ ಇದ್ದು ಉತ್ತಮ ಸ್ಥಿತಿಯಲ್ಲಿರುವ ಹಲವರು ಈ ಯೋಜನೆಯ ಫಲ ಅನುಭವಿಸುತ್ತಿದ್ದಾರೆ.

ಹಾಗಾದರೆ ಇದಕ್ಕೆ ಪರಿಹಾರವೇನು? ಸರ್ಕಾರ ಜಾನಪದ ಅಕಾಡೆಮಿಗೆ ನೀಡುತ್ತಿರುವ ಸಹಾಯಧನ ಅತ್ಯಲ್ಪ ಎಂಬುದನ್ನು ಈ ಅಕಾಡೆಮಿಯ ಅಧ್ಯಕ್ಷರುಗಳು ಒತ್ತಿ ಹೇಳುತ್ತಲೇ ಬಂದಿದ್ದಾರೆ. ಜಾನಪದ ಅಕಾಡೆಮಿಯ ವ್ಯಾಪ್ತಿ ಇತರೆ ಯಾವುದೇ ಅಕಾಡೆಮಿಗಳ ವ್ಯಾಪ್ತಿಗಿಂತ ಹಲವು ಪಟ್ಟು ಹಿರಿದು. ಈ ಮಧ್ಯೆ ಕರ್ನಾಟಕದ ನೋಟಕ್ಕೆ ಸಿಕ್ಕದ ಹಲವಾರು ಜನಾಂಗ, ಈ ಜನಾಂಗಗಳ ಕಲೆಗಳು ಇರುವುದರಿಂದ ಹಾಗೂ ಆ ಕಲಾವಿದರನ್ನು ಹುಡುಕಲು ಕಾಡು–ಕಣಿವೆ, ಬೆಟ್ಟ–ಗುಡ್ಡಗಳನ್ನು ಹತ್ತಿ ಇಳಿಯಬೇಕಾಗಿರುವ ಪರಿಸ್ಥಿತಿಯಿರುವುದರಿಂದ ಈ ಅಕಾಡೆಮಿಗೆ ಇತರೆ ಅಕಾಡೆಮಿಗಳಿಗಿಂತ ದುಪ್ಪಟ್ಟು ಹಣವಾದರೂ ಬೇಕು. ವಿಚಿತ್ರ ಪರಿಸ್ಥಿತಿಯೆಂದರೆ ಈ ಅಕಾಡೆಮಿ ಇತರೆ ಎಲ್ಲ ಅಕಾಡೆಮಿಗಳಿಗಿಂತ ಕಡಿಮೆ ಸಹಾಯಧನ ಪಡೆಯುತ್ತಿರು ವುದು.

ಈ ಎಲ್ಲಾ ಬವಣೆಯನ್ನು ಕಂಡರಿತ ಜಾನಪದ ಅಕಾಡೆಮಿಯ ಹಿಂದಿನ ಅಧ್ಯಕ್ಷರಾದ ಎಚ್.ಎಲ್.ನಾಗೇಗೌಡರು ಜಾನಪದ ಕಲಾವಿದರ ಕಲ್ಯಾಣ ನಿಧಿ ಎಂಬ ಅಮೂಲ್ಯವಾದ ಯೋಜನೆಯನ್ನು ಎಲ್ಲರ ಮುಂದಿಟ್ಟಿದ್ದಾರೆ. ಜಿಲ್ಲಾ ಪರಿಷತ್ತುಗಳು ಈಗ ಸಕ್ರಿಯವಾಗಿರುವುದರಿಂದ ಈ ಯೋಜನೆ ಹಲವು ಜಾನಪದ ಜೀವಗಳಿಗೆ ಬೆಳಕಾಗಬಹುದು.

ಜಿಲ್ಲಾ ಪರಿಷತ್ತುಗಳು ಕನಿಷ್ಠ 25 ಕೋಟಿ ರೂಪಾಯಿಗಳನ್ನು ಜನರ ಕಲ್ಯಾಣಕ್ಕಾಗಿ ಬಳಸುತ್ತಿದೆ. ಈ ಹಣದ ಶೇ 1 ರಷ್ಟನ್ನು ಜಿಲ್ಲೆಯ ಕಲಾವಿದರಿಗಾಗಿ ಮೀಸಲಿಡಬೇಕು. ಅಂದರೆ 25 ಲಕ್ಷ ರೂಪಾಯಿ 20 ಜಿಲ್ಲೆಗಳಿಂದ ಎರಡು ಕೋಟಿ ರೂಪಾಯಿ. ಇದರ ಜೊತೆಗೆ ಸರ್ಕಾರ ಒಂದು ಕೋಟಿ ರೂಪಾಯಿ ನೀಡಲೇಬೇಕು. ಆಗ ಸಿಕ್ಕುವ ಮೂರು ಕೋಟಿರೂಪಾಯಿಗಳಿಗೆ 30 ಲಕ್ಷ ರೂಪಾಯಿ ಬಡ್ಡಿ ಬರುತ್ತದೆ, ಈ ಬಡ್ಡಿ ಹಣವನ್ನು ಸರ್ಕಾರ ಬಡ ಕಲಾವಿದರಿಗೆ ಮಾಸಾಶನ ನೀಡಲೆಂದೇ ಮೀಸಲಿಡಬೇಕು. ತಿಂಗಳಿಗೆ 300 ರೂಪಾಯಿ ನಂತೆ 30 ಲಕ್ಷ ರೂಪಾಯಿಗಳಿಂದ 830 ಜನರಿಗೆ ನಿಯತವಾಗಿ ಮಾಸಾಶನ ನೀಡಬಹುದು. ಬಂಡವಾಳದ ಹಣ ಹಾಗೇ ಇರುತ್ತದೆ, ಇದು ನಾಗೇಗೌಡರು ಮುಂದಿಟ್ಟಿರುವ ಸೂತ್ರ.

ಅಂತೆಯೇ ಜಿ. ಶಂ. ಪರಮಶಿವಯ್ಯನವರು ಜಾನಪದ ಸಂರಕ್ಷಣೆ ಹಾಗೂ ಸಂವರ್ಧನೆಯ ದೃಷ್ಟಿಯಿಂದ ಜಾನಪದ ಅಧ್ಯಯನ ಸಂಸ್ಥೆ ತೆರೆಯಬೇಕು ಎಂದಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ, ಮಂಡಲಗಳಲ್ಲಿ ಜಾನಪದವನ್ನು ವಿಶೇಷವಾಗಿ ಅಧ್ಯಯನ ಮಾಡಿದವರು ಇರಬೇಕು ಎನ್ನುತ್ತಾರೆ.

ಈ ಎಲ್ಲವೂ ಸರ್ಕಾರ ತಕ್ಷಣವೇ ಯೋಚಿಸಬೇಕಾದ ಕಾರ್ಯಗಳು. ಮೂರ್ನಾಲ್ಕು ವರ್ಷಗಳಿಂದ ನಿಂತುಹೋಗಿರುವ ಗೌರವಧನ, ಮಾಸಾಶನ ಯೋಜನೆ ಕೂಡಲೇ ಆರಂಭವಾದಲ್ಲಿ ಜಾನಪದ ಬದುಕಲ್ಲಿ ಹೊಸ ಗಾಳಿ ಬೀಸಲು ಅವಕಾಶ ಮಾಡಿ

ಕೊಟ್ಟಂತಾಗುತ್ತದೆ. ಆಗ ಗೆಜ್ಜೆಗಳು ಮಾತನಾಡಲು ತೊಡಗುತ್ತವೆ.

ಆಡುವಾಗ ಇಕ್ಕುವಾಗ ಅಡವಿಯೆಲ್ಲ ನೆಂಟರು
ಅಡವಿ ಸೊಪ್ಪು ಮೆಲ್ಲುವಾಗ। ನೆಂಟರು ಗುರುತು
ಮರೆತಾರೋ –

ಎನ್ನುತ್ತದೆ ಜಾನಪದ. ಅಂತೆಯೇ ಸರ್ಕಾರ ಗುರುತು ಮರೆತ ನೆಂಟನಾಗಬಾರದು.

* *   * *   * *

'ಗೆಜ್ಜೆ ಮಾತಾಡುತಾವೆ' ಒಂದು ರೀತಿಯಲ್ಲಿ ಜಾನಪದ ಜೀವಗಳನ್ನು ಅರಿಯಲು ಅಕಾಡೆಮಿ ಕಾಡು–ಕಣಿವೆ, ಬೆಟ್ಟ–ಗುಡ್ಡ ಏರಿ ಬಂದ ಕಥೆ ಎನ್ನಬಹುದು. ಮುಖ್ಯವಾಗಿ ಇಲ್ಲಿನ ಲೇಖನಗಳು ಮಾತನಾಡುವುದು ವಿಚಿತ್ರ ಸ್ಥಿತಿಯಲ್ಲಿ ಬದುಕುತ್ತಿರುವ, ಹಲವೆಡೆ ಚೆಲ್ಲಾಪಿಲ್ಲಿಯಾಗಿರುವ ಜಾನಪದರ ಬಗ್ಗೆ.

ಲಿಂಗನಮಕ್ಕಿ ಜಲಾಶಯ ಯೋಜನೆಯಿಂದ ಮುಳುಗಡೆಯಾದ ಹಲವು ಜಮೀನುಗಳಲ್ಲಿ ಕೂಲಿ ಮಾಡುತ್ತಿದ್ದ ಕುಣಬಿಯರು ಬೀದಿಗೆ ಬಿದ್ದು ಬದುಕು ಹೊರೆಯಲು ಊಹಿಸಲೂ ಆಗದಷ್ಟು ಎತ್ತರ ಏರಿದ್ದು, ಅಲ್ಲಿ ಸೈಕಲ್ ಸಹಾ ಕಂಡರಿಯದ ಒಂದು ಹೋಳಿಗೆ ಈಗಲೂ ಇರುವುದು, ಕುಡುಗುಂಜಿಯಲ್ಲಿರುವ ಹಸಲರು ಬೈನೆ ಮರದ ಪುಡಿ ತಿಂದು ದಿನ ದೂಡುತ್ತಿರುವುದು ಇದೆಲ್ಲವನ್ನೂ ಬಣ್ಣಿಸುತ್ತಲೇ ಈ ಎಲ್ಲ ಜನಪದರ ಸಂಪದ್ಭರಿತ ಜಾನಪದ ಬದುಕನ್ನು ಈ ಲೇಖನಗಳು ಬಿಚ್ಚಿಡುತ್ತವೆ.

ಈ ಪುಸ್ತಕ ಸಂಪಾದಿಸುವಾಗ ಹಲವು–ಹತ್ತು ಪತ್ರಿಕೆಗಳಲ್ಲಿ ಬಂದ ಎಲ್ಲಾ ಲೇಖನ, ವರದಿಗಳನ್ನು ಗಮನಕ್ಕೆ ತಂದುಕೊಳ್ಳಲಾಗಿದೆ. ಆದರೆ ಕೆಲವೊಂದು ಪತ್ರಿಕೆಗಳು ಸಿಕ್ಕದೇ ಹೋಗಿರಬಹುದು. ಸಿಕ್ಕ ಪತ್ರಿಕೆಗಳಲ್ಲಿ ಇದ್ದ ಲೇಖನಗಳೂ ಹಲವಷ್ಟು. ಸ್ಥಳದ ಅಭಾವವಿದ್ದುದರಿಂದ ಲೇಖನಗಳ ಬದಲು ವರದಿಗಳಿಂದ ಅಕಾಡೆಮಿಯ ಕಾರ್ಯ ಚಟುವಟಿಕೆಯ ಚಿತ್ರಣ ನೀಡಲು ಇಲ್ಲಿ ಪ್ರಯತ್ನಿಸಲಾಗಿದೆ.

ಆಯ್ದ ಲೇಖನಗಳನ್ನು ಐದು ಭಾಗಗಳಾಗಿ ಇಲ್ಲಿ ವಿಂಗಡಿಸಲಾಗಿದೆ. ಎಲ್ಲದರ ಹಿಂದಿನ ಏಕಸೂತ್ರ ಅಕಾಡೆಮಿ ಚಟುವಟಿಕೆಗಳೇ ಆದರೂ ಅದನ್ನು ಸ್ಥಳ ಪರಿಚಯ, ಮೇಳ–ಕಮ್ಮಟ, ಪ್ರಶಸ್ತಿ ಸಮಾರಂಭ, ಪತ್ರಿಕಾವರದಿ, ಆಂಗ್ಲ ಲೇಖನಗಳೆಂದು ವಿಂಗಡಿಸಲಾಗಿದೆ. ಅಕಾಡೆಮಿಯ ಒಟ್ಟು ಕಾರ್ಯವನ್ನು ಒಂದೆಡೆ ಇಡುವ ಪ್ರಯತ್ನ ಈ ಪುಸ್ತಕದಲ್ಲಿದೆ. ಈ ಕಾರ್ಯವನ್ನು ಅವಲೋಕಿಸಿ, ವಿಮರ್ಶಿಸಿ, ಕಲಾವಿದರನ್ನು ಮುಟ್ಟುವಲ್ಲಿ, ಅವರ ಬದುಕಿಗೆ ಆಸರೆ ನೀಡುವಲ್ಲಿ ಮತ್ತಷ್ಟು ರೀತಿಯ ಹೊಸ ಯೋಜನೆಗಳನ್ನು ಅಕಾಡೆಮಿ ಹಮ್ಮಿಕೊಳ್ಳುವಂತಾಗಲಿ ಎನ್ನುವುದು ಈ ಪುಸ್ತಕದ ಮುಖ್ಯ ಆಶಯ.

ಈ ಪುಸ್ತಕ ಹೊಸ ರೀತಿಯದಾದ್ದರಿಂದ ಹಲವಾರು ಏರುಪೇರುಗಳಿರುವ ಸಾಧ್ಯತೆಯೂ ಇದೆ. ಈ ಪುಸ್ತಕದ ಆಶಯದ ಹಿಂದೆ ಇದು ಮುಚ್ಚಿಹೋಗುತ್ತದೆ ಎನ್ನುವುದು ನಮ್ಮ ನಂಬುಗೆ. ಈ ಪುಸ್ತಕದ ಸಂಪಾದನೆಯ ಕಾರ್ಯವನ್ನು ನನಗೆ ವಹಿಸಿಕೊಟ್ಟ ಅಕಾಡೆಮಿಯ ಎಲ್ಲ ಸದಸ್ಯರುಗಳಿಗೆ, ಅಧ್ಯಕ್ಷ ಡಾ. ಎಸ್.ಕೆ. ಕರೀಂಖಾನ್, ರಿಜಿಸ್ಟ್ರಾರ್ ಹಿ.ಚಿ. ಬೋರಲಿಂಗಯ್ಯ, ಅಪೂರ್ವ ಛಾಯಾಚಿತ್ರಗಳನ್ನು ಒದಗಿಸಿದ ವಿ. ಶ್ರೀನಿವಾಸಮೂರ್ತಿಗೆ, ಉತ್ತಮ ಮುಖಪುಟ ರಚಿಸಿದ ಕಲಾವಿದ ರಾ.ಸೂರಿಗೆ, ಶೀಘ್ರದಲ್ಲಿ ಮುದ್ರಿಸಿದ ರಶ್ಮಿ ಟೈಪೋಸೆಟ್‌ನ ರಾಮಕೃಷ್ಣ ನಾಯ್ಡುವಿಗೆ ವಂದನೆಗಳು.

ಶ್ರಾವಣ' 90 **ಜಿ. ಎನ್. ಮೋಹನ್**



'ಗೆಜ್ಜೆ ಮಾತಾಡುತಾವೆ' ಪುಸ್ತಕದಲ್ಲಿ ಲೇಖನಗಳ ಜೊತೆ ಪ್ರಕಟವಾಗಿರುವ ಛಾಯಾಚಿತ್ರಗಳು ಸರಿಸುಮಾರು ಅದೇ ಲೇಖನಗಳದ್ದಾದರೂ ಸಹ ಕೆಲವು ಲೇಖನಗಳಿಗೆ ಬೇರೆ ಚಿತ್ರಗಳನ್ನೂ ಬಳಸಿಕೊಳ್ಳಲಾಗಿದೆ.

— ಸಂ

ಕುಡುಗುಂಜಿ : ಪರಿಸರ ಮನೋಹರ ಬದುಕು ವಿಕ್ಷಿಪ್ತ

ಹಿ. ಚಿ. ಬೋರಲಿಂಗಯ್ಯ

ಕುಡುಗುಂಜಿಯನ್ನು ಹಸಲರ ದ್ವೀಪ ಎಂದೇ ಅನ್ನಬಹುದು. ಕಣ್ಣು ಹಾಯಿಸುವವರೆಗೂ ಕಾಣುವ ನೀರಿನ ರಾಶಿಯ ಒಡಲ ಗಡ್ಡೆಯಲ್ಲಿ ಮನೆ ಮಾಡಿರುವ ಇವರ ಬದುಕು ಹಲವು ಬುಡಕಟ್ಟು ಜನಾಂಗಗಳ ಸ್ಥಿತಿಯನ್ನು ಸಾರಿ ಹೇಳುತ್ತದೆ. ಹತ್ತಾರು ಕಡೆ ಹರಿದು ಹಂಚಿ ಹೋಗಿರುವ ಹಸಲರು ಸಾಂಸ್ಕೃತಿಕವಾಗಿಯೂ ತಮ್ಮದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲಾಗಿಲ್ಲ.


ಸಾಪ್ತಾಹಿಕ ಪುರವಣಿ

9-7-1989

ಕುದುಗುಂಜಿ ಪರಿಸರ ಮನೋಹರ, ಬದುಕು ವಿಕ್ಷಿಪ್ತ

ಹಿ. ಚಿ. ಬೋರಲಿಂಗಯ್ಯ

ಇದೋ ನಿಮಗೊಂದು ಸೌಲಭ್ಯ

ಜ್ಯುಯೆಲ್ಸ್ ಡಿ ಪ್ಯಾರಗಾನ್

'ತೂಕಕ್ಕೆ ಬದಲು ತೂಕ' ವಿನಿಮಯ

9, ಜುಲೈ, 1989

ಕಣ್ಣು ಹಾಯಿಸುವವರೆಗೂ ನೀರಿನ ರಾಶಿ. ತಿಳಿ ನೀಲ ಸರೋವರದಲ್ಲಿ ಸಣ್ಣ ಅಲೆಗಳು ನಿರಂತರವಾಗಿ ದಡ ಮುಟ್ಟುತ್ತಿದ್ದವು. ಕಣ್ಣು ಸೋಲುವವರೆಗೂ ಹರಡಿಕೊಂಡಿದ್ದ ನೀರಿನ ಮಧ್ಯೆ ಸೆಡ್ಡು ಹೊಡೆದು ನಿಂತ ಪುಟ್ಟ ಪುಟ್ಟ ಗಡ್ಡೆಗಳು. ಗಡ್ಡೆಯ ಒಡಲೊಳಗೆ ಆಕಾಶದ ನೆತ್ತಿಗೆ ಮುತ್ತಿಕ್ಕುತ್ತಾವೇನೋ ಎಂಬ ಸಂಭ್ರಮದಲ್ಲಿ ತೂಗಿ ತೊನೆಯುತ್ತಿರುವ ಅಡಿಕೆ ಮರಗಳು. ಮುಂಜಾವಿನ ಹೊಂಬೆಳಕಲ್ಲಿ ಗಡ್ಡೆಯಿಂದ ಗಡ್ಡೆಗೆ ಹಾರುವ ಸಾಲು ಸಾಲು ಹಕ್ಕಿಗಳು.

ತಲಕಳಲೆ ಸರೋವರದ ದಡದಲ್ಲಿ ನಿಂತು ಪ್ರಕೃತಿಯನ್ನು ಕಣ್ಣಿಗೆ ತುಂಬಿಕೊಳ್ಳುತ್ತಿದ್ದಾಗಲೇ 'ಹೋಯ್, ಹೋಯ್' ದನಿ ಕೇಳಿಬಂತು. ಸುತ್ತ ಎಷ್ಟು ದೂರ ನೋಟ ಹರಿಸಿದರೂ ಜನರಿಲ್ಲದ ಈ ಜಾಗದಲ್ಲಿ ದನಿ ಬಂದದ್ದು ಎಲ್ಲಿಂದ ಎಂಬುದು ಯಕ್ಷ ಪ್ರಶ್ನೆ. ಮತ್ತೆ ಯಾರೋ ಕೂಗಿದ ಸದ್ದು. ಸದ್ದು ಬಂದದ್ದು ನಡುಗಡ್ಡೆಯ ಒಡಲಿಂದ. ನಂಬಲೂ ಸಾಧ್ಯವಾಗದ ಮಾತು. ನಡುಗಡ್ಡೆಯಲ್ಲಿ ಎಲ್ಲಾದರೂ ಜನರಿರುತ್ತಾರೆಯೆ? 'ಇರುತ್ತಾರೆ' ಎಂದ ನಮ್ಮೊಡನಿದ್ದ ಹಸಲರ ರಾಮಪ್ಪ.

ಶರಾವತಿಗೆ ನಿರ್ಮಿಸಲಾಗಿರುವ ಎರಡು ಅಣೆಕಟ್ಟುಗಳಲ್ಲಿ ತಲಕಳಲೆ ಸರೋವರ ವಿಶಿಷ್ಟ ರೀತಿಯದು. ಕಾರ್ಗಲ್‌ನಿಂದ ಪಶ್ಚಿಮಕ್ಕೆ ನಾಲ್ಕಾರು ಕಿಲೋಮೀಟರುಗಳ ದೂರದಲ್ಲಿ ದಟ್ಟ ಕಾಡಿನ ನಡುವಿನ ಕೋವುಗಳಲ್ಲಿ ಹತ್ತಾರು ಮೈಲಿ ತುಂಬಿ ತುಳುಕುವ ಈ ಸರೋವರ ಕರ್ನಾಟಕದ ಯಾವುದೇ ಸರೋವರಕ್ಕೂ ಮಿಗಿಲಾದದ್ದು. ಈ ಸರೋವರ ಸಹ್ಯಾದ್ರಿ ಕಣಿವೆ–ಕಂದರಗಳಲ್ಲಿ ತುಂಬಿಕೊಂಡು, ಮೈಲಿಗಟ್ಟಲೆ ಚಾಚಿಕೊಂಡು ಹತ್ತಾರು ಗುಡ್ಡಗಳನ್ನು ತನ್ನ ಗರ್ಭದಲ್ಲಿರಿಸಿಕೊಂಡಿರುವುದು ಅತ್ಯಂತ ಸೋಜಿಗದ ಸಂಗತಿ.

ಈ ತಲಕಳಲೆ ಸರೋವರದ ಒಂದು ನಡುಗಡ್ಡೆಯೇ ಕುಡುಗುಂಜಿ. ಕುಡುಗುಂಜಿ ಒಂದು ರೀತಿಯ ವಿಶಿಷ್ಟ ಪ್ರಪಂಚ ಎಂದೇ ಹೇಳಬಹುದು. ತನ್ನದೇ ರೀತಿಯ ಬದುಕನ್ನು ಹೊಂದಿರುವ ಕುಡುಗುಂಜಿಗೆ ಹೋಗಬೇಕೆಂದರೆ ದೋಣಿ ಮಾತ್ರದಿಂದಲೇ ಸಾಧ್ಯ. ಈ ದೋಣಿಯೇ ನಾಗರೀಕತೆಗೂ, ವಿಶಿಷ್ಟ ಪ್ರಪಂಚಕ್ಕೂ ಕೊಂಡಿ.

ರಕ್ಷಿತ ಪ್ರದೇಶ

ತಲಕಳಲೆ ಅಣೆಕಟ್ಟಿನ ವ್ಯಾಪ್ತಿ ರಕ್ಷಿತ ಪ್ರದೇಶವಾದ್ದರಿಂದ ಹಾಗೂ ಶರಾವತಿ ವಿದ್ಯುತ್ ಯೋಜನೆಯ ಮುಖ್ಯ ನೆಲೆ ಇದೇ ಆದ್ದರಿಂದ ಯಾರೆಂದರೆ ಅವರು ದೋಣಿ ಪಯಣ ಮಾಡುವಂತೆಯೂ ಇಲ್ಲ. ಅಲ್ಲದೆ ಗಣೇಶನ ಹಬ್ಬದ ವೇಳೆ ಲಿಂಗನಮಕ್ಕಿ ಅಣೆಕಟ್ಟೆನಲ್ಲಿ ಗಣೇಶನನ್ನು ವಿಸರ್ಜಿಸಲು ಹೋದ ಹತ್ತು ಜನ ನೀರು ಪಾಲಾದ ನೆನಪು ಇನ್ನೂ ಹಸಿರಾಗಿತ್ತು. ಆದರೂ ಕುಡುಗುಂಜಿ ಎಂಬ ಪ್ರಪಂಚದ ಆಕರ್ಷಣೆ ನಮ್ಮನ್ನು ಬಿಡಲಿಲ್ಲ. ಅಲ್ಲಿನ ಅಧಿಕಾರಿಗಳಿಗೆ ನಮ್ಮ ಉತ್ಸಾಹದ ಬಗ್ಗೆ ದೊಡ್ಡ ಪಟ್ಟಿಯನ್ನೇ ನೀಡಿದ ನಂತರ ಅರೆಮನಸ್ಸಿನ ಒಪ್ಪಿಗೆ ದೊರೆಯಿತು. ಹತ್ತು–ಹನ್ನೆರಡು ಜನ ಕೂಡಬಹುದಾದ ಪುಟ್ಟ ದೋಣಿಯಲ್ಲಿ ನಾವು ಕೂರುತ್ತಿದ್ದಂತೆ ಅಲ್ಲೇ ನಿಂತಿದ್ದ ನಾಲ್ಕು ನಾಯಿಗಳು ಛಂಗನೆ ನೆಗೆದು ದೋಣಿಯಲ್ಲಿ ಕುಳಿತವು. ದೋಣಿಗೆ ಹುಟ್ಟು ಹಾಕತೊಡಗಿದಂತೆ ದೋಣಿ ನಿಧಾನವಾಗಿ ಮುಂದೆ ಚಲಿಸಿತು. ಅಲ್ಲಿಯವರೆಗೆ ನಮಗೆ ಗೋಚರವಾಗದಿದ್ದ ಗಾಳಿ ಸುಯ್ಯೋ ಎಂದು ಬೀಸತೊಡಗಿತು. ಗಾಳಿಯ ರಭಸಕ್ಕೆ ದೋಣಿ ಹೊರಳಾಡತೊಡಗಿದಾಗ ಲಿಂಗನಮಕ್ಕಿಯಲ್ಲಿ ನೀರು ಪಾಲಾದವರ ನೆನಪು ನಡುಕ ಹುಟ್ಟಿಸಿತು.

ತಲಕಳಲೆ ಸರೋವರದ ಒಂದು ನಡುಗಡ್ಡೆಯೇ ಕುಡುಗುಂಜಿ. ಐದು ಕಿಲೋಮೀಟರ್ ನೀರಿನಲ್ಲಿ ಪಯಣಿಸಿ ನಂತರ ಕಾಣಿಸಿಕೊಳ್ಳುವ ಈ ಭೂ ಪ್ರದೇಶ ಗಿರಿ–ಕಣಿವೆಗಳಿಂದ, ತೂಗುವ ಕಂಗಿನಿಂದ, ಹಚ್ಚ ಹಸಿರ ಗದ್ದೆಗಳಿಂದ ನೋಡಲು ನಯನ ಮನೋಹರವಾದರೂ ನಾಗರಿಕ ಸೌಕರ್ಯಗಳಿಂದ ವಂಚಿತರಾದ ಇಲ್ಲಿನ ಜನರ ಬದುಕು ಅಷ್ಟೇ ವರ್ಣರಂಜಿತವಲ್ಲ.

ಪಯಣ ಸಾಗಿದಂತೆ ಗಾಳಿಯ ರಭಸ ಕಡಿಮೆಯಾಯಿತು. ದೂರದಲ್ಲಿ ಕಾಣುತ್ತಿದ್ದ ನಡುಗಡ್ಡೆಗಳು ಈಗ ಹತ್ತಿರವಾಗುತ್ತಿದ್ದವು. ಪ್ರತಿ ಗಡ್ಡೆಯೂ ಒಂದು ವಿಸ್ಮಯ ಲೋಕ. ಆಕಾಶಕ್ಕೆ ಬೆಳೆದು ನಿಂತ ವಿವಿಧ ಜಾತಿಯ ವೃಕ್ಷ ಸಂಕುಲ, ಬಿಳಲು ಬಿದ್ದ ಬಳ್ಳಿ, ಹರಡಿದ ಪೊದೆ ಆ ನಿಗೂಢತೆಯನ್ನು ಭೇದಿಸಿ ಯಾರಾದರೂ ಒಳಹೋಗಿರಬಹುದೆ? ನಮ್ಮೊಂದಿಗಿದ್ದ ದ್ವೀಪದ ಹನುಮಪ್ಪ ತಕ್ಷಣವೇ ಪ್ರತಿಕ್ರಿಯಿಸಿದ. 'ನಮ್ ಬಾಳೇ ಇಲ್ಲಿ ಸ್ವಾಮಿ, ದಿನಬೆಳಗು ತುಳಿಯೋ ಭೂಮ್ಯೇ ಇದು'. ಹಾವು, ಹಲ್ಲಿ, ಹಕ್ಕಿ, ಪಕ್ಷಿ ಬಿಟ್ಟು ಈ ಗಡ್ಡೆಗಳಲ್ಲಿ ಬೇರೆ ಪ್ರಾಣಿಗಳಂತೂ ಇರಲು ಸಾಧ್ಯವಿಲ್ಲ. ಆದರೂ ನಾವು ಪ್ರಯಾಣ ಆರಂಭಿಸಿದ ಸ್ವಲ್ಪ ಹೊತ್ತಿನಲ್ಲೇ ನೋಡುನೋಡುತ್ತಿದ್ದಂತೆಯೇ ಕಡವೆಯೊಂದು ನಮ್ಮ ಹಿಂದಿನ ಗುಡ್ಡದಿಂದ ನೀರಿಗೆ ಧುಮುಕಿತು. ಗಾಬರಿಯಲ್ಲಿ ಈಜತೊಡಗಿದ ಕಡವೆಯನ್ನು ಅಲ್ಲೇ ಇದ್ದ ಅಣೆಕಟ್ಟು ರಿಪೇರಿ

ಮಾಡುತ್ತಿದ್ದ ಕೆಲಸಗಾರರು ಕೆಲವರು ಹಿಡಿಯಲು ಪ್ರಯತ್ನಿಸಿದರು. ನೀರಿಗೆ ಬಿದ್ದು ಅದನ್ನು ರಕ್ಷಿಸುವಷ್ಟರಲ್ಲಿ ಕಡವೆ ವೇಗವಾಗಿ ಈಜತೊಡಗಿತು. ಬಹುಶಃ ಹುಲಿ ಅಟ್ಟಿಸಿಕೊಂಡು ಬಂದಿದ್ದರಿಂದ ಅದು ವಿಧಿಯಿಲ್ಲದೆ ನೀರಿಗೆ ಬಿದ್ದಿದೆ ಎಂದ ಹನುಮಪ್ಪ. ಈಜುತ್ತಾ ಈಜುತ್ತಾ ಕಡವೆ ದೂರವಾಗುತ್ತಿದ್ದಂತೆ ನಮ್ಮ ದೋಣಿ ಮತ್ತೊಂದು ಕಡೆ ಸಾಗಿ ಕಡವೆ ಕಾಣದಂತಾಯಿತು.

ಮನೋಹರ ಕಣಿವೆ

ಸುಮಾರು ಐದು ಕಿ.ಮೀ. ನೀರಿನಲ್ಲಿ ಸಾಗಿದ ನಮಗೆ ದೂರದಲ್ಲಿ ಭೂಪ್ರದೇಶ ಗೋಚರವಾಯಿತು. ಅದು ನಡುಗಡ್ಡೆಯಂತೆ ಕಾಣುತ್ತಿರಲಿಲ್ಲ. ಮಸುಕಾಗಿ ಕಂಡ ಅಡಕೆ ತೋಟ ಜನವಸತಿಯ ಇರುವನ್ನು ಸ್ಪಷ್ಟಪಡಿಸಿತು. ರಾಮಪ್ಪ ಕೈ ತೋರಿಸುತ್ತಾ ಹೇಳಿದ, "ಅದೇ ನಮ್ಮ ಕುಡುಗುಂಜಿ''. ಇದು ಜನವಸತಿಯ ವಿಶಾಲ ಗಡ್ಡೆಯಾದ್ದರಿಂದ ಸಹಜವಾಗಿಯೇ ದಟ್ಟ ಕಾಡೂ ಇರಲಿಲ್ಲ. ದಡದಲ್ಲಿ ಇಳಿದು ಸಣ್ಣ ಗುಡ್ಡವನ್ನು ಏರತೊಡಗಿದಂತೆ ದಾರಿಯ ಪಕ್ಕದ ಜುಳು ಜುಳು ಹರಿಯುವ ಸಣ್ಣ ಹೊಳೆ ನಮ್ಮ ಜೊತೆಗೇ ಇತ್ತು. ಸುಮಾರು 500 ಅಡಿಯ ಗುಡ್ಡವೇರಿ ಮೇಲೆ ಹೋಗುತ್ತಿದ್ದಂತೆ ಅಲ್ಲೊಂದು ಮನೋಹರ ಕಣಿವೆ. ಹಚ್ಚಹಸುರಿನ ಬತ್ತ ಗದ್ದೆಗಳು, ಹುಲುಸಾದ ಅಡಿಕೆ ತೋಟ, ಅಡಿಕೆ ಮರಗಳ ಮಧ್ಯೆ ತಲೆಯೆತ್ತಿರುವ ಭಟ್ಟರ ಮನೆ. ಸ್ವಲ್ಪ ದೂರದಲ್ಲಿ ಮತ್ತೊಂದು ಗುಡ್ಡದ ಬುಡದಲ್ಲಿ ಮಕ್ಕಳ ಆಟಿಕೆಯ ಸಾಮಾನುಗಳಂತೆ ಜೋಡಿಸಿಟ್ಟ ಪುಟ್ಟ ಪುಟ್ಟ ಹತ್ತು ಹದಿನೈದು ಗುಡಿಸಲುಗಳು, ಹಸಲರ ಗುಡಿಸಲ ಅಂಗಳಕ್ಕೆ ಕಾಲಿಟ್ಟಾಗ ಇಡೀ ಹಾಡಿಯ ಹುಡುಗರು ಬಂದು ಮುತ್ತಿಕೊಂಡರು. ಗುಡಿಸಲ ಮುಂದಿನ ವಿಶಾಲ ಅಂಗಳಗಳು ಕನ್ನಡಿಯಂತೆ ಹೊಳೆಯುತ್ತಿದ್ದವು.

ಕುಡುಗುಂಜಿಯನ್ನು ಹಸಲರ ದ್ವೀಪ ಎಂದೇ ಎನ್ನಬಹುದು. ಸಾಗರ, ಸಿರ್ಸಿ, ಸಿದ್ಧಾಪುರ, ಯಲ್ಲಾಪುರ ಮುಂತಾದ ತಾಲ್ಲೂಕುಗಳಲ್ಲಿ ಹಸಲರು ಇದ್ದಾರೆ. ಸಾಗರ ತಾಲ್ಲೂಕಿನ ಕಾನ್ ತೋಟ, ಬಚಗಾರು, ತಲವಾಟ, ಹಿರೇಮನೆಗಳಲ್ಲಿರುವ ಹಸಲರು ಈಗಾಗಲೇ ಆಧುನಿಕ ಜೀವನದತ್ತ ವಾಲುತ್ತಿದ್ದಾರೆ.

ಹಸಲರು ಹಸುಳೆಗಳಂತೆ. ಹಸಲರ ಮುಗ್ಧತೆ ಕಂಡು ಎಲ್ಲರೂ ಇವರನ್ನು ಹಸುಳೆಗಳೆಂದೇ ಕರೆಯುತ್ತಿದ್ದರು. ಕೊನೆಗೆ ಹಸುಳೆ ಎಂಬುದೇ ಹಸಲ ಎಂದು ಬದಲಾಯಿತು. ಹಸಲರ ಮುಖ್ಯ ವೃತ್ತಿಯೇ ತೋಟಗಳಲ್ಲಿ ದುಡಿಯುವುದು. ಹಸಲರು ಅತ್ಯಂತ ಗಟ್ಟಿಮುಟ್ಟಾದ್ದರಿಂದ ದುಡಿಮೆಯೇ ಇವರ ಬಂಡವಾಳ.

ಮುಳುಗಡೆಯಾದಾಗ....

ತಲಕಳೆಯ ಯೋಜನೆಯಡಿ ಭೂಮಿ ಮುಳುಗಡೆಯಾದಾಗ ಹಸಲರು ಕುಡುಗುಂಜಿ ಸೇರಿದರು. ಸುಮಾರು 150 ಜನಸಂಖ್ಯೆ ಇರಬಹುದಾದ ಕುಡುಗುಂಜಿ ಪ್ರಾಕೃತಿಕವಾಗಿ ತುಂಬಾ ಸುಂದರವಾಗಿದ್ದರೂ, ಅಲ್ಲಿಯ ಜೀವನ ಮಾತ್ರ ಹೃದಯ ವಿದ್ರಾವಕ. ಹಸಿರು ತುಂಬಿ ತೊನೆದಾಡುವ ದ್ವೀಪದ ಹಸಲರಲ್ಲಿ ಗಿರಿಜನರ ಸಮೃದ್ಧ ಕಳೆಯೇ ಇಲ್ಲ.

ಊರಿನಲ್ಲಿರುವ ಏಕೈಕ ಒಡೆಯರ ಮನೆಗೆ ಕೂಲಿ ಕೆಲಸಕ್ಕೆ ಹೋಗುವ ಹಸಲರಿಗೆ ವರ್ಷದಲ್ಲಿ ಏಳು ತಿಂಗಳು ಮಾತ್ರ ಕೆಲಸ ಗಟ್ಟಿ. ಬಹುಪಾಲು ಆಸ್ತಿಯೆಲ್ಲಾ ತಲಕಳಲೆ ಯೋಜನೆಯಲ್ಲಿ ಮುಳುಗಿಹೋದ ನಂತರ ಒಡೆಯರೂ ಸೊರಗಿದ್ದಾರೆ. ದಿನಕ್ಕೆ ಕೇವಲ ಮೂರು ರೂಪಾಯಿ ಕೂಲಿ ಪಡೆಯುವ ಗಂಡಸರಿಗೆ ಅದು 'ಗುಡಾಣದ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ'ಯಂತೆ. ಕೂಲಿ ಇಲ್ಲದಾಗ ಕುಡುಗುಂಜಿಯ ಪಾಡು ಹೇಳತೀರದು. ಹಿಂದೆ ಎಂಟತ್ತು ವರ್ಷ ಒಮ್ಮೆಲೆ ಬರಬಂದಾಗ ನಮ್ಮ ಬಯಲುಸೀಮೆಯ ಜನ ಬದುಕುವುದಕ್ಕಾಗಿ ಮುಳ್ಳಿನ ಕತ್ತಾಳೆ ಗಡ್ಡೆ

ಆಗೆದು, ತೆಗೆದು, ಅದರ ಒಳಭಾಗದ ತಿರುಳನ್ನು ಕತ್ತರಿಸಿ, ಬೇಯಿಸಿ ತಿಂದು ಜೀವ ಉಳಿಸಿಕೊಂಡಿದ್ದರಂತೆ. ಆದರೆ ಇಲ್ಲಿನ ಬದುಕು ಇನ್ನೂ ಕಡೆಯಾಗಿದೆ.

ಕುಡುಗುಂಜಿ ಮತ್ತು ಅದರ ಸುತ್ತಲ ದ್ವೀಪಗಳಲ್ಲಿ ಬೇಕಾದಷ್ಟು ಬೈನೆ ಮರಗಳಿವೆ. ಬೈನೆಯನ್ನು ಸಾಮಾನ್ಯವಾಗಿ ಹೆಂಡ ಇಳಿಸಲು ಉಪಯೋಗಿಸುತ್ತಾರೆ. ಆದರೆ ಈ ಜನ ಆ ಮರದ ಚಕ್ಕೆಯನ್ನೇ ಆಹಾರವಾಗಿ ಉಪಯೋಗಿಸುತ್ತಾರೆ. ಬುಡದಪ್ಪ ಇರುವ ಬೈನೆ ಮರದ ಕಾಂಡವನ್ನು ಕತ್ತರಿಸಿ, ಈಚೆ ತೆಗೆದು ನೀರಿಗೆ ಹಾಕುತ್ತಾರೆ. ಅದು ಸುಮಾರು ಹದಿನೈದು ದಿನ ಅಥವಾ ತಿಂಗಳು ನೀರಿನಲ್ಲಿ ಕೊಳೆತ ಮೇಲೆ ಈಚೆ ತೆಗೆದು ಒಣಗಿಸುತ್ತಾರೆ. ಮರ ಚೆನ್ನಾಗಿ ಒಣಗಿ, ಬೆಂಡಾದ ನಂತರ ಚೂರು ಮಾಡುತ್ತಾರೆ. ಒರಳಲ್ಲಿ ಕುಟ್ಟಿ ಪುಡಿ ಮಾಡಿ ಹಿಟ್ಟನ್ನು ಸಂಗ್ರಹಿಸುತ್ತಾರೆ. ಈ ಹಿಟ್ಟು ನೋಡಲು ಸುಣ್ಣದ ಪುಡಿಯಂತೆ ಕಾಣುತ್ತದೆ. ಕುದಿಯುವ ನೀರಿಗೆ ಈ ಹಿಟ್ಟು ಹಾಕಿ ತಿರುಗಿಸಿ ಗಂಜಿ ತಯಾರು ಮಾಡುತ್ತಾರೆ. ಕೂಲಿ ಹುಟ್ಟದಾದಾಗ ಹಸಲರು ಕಂಡುಕೊಂಡಿರುವ ಪರ್ಯಾಯ ಮಾರ್ಗ ಇದು. ಆದರೆ ಆ ಗಂಜಿ ದೇಹಕ್ಕೆ ಬಲ ನೀಡುವುದಿಲ್ಲ ಎಂದೂ ಅವರೇ ಒಪ್ಪಿಕೊಳ್ಳುತ್ತಾರೆ. ಹಸಿವನ್ನು ತತ್ಕಾಲಕ್ಕೆ ಹಿಂಗಿಸಿಕೊಳ್ಳುವುದಕ್ಕೆ, ಪ್ರಾಣ ಹಿಡಿದಿಟ್ಟುಕೊಳ್ಳುವುದಕ್ಕೆ ಈ ವಿಚಿತ್ರ ಗಂಜಿ ಹಸಲರಿಗೆ ಅನಿವಾರ್ಯ.

ಇದರ ಜೊತೆಗೆ ಕುಡುಗುಂಜಿಯಲ್ಲಿ ಮದುವೆ ಎಂದರೆ ಬೇರೆ ಎಲ್ಲೂ ವಾಲಗ ಊದುವ ಹಾಗೆ ಇಲ್ಲ. ದ್ವೀಪಕ್ಕೆ ಹೆಣ್ಣು ಕೊಡಲು ಯಾರಾದರೂ ಮುಂದೆ ಬರುವುದುಂಟೆ? ಹೀಗಾಗಿ ದ್ವೀಪದ ಬಹುತೇಕ ಸಂಬಂಧಗಳು ಅಲ್ಲಲ್ಲಿಯೇ ಕೊಟ್ಟು, ತಂದುವುಗಳಾಗಿವೆ. ಪೌಷ್ಟಿಕ ಆಹಾರದ ಕೊರತೆಯ ಜೊತೆಗೆ, ಇದೂ ತಳಕು ಹಾಕಿಕೊಂಡು ದೇಹದಾರ್ಢ್ಯವೂ ಕುಸಿಯತೊಡಗಿದೆ.

ತೂಗುತ್ತ, ಬಾಗುತ್ತ

ಕುಡುಗುಂಜಿಯ ಹಸಲರದು ಮರ ಹತ್ತುವುದರಲ್ಲಿ ಎತ್ತಿದ ಕೈ. ಆಕಾಶಕ್ಕೆ ಕತ್ತು ಚಾಚಿ ನಿಂತು ತೂಗಿ ಬಾಗುವ ಅಡಿಕೆ ಮರ ಏರುವುದೆಂದರೆ ಅವರಿಗೆ ಎಲ್ಲಿಲ್ಲದ ಸಂತೋಷ. ಅಡಿಕೆ ಮರದ ಜೊತೆಯಲ್ಲಿಯೇ ತೂಗುತ್ತಾ, ಬಾಗುತ್ತಾ ಮರದಿಂದ ಮರಕ್ಕೆ ಜಿಗಿಯುತ್ತಾ, ಅಡಿಕೆ ಗೊನೆ ಕೀಳುವ ಇವರ ಕೈಚಳಕ ಅಚ್ಚರಿ ಮೂಡಿಸುತ್ತದೆ. ಅಪ್ಪಿತಪ್ಪಿ ಅಡಿಕೆ ಮರದ ಕತ್ತು ಮುರಿದರೆ ಹಸಲನ ಕತ್ತೂ ಮುರಿದಂತೆ. ಪ್ರಾಣ ಪಣವಿಟ್ಟು ನಡೆಸುವ ಈ ಸಾಹಸಕ್ಕೆ ಕೂಲಿಯೂ ಅಧಿಕ. ಅಡಿಕೆ ಗೊನೆ ಮುರಿಯುವುದರಲ್ಲಿ ಗಂಡಸರು ಎಷ್ಟು ಪರಿಣತರೋ, ಅಷ್ಟೇ ಮಟ್ಟಿಗೆ ಹೆಂಗಸರೂ ಅಡಿಕೆ ಸುಲಿಯುವುದರಲ್ಲಿ ಪರಿಣತರು.

ಅಡಿಕೆ ಕೀಳುವ ಸಾಹಸಕ್ಕಿಂತಲೂ ಮಿಗಿಲಾದದ್ದು ಬೇಟೆ. ಹಸಲರು ತಾವು ಅಗ್ನಿ ಹೊನ್ನಪ್ಪನ ಮತದವರೆಂದು ಹೇಳಿಕೊಳ್ಳುತ್ತಾರೆ. ಹಸಲರು ಹೆಜ್ಜೆ ಹೊರ ಇಟ್ಟರೆ ಬಿಲ್ಲು–ಬಾಣ ಇವರ ಸಂಗಾತಿ. ಹಸಲರು ಕಾಡುಗಳಲ್ಲಿಯೇ ಬದುಕು ಸಾಗಿಸುವುದರಿಂದ ಬಿಲ್ಲು ಇವರ ಜೊತೆಯಲ್ಲಿರಲೇಬೇಕು. ಹೀಗಾಗಿಯೇ ಇವರನ್ನು ಬಿಲ್ಲ ಕ್ಷತ್ರಿಯರೆಂದೂ ಕರೆಯುತ್ತಾರೆ.

ಒಂದು ಕಾಲದಲ್ಲಿ "ಬಿಲ್ಲು ಹಿಡಿಯದವ ಹಸಲನಲ್ಲ" ಎಂಬ ಮಾತಿತ್ತು. ಕಡ, ಬರ್ಕ, ಕಾಡು ಹಂದಿ, ಮುಳ್ಳು ಹಂದಿ, ಮೊಲ, ಉಡ ಯಾವುದೇ ಪ್ರಾಣಿಯಾದರೂ ಇವರ ಬಾಣಗಳಿಗೆ ಶರಣಾಗುತ್ತಿತ್ತು. ಆದರೆ ಈಗ ಪ್ರಾಣಿಗಳೂ ಇಲ್ಲ, ಬೇಟೆಗೆ ಅವಕಾಶವೂ ಇಲ್ಲ ಎಂಬ ಕೊರಗು ಹಸಲರದು. ಕುಡುಗುಂಜಿಯ ಹಸಲರಂತೂ ಬೇಟೆಗೆ ತುಂಬಾ ದೂರ. ಸುತ್ತಲೂ ನೀರೇ ಆವರಿಸಿರುವುದರಿಂದ ಯಾವ ಪ್ರಾಣಿಗಳೂ ಇಲ್ಲಿ ವಾಸಿಸುವುದಿಲ್ಲ. ಹೀಗಾಗಿ ಇಲ್ಲಿನ ಹಸಲರಿಗೆ ಗದ್ದೆಯ ಬಿಲದಲ್ಲಿ ವಾಸಿಸುವ ತೊಡ, ಇಲಿ, ಅಪ್ಪಿತಪ್ಪಿ ಸಿಗುವ ಕಾಡು ಕೋಳಿ, ಮೊಲ ಆಹಾರವಾಗುತ್ತದೆ.

ತಾನು ಬೇಟೆಯಾಡಿದ ದಿನಗಳ

ಬದುಕನ್ನು ತೆರೆದಿಡುವ ಕುಡುಗುಂಜಿಯ ಮುದುಕ ಕನ್ನಯ್ಯನಿಗೆ ಸಾಧ್ಯವಾದರೆ ಈಗಲೂ ಬಿಲ್ಲು ಹಿಡಿಯುವ ಹಂಬಲ. ಆದರೆ ಬಿಲ್ಲು ಅಟ್ಟ ಸೇರಿದೆ. ಈಗ ಕನ್ನಯ್ಯನಿಗೆ ಉಳಿದಿರುವುದು ಹಳೆಯ ನೆನಪುಗಳ ಮೆಲುಕಾಟ ಮಾತ್ರ.

ಜೀತ ಸಂಸ್ಕೃತಿ

ಸಾಂಸ್ಕೃತಿಕವಾಗಿಯೂ ಹಸಲರು ತಮ್ಮದೇ ಆದ ಪ್ರತ್ಯೇಕತೆಯನ್ನು ಉಳಿಸಿಕೊಳ್ಳಲಾಗಿಲ್ಲ. ವರ್ಷವಿಡೀ ಜೀತವನ್ನೇ ಹೊದ್ದುಕೊಂಡ ಇವರು ಎಲ್ಲಿ ಜೀತ ಮಾಡುತ್ತಾರೋ ಅಲ್ಲಿಯ ಸಂಸ್ಕೃತಿಗೆ ಒಡ್ಡಿಕೊಂಡು ಬಿಟ್ಟಿದ್ದಾರೆ. ಕುಡುಗುಂಜಿಯ ಹಸಲರಲ್ಲಿ ವಿಶೇಷ ಜನಪದ ಕಲೆ ಕೂಡ ಉಳಿದು ಬಂದಿಲ್ಲ. "ಮೊದಲಿನಿಂದಲೂ ನಮಗೆ ವಿಶೇಷ ಕಲೆಗಳು ಅಂಟಿ ಬರಲಿಲ್ಲ" ಎನ್ನುವ ಮುದುಕ ಕನ್ನಯ್ಯ ಮಾತ್ರ ಚಪಲ ತಡೆಯಲಾರದೆ ಆಗೀಗ ಅಂಟಿಕೆ–ಪಂಟಿಕೆ ಹಾಡುಗಳ ತುಣುಕುಗಳನ್ನು ಗುನುಗುತ್ತಾನೆ.

ಹಸಲರ ಬದುಕು ಈ ರೀತಿಯಾದರೆ, ಅಲ್ಲಿನ ಏಕೈಕ ಒಡೆಯರಾದ ಹೆಗಡೆಯವರದು ಇನ್ನೊಂದು ರೀತಿ. ಶಿವಮೊಗ್ಗ ಮತ್ತು ಉತ್ತರ ಕನ್ನಡದ ಕೆಲವು ಹವ್ಯಕ ಜಮೀನ್ದಾರರಿಗೆ ಹೋಲಿಸಿದರೆ ಇಲ್ಲಿನ ಹೆಗಡೆಯವರು ಅಂಥ ಕುಳವೇನೂ ಅಲ್ಲ. ಆದರೂ ಹತ್ತಾರು ಎಕರೆ ತೋಟ, ಗದ್ದೆಗಳ ಒಡೆಯರಾದ ಇವರಿಗೆ ಅಂತಹ ಕಷ್ಟಗಳೂ ಇಲ್ಲ. ಇವರ ಮುಖ್ಯ ತೊಂದರೆ ಮಕ್ಕಳ ವಿದ್ಯಾಭ್ಯಾಸ ಮತ್ತು ವೈವಾಹಿಕ ಸಂಬಂಧಗಳದ್ದು. ಏನೆಲ್ಲಾ ಇದ್ದರೂ ಸಾರಿಗೆ ಸೌಕರ್ಯವಿಲ್ಲದ, ವಿದ್ಯುತ್ತಿಲ್ಲದ ಜಾಗ ಈ ಕಾಲದಲ್ಲಿ ಹಿಂದುಳಿದದ್ದೇ ತಾನೆ. ಹೋಗಲಿ ನಡೆದಾದರೂ ಮನೆ ಸೇರೋಣವೆಂದರೆ ತುಂಬಿದ ನೀಲ ಸಾಗರ ಹೆಬ್ಬಾವಿನಂತೆ ಸುತ್ತಿ ಮಲಗಿದೆ. ಹೀಗಾಗಿ 'ಎಲ್ಲ ಇದ್ದೂ, ಇಲ್ಲಿ ಸುಖವಿಲ್ಲ' ಎನ್ನುತ್ತಾರೆ. 'ನನ್ನ ಮಕ್ಕಳೆಲ್ಲರೂ ಈ ದ್ವೀಪ ಬಿಟ್ಟು ಬೇರಲ್ಲಾದರೂ ಹೊಸ ಜಾಗದಲ್ಲಿ ನೆಲೆಸೋಣ ಎನ್ನುತ್ತಾರೆ. ಆದರೆ ನನಗೆ ಈ ಸ್ಥಳ ಬಿಡಲು ಮನಸ್ಸೇ ಬರುತ್ತಿಲ್ಲ' ಎಂದು ಹೆಗಡೆ ತಮ್ಮ ಹಳೆ ನೆನಪುಗಳನ್ನು ಬಿಚ್ಚಿಕೊಂಡರು.

ಇದೀಗ ರಾಜಕೀಯ ನೆರಳು ಇಲ್ಲಿಯೂ ಚಾಚುತ್ತಿದೆ. ಹಸಲರ ರಾಮಪ್ಪ ಮಂಡಲ ಸದಸ್ಯನಾಗಿದ್ದಾನೆ. ಮತ ಕೇಳಲು ಜನ ಆಗೀಗ ಅಲ್ಲಿಗೆ ಬರುತ್ತಾರೆ. ಚುನಾವಣೆಯ ವೇಳೆಯಲ್ಲಾದರೂ ಕುಡುಗುಂಜಿ ಹೊರಗಿನ ಪ್ರಪಂಚದೊಂದಿಗೆ ಕೈ ಕುಲುಕುತ್ತದೆ. ಉಳಿದಂತೆ ಕುಡುಗುಂಜಿ ನೀರಿನ ಮಧ್ಯದ ದೋಣಿಯಂತೆ ತೇಲುತ್ತಾ, ಮುಳುಗುತ್ತಾ ಬದುಕು ನೂಕುತ್ತದೆ.

ಕುಣಬಿ, ಗೊಂಡರ ಜತೆ ಮೇಘಾನೆಯಲ್ಲಿ

ಜಿ. ಎನ್. ಮೋಹನ್

<u>ಬಣ್ಣಬಣ್ಣದ ಬುಟ್ಟಾ ಹೊತ್ತ ಹಸಿರು ಸೀರೆಯಂತೆ ಕಾಣುವ ಪಶ್ಚಿಮಘಟ್ಟದ ಒಡಲಲ್ಲಿ ಆಯ್ದಷ್ಟು ವಿಚಿತ್ರಗಳು. ಕಾಂಕ್ರೀಟ್ ಕಾಡುಗಳ ಮಧ್ಯೆ ಬದುಕು ಸಾಗಿಸುತ್ತಿರುವವರಿಗೆ ಪಶ್ಚಿಮ ಘಟ್ಟಗಳ ಗಾಢ ನಿಸರ್ಗವನ್ನು ಪರಿಚಯಿಸುವುದು ಗುರಿ. ಕರ್ನಾಟಕದ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಹತ್ತು ವರ್ಷ ತುಂಬಿದ ನೆನಪಿಗೆ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ವಿನೂತನ 'ಕಾಲ್ನಡಿಗೆ ಮೂಲಕ ಬುಡಕಟ್ಟು ಜನಾಂಗಗಳ ಅಧ್ಯಯನ ಕಾರ್ಯಕ್ರಮ' ಹಮ್ಮಿಕೊಳ್ಳಲಾಗಿತ್ತು.</u>

15, ಏಪ್ರಿಲ್ 1990

'ಅಗೋ ಅಲ್ಲಿ ಮೇಘಾನೆ....'

ಕರಿಯ ಬೊಟ್ಟು ಮಾಡಿ ತೋರಿಸಿದಾಗ ಕಂಡದ್ದು ಅನಂತ ಆಕಾಶದ ಕ್ಯಾನ್‌ವಾಸ್‌ನಲ್ಲಿ ಜೋಲಿ ಹೊಡೆಯುತ್ತಿದ್ದ ಸೂರ್ಯ ಮಾತ್ರ. ಕಣ್ಣು ಕುಕ್ಕುವ ಕಿರಣಗಳನ್ನು ನಮ್ಮತ್ತ ತೂರಿ ಸ್ಥಿತಪ್ರಜ್ಞನಂತೆ ಕುಳಿತಿದ್ದ ಸೂರ್ಯ ನಿಮಿಷ ನಿಮಿಷಕ್ಕೂ ತಲೆ ಗಿರ್ರೆನ್ನುವಂತೆ ಮಾಡತೊಡಗಿದ.

ಪ್ರಶ್ನಾರ್ಥಕ ಚಿಹ್ನೆಯಂತೆ ಕಂಡ 25 ಜನರ ಮುಖಗಳೂ ಗೊಂಡರ ಕರಿಯನನ್ನು ದಿಟ್ಟಿಸಿದಾಗ ಆತನಿಗೆ ಸಮಸ್ಯೆ ಅರಿವಾಯಿತು. ನೆಲದಿಂದ ನಿಜಕ್ಕೂ ಸೂರ್ಯನಿಗೇ ಏಣಿ ಹಾಕಿದಂತೆ ಕಾಣುತ್ತಿದ್ದ ಪರ್ವತದ ಸಾಲುಗಳನ್ನು ತೋರಿಸಿದ.

ಅದುವರೆಗೂ ನಮ್ಮೆಲ್ಲರಿಗೂ 'ಪುಸ್ತಕದ ಬದನೆಕಾಯಿ'ಯಾಗಿದ್ದ ಪಶ್ಚಿಮ ಘಟ್ಟಗಳ ಅನನ್ಯತೆ ನಮ್ಮ ಕಣ್ಣ ಮುಂದೆ ಬಿಚ್ಚಿಕೊಳ್ಳುತ್ತಾ ಹೋಯಿತು.

ಬಣ್ಣಬಣ್ಣದ ಬುಟ್ಟಾ ಹೊತ್ತ ಹಸಿರು ಸೀರೆಯಂತೆ ಕಾಣುವ ಪಶ್ಚಿಮ ಘಟ್ಟದ ಒಡಲಲ್ಲಿ ಅಯ್ದುಷ್ಟು ವಿಚಿತ್ರಗಳು. 'ಅಲ್ಲಿ ಬನಬನದಲ್ಲಿ ಕಾಡ ಗಿಡಗಿಡದಲ್ಲಿ ಕೊಂಬೆಕೊಂಬೆಗೆ ಹೂವು ಸಾವಿರಾರು' ಎನ್ನುವ ಕವಿ ಮಾತಿನಂತೆ ಗೊಂಚಲ ಗೊಂಚಲಾಗಿ ಹರಡಿದ ಹೂವುಗಳು. ಹಾಡುವ ಹಕ್ಕಿ, ಚಣಮಾತ್ರಕ್ಕೆ ಬಣ್ಣ ಬದಲಿಸುವ ನಿಸರ್ಗ ಕಾಶಿ. ಇವೆಲ್ಲಕ್ಕಿಂತಲೂ ಮಿಗಿಲಾಗಿ ಹಸಿರ ಬನಸಿರಿಯ ಮಧ್ಯೆ ಕಾಡ ಹೂಗಳಂತೆ ಅರಳಿ ನಿಂತ ಬುಡಕಟ್ಟು ಜನಾಂಗದವರು ಬೆಂಗಳೂರಿನಿಂದ 25 ಸಾಹಸಿಗಳನ್ನು ಕೈಬೀಸಿ ಕರೆದಿದ್ದರು.

ದುರ್ಗಮ ಕಾಡು, ಕಣಿವೆಗಳಲ್ಲಿ ಅಡ್ಡಾಡಿ, ಎತ್ತರದ ಪರ್ವತಗಳನ್ನು ಏರಿ, ಮುಗಿಲು ಚುಂಬಿಸುವ ಹವ್ಯಾಸ ಹೊಂದಿರುವ 'ದಿ ಅಡ್ವೆಂಚರರ್ಸ್'ಸಾಹಸಿ ಶಾಲೆ ಮತ್ತು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಎರಡೂ ಸಂಸ್ಥೆಗಳಿಗೆ ಹತ್ತು ವರ್ಷ ತುಂಬಿದ ನೆನಪಿಗೆ ರಾಷ್ಟ್ರದಲ್ಲಿಯೇ ಪ್ರಥಮ ಬಾರಿಗೆ ವಿನೂತನ 'ಕಾಲ್ನಡಿಗೆ ಮೂಲಕ ಬುಡಕಟ್ಟು ಜನಾಂಗಗಳ ಅಧ್ಯಯನ' ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ನಿನ್ನೆಯ ನೆನಪು

ಕಾಂಕ್ರೀಟ್ ಕಟ್ಟಡಗಳ ಮಧ್ಯೆ ಬದುಕು ಸಾಗಿಸುತ್ತಿರುವವರಿಗೆ ಪಶ್ಚಿಮ ಘಟ್ಟಗಳ ಗಾಢ ನಿಸರ್ಗವನ್ನು ಪರಿಚಯಿಸುವುದರೊಂದಿಗೆ ನಮ್ಮೊಡನಿದ್ದೂ ನಮ್ಮಂತಾಗದ ಬುಡಕಟ್ಟು ಜನಾಂಗದವರ ಜೊತೆ ಮುಖಾಮುಖಿ ಕಾರ್ಯಕ್ರಮ ಹಲವರನ್ನು ಕಾಡಿನ ತೆಕ್ಕೆಗೆ ಎಳೆತು ತಂದಿತ್ತು.

'ಕಾಡುಗಳ ಒಡಲಲ್ಲಿ ಬದುಕುತ್ತಿರುವ ಬುಡಕಟ್ಟು ಜನಾಂಗಗಳೇ ಒಂದು ಮಿನಿ ಜಗತ್ತು. ನಾವು ಹಾದು ಬಂದ ದಾರಿಯ ಪಳೆಯುಳಿಕೆಯಂತಿರುವ ಈ ಜನಾಂಗವನ್ನು ಕಂಪ್ಯೂಟರ್ ಯುಗಕ್ಕೆ ಧಾವಿಸುತ್ತಿರುವವರಿಗೆ ಪರಿಚಯ ಮಾಡಿಸುವುದು ನಮ್ಮ ಗುರಿ. ಇದು ಒಂದು ರೀತಿಯಲ್ಲಿ ಇಂದಿನ ಮಂದಿಗೆ ನಿನ್ನೆಯ ನೆನಪು ಮಾಡಿಕೊಡುವ ಪ್ರಯತ್ನ' ಎನ್ನುತ್ತಾರೆ ಜಾನಪದ ಅಕಾಡೆಮಿಯ ಅಧ್ಯಕ್ಷರಾದ ಎಸ್.ಕೆ. ಕರೀಂಖಾನ್.

ಪಶ್ಚಿಮ ಘಟ್ಟಗಳು ಹಲವು ಬುಡಕಟ್ಟು ಜನಾಂಗಗಳ ತವರು. ದಕ್ಷಿಣ ಪ್ರಸ್ಥಭೂಮಿ ಹಾಗೂ ಪಶ್ಚಿಮ ಕರಾವಳಿಯನ್ನು ಗೀರು ಎಳೆದಂತೆ ಪ್ರತ್ಯೇಕಿಸಲು ನಿಂತ ಪರ್ವತಗಳ ಸಾಲೇ ಪಶ್ಚಿಮ ಘಟ್ಟ. ಕೇರಳದಿಂದ ಮಹಾರಾಷ್ಟ್ರದವರೆಗೆ ಮೈಚೆಲ್ಲಿ ಮಲಗಿರುವ ಈ ಘಟ್ಟದ ಬಹುಭಾಗ ಇರುವುದು ಕರ್ನಾಟಕದಲ್ಲಿ.

ತಾಳಗುಪ್ಪದಿಂದ ಭಟ್ಕಳದವರೆಗೆ ಹಿರೇಮನೆ, ಬಚಗಾರು, ಗಾಲಿಮನೆ, ನಾಗವಳ್ಳಿ, ಮೇಘಾನೆ, ಹಾಡುವಳ್ಳಿಯ ಮೂಲಕ ಹಾದು ಹಸಲ, ಗೊಂಡ, ಕುಣುಬಿಯರೊಂದಿಗೆ ಒಂದು ವಾರ ಇದ್ದು, ಅವರ ಬದುಕು ಅಭ್ಯಾಸ ಮಾಡುವುದು ಕಾಲ್ನಡಿಗೆಯ ಮುಖ್ಯ ಉದ್ದೇಶವಾಗಿತ್ತು.

ಬಿಸಿಲಿನಿಂದ ಬಾಡದಿರಲು ತಲೆಗೆ ಸನ್‌ಕ್ಯಾಪ್, ಆಯಾಮ ತಪ್ಪಿ ಕಣಿವೆಗೆ ಬೀಳದಿರಲು ಆಧಾರಕ್ಕೆ ಗಟ್ಟಿಕೋಲು ಎಲ್ಲವನ್ನೂ ಶಿಸ್ತಾಗಿ ಹೊಂದಿಸಿಕೊಂಡು ಹೊರಟಿದ್ದ ಸಾಹಸಿಗಳಿಗೆ ಕರಿಯ ದಾರಿದೀಪವಾಗಿದ್ದ. ಎತ್ತರಕ್ಕೆ ಜಿರಾಫೆಯ ಕತ್ತಿನಂತೆ ನೀಳವಾಗಿ ನಿಂತಿದ್ದ ಬೆಟ್ಟ ತುತ್ತತುದಿಯಲ್ಲಿದ್ದ ಮೇಘಾನೆ ಎಲ್ಲರ ಕುತೂಹಲದ ಬಿಂದು. ಕಾಡಿನ ಮಧ್ಯೆ ಜಿರ್ರೆನ್ನುವ ಕೀಟಗಳ ಶಬ್ದ. ಹಕ್ಕಿಗಳ ಕಲರವ, ಹಸಿರು ಎಳೆಗಳ ಮಧ್ಯೆ ಚಿಮ್ಮಿ ನಿಂತ ಹೂಗೊಂಚಲು. 'ಬನ ಬನಾ ನೋಡು ಈಗ ಹ್ಯಾಂಗ, ಮದುವಿ ಮಗನಾಂಗ, ತಲೆಗೆ ಬಾಸಿಂಗ, ಕಟ್ಟಿಕೊಂಡು ನಿಂತಾವ ಹರ್ಷಗೊಂಡು' ಎನ್ನುವಂತೆ ಇಡೀ ಬೆಟ್ಟ

ಕಾಡುಗಳಲ್ಲಿ ಕಾಲ್ನಡಿಗೆಯ. ಮೂಲಕ ಹೊರಟ್ಟಿದ್ದವರು ಭೇಟಿಯಾದ ಜನ ಬೆಟ್ಟದಾ ಮೇಲೊಂದು ಮನೆಯ ಮಾಡಿ ಬದುಕುವ ಸಾಹಸಿಗರನ್ನು, ಆದೊಂದು ಬರೇ ಸಾಹಸ ಯಾತ್ರೆ ಆಗಿರಲಿಲ್ಲ. ಅಧ್ಯಯನವೂ ಆಗಿತ್ತು.

ಕಾಣುತ್ತಿತ್ತು.

ಇದ್ದಕ್ಕಿದ್ದಂತೆ ನಾಟಕದ ಪರದೆ ಸರಿಸಿದಂತೆ ಮೇಘಾನೆ ಬಿಚ್ಚಿಕೊಂಡಿತು. ಮೇಘಾನೆಗಿಂತ ಸಾವಿರ ಅಡಿ ಎತ್ತರದಲ್ಲಿ ನಿಂತು ನೋಡುತ್ತಿದ್ದ ನಮಗೆ ನಿಜಕ್ಕೂ ಮೇಘಾನೆ ಮೇಘಗಳ ಮಧ್ಯೆ ಮನೆ ಮಾಡಿದಂತೆ ಕಾಣಿಸುತ್ತಿತ್ತು.

ಕಾಗಕ್ಕ, ಗುಬ್ಬಕ್ಕ ಕಥೆಗಳಲ್ಲಿ ಬರುವಂತೆ ಏಳು ಕೋಟೆ ದಾಟಿ, ಏಳು ಸಮುದ್ರ ಈಜಿ ಹೋದರೆ ಮೇಲೊಂದು ಪರ್ವತ. ಈ ಪರ್ವತಕ್ಕೆ ಸರ್ಪಗಾವಲು. ಅದನ್ನು ದಾಟಿದರೆ ಮಂತ್ರದ ಗಿಳಿ. ಅದು ಇಡೀ ಲೋಕದ ಶಕುನ ಹೇಳುತ್ತದೆ. ಹಾಗೆಯೇ ಇದೂ ಒಂದು ಬೃಹತ್ ಬೆಟ್ಟ. ಬೆಟ್ಟದ ಒಡಲಲ್ಲಿ ಕಂಡದ್ದು ಈ ಮೇಘಾನೆ ಎಂಬ ಮಂತ್ರದ ಗಿಳಿ. ಹುಲ್ಲುಗರಿಕೆಯ ಹಾಸಿನ ಕೊನೆಯಲ್ಲಿ ಒಂದಿಷ್ಟು ಮನೆಗಳ ಸಾಲು. ಸುತ್ತಾ ಹಸಿರು ಗದ್ದೆಗಳು. ಗೆರೆಯಂತಹ ದಂಡೆ. ಜುಳುಜುಳು ಹರಿಯುವ ತೊರೆ.

ಬೆಟ್ಟದ ಮೇಲೆ ನಿಂತು ಮೇಘಾನೆಯ ಜಾತಕ ಬಿಡಿಸುತ್ತಿದ್ದವರನ್ನು 'ಓಹೋಯ್, ಓಹೋಯ್' ಕೂಗು ಎಚ್ಚರಿಸಿತು. ಅದಕ್ಕೆ ಹಿಮೇಳವಾಗಿ ಹಕ್ಕಿ ಬೆದರಿಸುವ ಡಬ್ಬಿ ಹಿಡಿದ ಮಕ್ಕಳು ಅದನ್ನೇ ಬಡಿಯುತ್ತಾ ನಮ್ಮನ್ನು ಸ್ವಾಗತಿಸಿದರು.

ಬೆಟ್ಟದ ತುದಿಯಿಂದ ಗುಜುಗುಜು ಶಬ್ದ ಮಾಡುತ್ತಾ, ಹಳ್ಳಿ ಕಂಡ ಸಂತಸಕ್ಕೆ ಕೇಕೆ ಹಾಕುತ್ತಾ ಇಳಿಯುತ್ತಿದ್ದವರನ್ನು ಆಗಲೇ ಮಕ್ಕಳು ಗುರುತು ಹಿಡಿದಿದ್ದರು. ಈ ಮಧ್ಯೆ ಯಾವುದೇ ಆರೋಹಣದಲ್ಲಿ ಅತಿ ಎತ್ತರ ಏರಿದಾಗ ತಮ್ಮ ಬಾವುಟ ಹಾರಿಸುವ ಅಡ್ವೆಂಚರರ್ಸ್‌ರವರ ಸಂಪ್ರದಾಯದಂತೆ ಬಾವುಟ ಹಾರಿಸಿ 'ಜನಗಣ ಮನ' ಹಾಡಿದ್ದು ಅಲೆಅಲೆಯಾಗಿ ಗಾಳಿಯಲ್ಲಿ ಬಳುಕುತ್ತಾ ಸಾಗಿ ಇವರ ಕಿವಿ ಮುಟ್ಟಿತ್ತು.

ಮೇಘಾನೆಯ ಕುಣುಬಿಯರದ್ದು ಅತ್ಯಂತ ಅಚ್ಚುಕಟ್ಟಾದ ಜೀವನ. ಪಳಪಳ ಕನ್ನಡಿಯಂತೆ ಹೊಳೆಯುವ ಅಂಗಳ. ಸದಾ ಸಾರಿಸಿದ ಹಸಿರು ಗೋಡೆಗಳು. ಅಂಗಳದ ಮಧ್ಯೆ ತುಳಸಿ ಗಿಡ. ದಿನನಿತ್ಯದ ಚಟುವಟಿಕೆಗಳು ಆರಂಭವಾಗುವುದೇ ತುಳಸಿಗೆ ನೀರೆರೆಯುವುದರಿಂದ. ತುಳಸಿ ಪೂಜೆ ಪ್ರತಿ ಕೆಲಸದ ಪ್ರಮುಖ ಭಾಗ ಎಂದುಕೊಂಡಿರುವ ಕುಣುಬಿ ಹೆಂಗಸರು ಪ್ರತೀ ಗಂಟೆಗೊಮ್ಮೆ ಅದಕ್ಕೆ ನೀರೆರೆಯುತ್ತಲೇ ಇರುತ್ತಾರೆ.

ಕುಣುಬಿಯರು ಮೂಲತಃ ಗೋವಾದವರು. ಬಹು ಹಿಂದೆಯೇ ಪಶ್ಚಿಮ ಘಟ್ಟಗಳ ಸಾಲನ್ನು ತುಳಿಯುತ್ತಾ ಬಂದವರು. ಇದೀಗ ಸಾಗರ, ಭಟ್ಕಳ, ಯಲ್ಲಾಪುರದ ಹಲವೆಡೆ ಹರಿದು ಹಂಚಿ ಹೋಗಿದ್ದಾರೆ. ಸ್ವಂತ ನೆಲ ಎಂಬುದಿಲ್ಲದೆ ಇತರರ ಗದ್ದೆಗಳಲ್ಲಿ ಜೀತ ಮಾಡುವ ಕುಣುಬಿಯರಿಗೆ ಇಂದಿಗೂ ಗೋವಾದ ಬಗ್ಗೆ ಅಚ್ಚಳಿಯದ ಪ್ರೀತಿ. ಗೋವಾ ಇವರ ಬಾಯಲ್ಲಿ ಗೋಂಯ. ಗೋಂಯ ದೈವವೇ ತಮ್ಮನ್ನು ಇಂದಿಗೂ ಕಾಪಾಡುತ್ತಿದೆ ಎನ್ನುವುದು ಇವರ ನಂಬಿಕೆ.

ಘಟ್ಟದ ಮೇಲಿನ ಕುಣುಬಿಯರು ಘಟ್ಟದ ಕೆಳಗಿನವರಿಗಿಂತ ಭಿನ್ನ. ರವಿಕೆ ಈ ಪ್ರಭೇದವನ್ನು ಒಡೆದು ತೋರಿಸುತ್ತದೆ. ಘಟ್ಟದ ಕೆಳಗಿನವರು ರವಿಕೆ ಧರಿಸುವುದಿಲ್ಲ.

ಗೋವಾದಲ್ಲಿ ಬೇರುಗಳನ್ನು ಹೊಂದಿ, ಪಶ್ಚಿಮ ಘಟ್ಟಗಳಲ್ಲಿ ಅರಳಿ ನಿಂತಿರುವ ಕುಣುಬಿಯರು ಮೇಘಾನೆಯ ಒಡಲು ಸೇರಿದ್ದೂ ಕುತುಹಲಕಾರಿ. ಲಿಂಗನಮಕ್ಕಿ ಅಣೆಕಟ್ಟಿನ ಆಸುಪಾಸು ಗದ್ದೆಗಳಲ್ಲಿ ಜೀತ ಮಾಡುತ್ತಿದ್ದ ಕುಣುಬಿಯರು ಲಿಂಗನಮಕ್ಕಿ ಅಣೆಕಟ್ಟು ಕೆಲಸ ಆರಂಭವಾದಾಗ ಮುಳುಗಡೆಯಾದ ಜಮೀನುಗಳಿಂದಾಗಿ ಬೀದಿಗೆ ಬಿದ್ದರು. ಜಮೀನುಗಳ ಒಡೆಯರಿಗೆ ಪರಿಹಾರ ಸಿಕ್ಕಿತು. ಆದರೆ ಜೀತ ಸೂಡುತ್ತಿದ್ದ ಕುಣುಬಿಯರು ಮತ್ತೆ ವಲಸೆ ಹೋಗಬೇಕಾಯಿತು. ಆಗ ಕೂಗಿ ಕರೆದದ್ದು


ಕುಣುಬಿ, ಗೊಂಡರ ಜತೆ ಮೇಘಾನೆಯಲ್ಲಿ

ಮೇಘಾನೆ. ಒಂದು ತುಂಡು ಭೂಮಿಯನ್ನಾದರೂ ಉತ್ತಿಬಿತ್ತುವ ಛಲದಿಂದ ಬೆಟ್ಟ ಏರಿದ ಕುಣುಬಿಯರು ಬೆಟ್ಟವನ್ನೇ ಮಣಿಸಲು ಆರಂಭಿಸಿದರು.

ಈಗ ಮೇಘಾನೆ ಸಂಪೂರ್ಣ ಭಿನ್ನ. ಕಣ್ಣು ಹಾಯಿಸಿದಷ್ಟು ದೂರದವರೆಗೂ ಹಸಿರು ಗದ್ದೆ. ಹಾರುವ ಬೆಳ್ಳಕ್ಕಿ ಇಲ್ಲಿಯೇ ಹುಟ್ಟಿ ಬೆಳೆದ ಕುಣುಬಿಯರು ಮೇಘಾನೆಯೊಂದಿಗೆ ಭಾವುಕ ಸಂಬಂಧ ಹೊಂದಿದ್ದಾರೆ. ಮೇಘಾನೆಯ ಬೆಟ್ಟ ಇವರನ್ನು ತೆಕ್ಕೆಗೆ ತೆಗೆದುಕೊಂಡಂತೆಯೇ ಇವರಿಗೆ ತೊಡಕಾಗಿಯೂ ಉಳಿದಿದೆ.

ಬೆಟ್ಟ ಹತ್ತಿ, ಬೆಟ್ಟ ಇಳಿಯುವ ಸಾಹಸ ಮಾಡಲಾಗದ ಮಂದಿ ನಾಗರಿಕತೆಯಿಂದ ದೂರವೇ ಉಳಿದಿದ್ದಾರೆ. ಸೈಕಲು ಸಹ ಕಂಡರಿಯದ ಹಲವರು ಮೇಘಾನೆಯಲ್ಲಿದ್ದಾರೆ. ಆದ್ದರಿಂದಲೇ ಬಯಲು ಪ್ರದೇಶದಿಂದ ನಾಗರಿಕತೆಯ ದೂತರು ಇವರಿಗೆ ಸದಾ ಕುತೂಹಲಕಾರಿ. ಬೆಟ್ಟದ ಮೇಲಿನ ಜಲ್ಲೆ ಹೂವಿನಂತಿರುವ ಮೇಘಾನೆ ಹೆಂಗಸರು ಗಂಟಗಟ್ಟಲೆ ಸುಶ್ರಾವ್ಯವಾಗಿ ಕೊಂಕಣಿ ಮಿಶ್ರಿತ ಮರಾಠಿ ಭಾಷೆಯಲ್ಲಿ ಹಾಡುಗಳನ್ನು ಹಾಡುತ್ತಾರೆ. ಸಾಹಸಿಗಳ ತಂಡ ರಾತ್ರಿ ನಡೆಸಿದ ಶಿಬಿರಾಗ್ನಿಯಲ್ಲಿ ಕುತೂಹಲದಿಂದ ಬಂದು ಕುಳಿತ ಕುಣುಬಿ ಹೆಂಗೆಳೆಯರು ಸಾಹಸಿಗರ ಹಾಡು, ಕಥೆ ಮುಗಿಯುತ್ತಿದ್ದಂತೆಯೇ 'ನಮ್ಮ ಎರಡಡಕೆ ನಿಮ್ಮ ಎರಡಡಕ್ಕೆ ಜೋಡು ಮಾಡಯ್ಯ' ಎಂದು ಕನ್ನಡದ ಪದಗಳನ್ನು ಹಾಡಿ, ಬಯಲ ನಾಗರಿಕತೆಯೊಂದಿಗೆ ಬೆಟ್ಟದ ಸೊಗಡನ್ನು ತಳುಕು ಹಾಕಿದರು.

ಕುಣುಬಿಯರ ಹೆಣ್ಣುಗಳು ಅತಿ ಗಟ್ಟಿಮುಟ್ಟು. ಹಿಂದೆ ಮಾತೃ ಪ್ರಧಾನವಾಗಿದ್ದ ಕುಣುಬಿಗಳು ಇದೀಗ ಆ ಛಾಯೆ ಕಳೆದುಕೊಳ್ಳುತ್ತಾ ಸಾಗಿದ್ದಾರೆ. ಕುಣುಬಿಯ ಹೆಂಗಸರು ಅಲಂಕಾರದಲ್ಲಿ ಎತ್ತಿದ ಕೈ. ಕುಣುಬಿ ಹೆಣ್ಣುಗಳ ಮುಖ್ಯ ಅಲಂಕಾರ ಚಮತ್ಕಾರಗಳು ಕಾಣುವುದು ಅವರ ಕೇಶ ವಿನ್ಯಾಸದಲ್ಲಿ. ಕೂದಲಿನ ಹೆಣಿಗೆ ಇವರ ಬದುಕಿನಷ್ಟೇ ಒಪ್ಪ, ಓರಣ.

ಬೆಟ್ಟದ ಮೇಲೆ ಮನೆ ಮಾಡಿದವರೊಂದಿಗೆ ವೈವಾಹಿಕ ಸಂಬಂಧ ಬೆಳೆಸಲು ಯಾರೂ ಮುಂದೆ ಬಂದಿಲ್ಲ. ಹೀಗಾಗಿ ಮೇಘಾನೆಯಲ್ಲಿನವರ ಮಧ್ಯೆಯೇ ಹೆಚ್ಚಾಗಿ ಮದುವೆ ನಡೆಯುತ್ತದೆ. ಸಂಬಂಧಿಕರ ನಡುವೆಯೇ ಏರ್ಪಟ್ಟ ಸಂಬಂಧಗಳಿಂದಾಗಿ ಇಲ್ಲಿಯ ಜನಾಂಗ ದಿನೇ ದಿನೇ ಕೃಶವಾಗುತ್ತಾ ಸಾಗಿದೆ.

ಮನೆಯೇ ಶಾಲೆ

'ಮಕ್ಕಳ ಸ್ಕೂಲ್ ಮನೇಲಲ್ವೇ?' ಎನ್ನುವ ಮಾತು ಇಲ್ಲಿ ನಿಜವಾಗಿದೆ. ಬೆಟ್ಟ ಇಳಿದು ನಾಗವಳ್ಳಿ ಸೇರಿ, ಪುನಃ ಬೆಟ್ಟ ಹತ್ತಿ ಬರಲಾಗದ ಕಾರಣಕ್ಕಾಗಿ ಮಕ್ಕಳು ಶಾಲೆಯಿಂದ ದೂರವೇ ಉಳಿದಿದ್ದಾರೆ. ಅದೇ ರೀತಿ ಬೆಟ್ಟ ಹತ್ತಿ ಬಂದು ಪಾಠ ಹೇಳುವ ಮಾಸ್ತರರೂ ಇವರಿಗೆ ದೊರೆಯದ ಕಾರಣ ಮೇಘಾನೆ ಅ ಆ ಇ ಈ ಗಳ ಬೆಳಕನ್ನು ಕಾಣಲಾಗಿಲ್ಲ.

ಅಕಸ್ಮಾತ್ ಯಾರಾದರೂ ಈ ಹಾಡಿಯಲ್ಲಿ ತೀವ್ರವಾಗಿ ಕಾಯಿಲೆ ಬಿದ್ದರಂತೂ ಅವರ ಪಾಡು ಹೇಳತೀರದು. ಆಗಲೇ ಅವನಿಗೆ ಚಟ್ಟ ಕಟ್ಟಿ ಹೆಗಲ ಮೇಲೆ ಹೊತ್ತು ಇಳಿಜಾರುಗಳಲ್ಲಿ ಸರ್ಕಸ್ ಮಾಡುತ್ತಾ ಭಟ್ಕಳದ ಆಸ್ಪತ್ರೆಗೆ ಒಯ್ಯುತ್ತಾರೆ.

'ಬೆಟ್ಟದಾ ಮೇಲೊಂದು ಮನೆಯ ಮಾಡಿ ಮೃಗಗಳಿಗಂಜಿದೊಡೆಂತಯ್ಯ' ಎನ್ನುವ ಮಾತೇ ಇಲ್ಲಿ ಇಲ್ಲ. ಕೋವಿ ಹಿಡಿದು ಹುಸಿ ಚರೆ ತುಂಬಿಸಿ ಹೊರಟರೆ ಕಾಡು ಪ್ರಾಣಿಗಳು ಆ ರಾತ್ರಿಯ ಊಟಕ್ಕೆ ಸಿದ್ಧ ಎಂದೇ ಅರ್ಥ. ಕುಣುಬಿಯರು ಬೇಟೆಯಲ್ಲಿ ನಿಷ್ಣಾತರು. ದಿನದ ಕೆಲಸ ಮುಗಿದಾಗ ಬಗೆಬಗೆ ಆಹಾರಕ್ಕಾಗಿ ಆಗೀಗ ಕಾಡು ಹುಡುಕುತ್ತಾರೆ.

ಮೇಘಾನೆಯ ಚಿತ್ತಾರದ ಬದುಕಿನಂತೆಯೇ ಇಲ್ಲಿಯ ರಂಗೋಲಿಗಳೂ ಕಣ್ಣಿಗೆ ಹಬ್ಬ. ಕೋಟೆಯ ಒಳಗೊಂದು ಕೋಟೆ ಎಂಬಂತೆ ಈ ಚಿತ್ತಾರಗಳೂ ಏಳು

ಸುತ್ತಿನ ಕೋಟೆಯಂತೆ ನಿಗೂಢ. ಜಾನಪದ ಒಡಪುಗಳಷ್ಟೇ ಈ ಚಿತ್ತಾರಗಳೂ ಕುತೂಹಲಕಾರಿ. ಮನೆಯ ಅಳತೆಗೆ ತಕ್ಕಂತೆ ಚಿತ್ತಾರ. ಬಣ್ಣದ ಗೋಡೆಯ ಮೇಲೆ ಬಿಳಿ ಚಿತ್ತಾರ ಇವರ ಹಾಡು ಕುಣಿತಗಳಿಗೆ ಸುಂದರ ಪರದೆಯಾಗುತ್ತದೆ.

ಕುಣಿತವಿಲ್ಲದೆ, ಹಾಡು ಹೆಸರುಗಳಿಲ್ಲದೆ ಜಾನಪದ ಬದುಕಿಲ್ಲ. ಮದ್ದಳೆಯ ನಾದ ಹಾಡಿಯಲ್ಲಿ ಆರಂಭವಾದರೆ ಸಾಕು, ಹಾಡುಗಳು ಜಲ್ಲಜಲ್ಲನೆ ಉದುರುತ್ತವೆ. 60ರ ಇಳಿ ವಯಸ್ಸಿನಲ್ಲಿರುವ ಗಣೇಶ ಕುಣುಬಿಯರ ಪ್ರಮುಖ ಕಲಾವಿದ. ತನ್ನ ತಂದೆಯಿಂದ ಕಲಿತ ರಾಮಾಯಣ ಕಾವ್ಯವನ್ನು ಸತತವಾಗಿ ಐದು ಹಗಲು, ಐದು ರಾತ್ರಿ ಹಾಡುವ ಈತ ಜಾನಪದ ಗೀತೆಗಳ ಕಣಜವಿದ್ದಂತೆ. ಕುಣುಬಿಯರ ಅಪರೂಪದ ಹಾಡು, ಹಸೆಗಳ ಹೊತ್ತಿಗೆಯಿದ್ದಂತೆ. ಈ ವೈಶಿಷ್ಟ್ಯಕ್ಕಾಗಿಯೇ ಜಾನಪದ ಅಕಾಡೆಮಿಯ ವಿಶೇಷ ಗಿರಿಜನ ಪ್ರಶಸ್ತಿಯನ್ನು ತನ್ನ ಬುಟ್ಟಿಗೆ ಹಾಕಿಕೊಂಡಿರುವ ಗಣೇಶ 'ಸ್ವಾಮಿ ಶರಣು ದೇವಕೋ, ಸ್ವಾಮಿ ಶರಣು ದೇವಕೋ...' ಎಂದು ಹಾಡಲು ಆರಂಭಿಸಿದರೆ ಮೇಘಾನೆಯ ಇಡೀ ಪರಿಸರದಲ್ಲಿ ಮತ್ತೆ ಅದು ಪ್ರತಿಧ್ವನಿಗೊಳ್ಳುತ್ತಾ ಹಾಡಿನ ಪಲ್ಲವಿಗೆ ಅನುಪಲ್ಲವಿಯಾಗುತ್ತದೆ.

ಹೋಳಿ ಕುಣುಬಿಯರ ದೊಡ್ಡ ಹಬ್ಬ. ಗಣೇಶ ಹಾಗೂ ಆತನ ತಂಡ ತಾಳ ಹಾಗೂ ಮದ್ದಳೆಯ ನಾದ ಆರಂಭಿಸಿದರೆ ಇಡೀ ಮೇಘಾನೆಯ ಹಾಡಿಯ ಜೀವಿಗಳಿಗೆ ಮೈ ಹೊಕ್ಕಂತಾಗುತ್ತದೆ. ಈ ಕುಣಿತಗಳಲ್ಲಿ ಹೆಂಗಸರು ಭಾಗವಹಿಸಬಾರದೆಂದು ಇಲ್ಲಿನ ಸಂಪ್ರದಾಯ. ಹೀಗಾಗಿ ಗಂಡಸರೇ ಹೆಂಗಸರ ವೇಷ ಧರಿಸಿ, ಅತ್ಯಂತ ನಾಜೂಕಾಗಿ ಹಾಡಿನ ದನಿಗೆ ಬಳುಕುತ್ತಾರೆ. ರಾಗರಸ ತುಂಬಿದ ಕಾಮನನ್ನು ಆರಾಧಿಸಲು ಅದುವರೆಗೂ ಮೂಲೆಗಿಟ್ಟ ವಾದ್ಯಗಳು ಹೊರಬರುತ್ತವೆ. 'ಹೋಳಿಸಿಗ್ಮಾ' ಎಂದೇ ಹೆಸರಾಗಿರುವ ಈ ಕುಣಿತದೊಂದಿಗೆ ಕೋಲುಪದ, ಗುಮಟೆ ಪದದ ರಸದೌತಣ ಸಾಗುತ್ತದೆ. ಎಲ್ಲರಂತಲ್ಲದ ಇವರ ಕೋಲಾಟ ವಿಶಿಷ್ಟ ರೀತಿಯಲ್ಲಿ ತೆರೆ ತೆರೆಯಂತೆ ಬಿಚ್ಚುತ್ತಾ, ಮುಚ್ಚುತ್ತಾ ಸಾಗುತ್ತದೆ.

ಗೊಂಡರು

ಈ ಬಾರಿ ಬೆಟ್ಟದಿಂದ ಇಳಿಯಲು ಕರಿಯ ಇರಲಿಲ್ಲ. ಕಲಾವಿದ ಗಣೇಶನೇ ನಮ್ಮ 'ಕೈ ಹಿಡಿದು ನಡೆಸಲು' ಮುಂದಾದ. ನಾಗವಳ್ಳಿಯಿಂದ ಹತ್ತಿ, ಮೇಘಾನೆ ತಲುಪಿದ ನಾವು ಇದೀಗ ಅರ್ಕಳದ ದಿಕ್ಕಿನಲ್ಲಿ ಇಳಿಯುತ್ತಿದ್ದೆವು.

ಇನ್ನೂ ಬೆಟ್ಟ ಅರ್ಧ ಇಳಿದಿದ್ದಾಗಲೇ ಗೊಂಡರ ಮನೆಗಳು ಕಂಡವು. ಹಸಿರಿನ ಹೊಲದ ಮಧ್ಯೆ ಒಂದಿಷ್ಟು ಕಟಾವು ಮಾಡಿದಂತೆ ಕಾಣುತ್ತಿದ್ದ ಜಾಗದಲ್ಲಿ ಗೊಂಡರ ಮನೆಗಳು ತಲೆ ಎತ್ತಿ ನಿಂತಿದ್ದವು. ಕುಣುಬಿ ಜನಾಂಗದ ಮಹಾನ್ ಕಲಾವಿದ ಗಣೇಶಗೊಂಡರ ಮತ್ತೊಬ್ಬ ಪ್ರಮುಖ ಕಲಾವಿದ ತಿಮ್ಮಪ್ಪಗೊಂಡನ ಬಳಿಗೆ ಕರೆದೊಯ್ಯುತ್ತಿದ್ದ.

ಗೊಂಡ ಎಂಬ ಹೆಸರು ತೆಲುಗಿನ ಕೊಂಡ ಎಂಬುದರಿಂದ ಬಂದಿದೆಯೆಂದು ಊಹಿಸಲಾಗಿದೆ. ಕೊಂಡ ಎಂದರೆ ತೆಲುಗಿನಲ್ಲಿ ಬೆಟ್ಟ–ಗುಡ್ಡ ಎಂಬ ಅರ್ಥವಿದೆ. ಹೀಗಾಗಿ ಬೆಟ್ಟಗುಡ್ಡದ ಮಕ್ಕಳೇ ಗೊಂಡರು. ಕಪ್ಪು ಮೈನ ಕಟ್ಟುಮಸ್ತಾದ ಗೊಂಡರನ್ನು ನೋಡಿದರೆ ಸಾಕು, ಮಣ್ಣಿನ ಮಕ್ಕಳು ಎಂಬುದಕ್ಕೆ ನಿಜ ಅರ್ಥ ದೊರೆಯುತ್ತದೆ. ಗಂಡಸರು ಮೊಳಕಾಲಿನ ಮೇಲೆ ಪಂಚೆ, ತಲೆಗೆ ವಸ್ತ್ರ, ನಿಲುವಂಗಿ ಧರಿಸಿದರೆ, ಹೆಂಗಸರು ಸೀರೆ ಮಾತ್ರ ಧರಿಸಿ, ಕುಪ್ಪಸ ಹಾಕಿಕೊಳ್ಳದೆ ಸೀರೆಯನ್ನೇ ಬಿಗಿದು ಕಟ್ಟುತ್ತಾರೆ.

ಸಾಹಸಿಗಳಿಗೆ ಮತ್ತೆ ಇಲ್ಲಿ ಕುಣಿತದ ಸ್ವಾಗತ. ಢಕ್ಕೆ ಇವರ ಮುಖ್ಯ ವಾದ್ಯ. ಶಿವನ ಢಮರುಗವನ್ನು ಹೋಲುವ ಢಕ್ಕೆ ಬಡೆಯುತ್ತಾ ನೃತ್ತಾಕಾರದಲ್ಲಿ



ನಾಡಿಗೆ ಬಂದ ಕಾಡಿನ ಹಾಡು

ರಾಗಿಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡು
ಬಲ್ಲಂತ ಜಾಣರು ಬರಕೊಳ್ಳಿ! ನಮ್ಮ ಹಾಡ
ಬಳ್ಳ ತಕ್ಕೊಂಡು ಅಳಕೊಳ್ಳಿ

ಎನ್ನುತ್ತದೆ ಜಾನಪದ. ಕಾಡುಕಣಿವೆಗಳಲ್ಲಿ, ಬೆಟ್ಟಗುಡ್ಡಗಳಲ್ಲಿ ಮೈಮುರಿದು ದುಡಿದು ಬದುಕುವ ಜಾನಪದರ ಬದುಕಿನ ಆಳದಿಂದ ಹೊರಚಿಮ್ಮಿದ ಹಾಡುಗಳು ಬರಹಕ್ಕೆ ಮಿಗಿಲಾದದ್ದು. ಬಳ್ಳದ ಅಳತೆಗೆ ಒಗ್ಗಲಾರದ್ದು.

ಕರ್ನಾಟಕ . ಎಲ್ಲೆಡೆ ಹರಡಿಕೊಂಡಿರುವ ಬುಡಕಟ್ಟು ಜನಾಂಗಗಳು ಜಾನಪದದ ಪ್ರಮುಖ ಉಸಿರು. ಬೇರೆಯವರ ಹೊಲದಲ್ಲಿ ಜೀತ ಮಾಡುತ್ತಾ ಒಂದಿಷ್ಟು ಸ್ವಂತ ಭೂಮಿ ಹೊಂದುವ ಕನಸು ಕಾಣುತ್ತಾ, ಈ ಮಧ್ಯೆ ತಾಕುವ ಎಲ್ಲ ನೋವುಗಳಿಗೆ ಕಣ್ಣೀರು ಜಿನುಗಿಸುವ ಈ ಜನಾಂಗದ ನಿಟ್ಟುಸಿರು! ಸಂತಸದ ಕೇಕೆಯೋ ಹಾಡು, ಕಥೆ, ಒಡಪು, ಕುಣಿತಗಳಾಗಿ ಬದಲಾಗಿವೆ. ಅಳತೆ ಮಾಡಲಾಗದ ಈ ಜಾನಪದದ ಬದುಕಿನ ಒಂದೆರಡು ತುಣುಕುಗಳನ್ನಾದರೂ ಹೆಕ್ಕಿ ನಾಗರಿಕರಿಗೆ ಪರಿಚಯಿಸುವ ಮತ್ತು ಜಾನಪದರಿಗೂ ಸಹಾಯ ಹಸ್ತ ಚಾಚುವುದರ ಮೂಲಕ ಅವರ ಸಂತಸದಲ್ಲಿ ಭಾಗಿಯಾಗುವ ಉದ್ದೇಶದಿಂದ ಆರಂಭವಾದದ್ದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ.

ಜಾನಪದಕ್ಕಾಗಿಯೇ ಬೇರೆ ಯಾವ ರಾಜ್ಯಗಳಲ್ಲಿಯೂ ಪ್ರತ್ಯೇಕ ಅಕಾಡೆಮಿ ಇರದ ಸಂದರ್ಭದಲ್ಲಿ ಜಾನಪದ ತಂಗಾಳಿಯು ಪರಿಚಯಿಸುವ ಉದ್ದೇಶದಿಂದ ಆರಂಭವಾದ ಸಂಸ್ಥೆಗೆ ಇದೀಗ ಹತ್ತನೆಯ ವರ್ಷ.

ಎದೆ ನಡುಗಿಸುವ ಡಮ್ಮ–ಢಕ್ಕ ಶಬ್ದ ಹೊಮ್ಮಿಸುವ ಡೊಳ್ಳು; ಹೊಸ ಲಯ ಹುಟ್ಟು ಹಾಕುವಾಗ, ಹಾವೇಲಿಯೋ ಆಸಿಸ್ಯಾ ಅರಿರಾಸಿ ರೇಳಿಯೋ.... ಎಂದು ಫಳ ಫಳ ಮಿಂಚುವ ಕನ್ನಡಿ ಲಂಗ ತೊಟ್ಟ ಲಂಬಾಣಿಯರು ಸೊಂಟ ಬಳುಕಿಸುತ್ತಾ ಕೂಗಿ ಕರೆಯುವಾಗ, 'ಹೋಯ್ ಹೋಯ್' ಎಂದು ತಲೆಗೆ ಸಿಂಗಾರ ಮಾಡಿಕೊಂಡ ಹಾಲಕ್ಕಿ ಒಕ್ಕಲಿಗರು, ಗುಮಟೆಯ ನಾದಕ್ಕೆ ಹೆಜ್ಜೆ ಯಿಕ್ಕುವಾಗ, ಖಡುಖಡಾ ವೀರಭದ್ರ ಎಂದು ಕೈಯಲ್ಲಿ ಖಡ್ಗ ಹಿಡಿದ ಲಿಂಗದ ವೀರರು ಚಮಾಳದ ಗತ್ತಿಗೆ ತೂಗುವಾಗ, 'ಸ್ವಾಮಿ ಶರಣು ದೇವಕೋ, ಸ್ವಾಮಿ ಶರಣು ದೇವಕೋ' ಎಂಬ ಹಾಡಿಗೆ ಕುಣುಬಿಯರ ಇಡೀ ಹಾಡಿ ದನಿಗೂಡಿಸುವಾಗ ಜಾನಪದ ಅಕಾಡೆಮಿಯ ಉಸಿರು ಈ ಹಾಡು, ಕುಣಿತಗಳ ಹಿಂದೆ ಕೇಳಿಬರುತ್ತದೆ.

ಜಾನಪದ ಅಕಾಡೆಮಿಯ ಮೊದಲ ಅಧ್ಯಕ್ಷರಾದ ಎಚ್.ಎಲ್. ನಾಗೇಗೌಡರು ಜಾನಪದ ಸಮುದ್ರದ ಒಂದು ಹಿಡಿ ನೀರನ್ನಾದರೂ ನಗರದ ಜನತೆಗೆ ನೀಡುವ ಕಾರ್ಯ ಕೈಗೆತ್ತಿಕೊಂಡರು. ಈ ನಿಟ್ಟಿನಲ್ಲಿ ಜಾನಪದ ಅಕಾಡೆಮಿ ರಾಜ್ಯದ ವಿವಿಧೆಡೆ ಹರಡಿ ಹಂಚಿ ಹೋಗಿದ್ದ ಜಾನಪಧ ಕಲಾವಿದರನ್ನು ಒಂದು ತೆಕ್ಕೆಗೆ ತರಲು ಪ್ರಯತ್ನಿಸಿತು. ಸಮೂಹ ಮಾಧ್ಯಮಗಳ ಅಬ್ಬರದಲ್ಲಿ ದಿನೇ ದಿನೇ ಕೈಬಿಟ್ಟು ಹೋಗುತ್ತಿದ್ದ ಜಾನಪದ ಕಲೆಗಳಿಗೆ ಬೆಂಗಾವಲಾಗಿದ್ದು ಅಕಾಡೆಮಿಯ ಹೆಮ್ಮೆಯ ಕಾರ್ಯ.

ಸಮುದ್ರ ರಾಜನ ಗೆಳೆತನ ಆದರೆ ಉಪ್ಪಿಗೆ ಬರ ಎನ್ನುವಂತೆ ಜಾನಪದ ಕಲೆಯಲ್ಲಿ ಶ್ರೀಮಂತರಾಗಿದ್ದು, ಬಡನತದಲ್ಲಿ ಕಾಲ ತಳ್ಳುತ್ತಿದ್ದ ಕಲಾವಿದರನ್ನು ಪ್ರೋತ್ಸಾಹಿಸಲು ಅಕಾಡೆಮಿ ಇದುವರೆಗೂ 82 ವಿಶಿಷ್ಟ ಕಲಾಮೇಳಗಳನ್ನು ನಡೆಸಿದೆ. ಜಾನಪದ ಕಲಾವಿದರನ್ನು ಗುರುತಿಸಿ, ಪ್ರಶಸ್ತಿ ನೀಡಿ ಗೌರವಿಸಿದೆ. ಜಾನಪದ ಆಸಕ್ತರನ್ನು ಕಲೆಹಾಕಿ ಕಲೆ ಉಳಿಸುವ ಬಗ್ಗೆ ಆಸಕ್ತಿ ಕೆರಳಿಸುವಂತಹ ವಿಶೇಷ ಕಮ್ಮಟ ವಿಚಾರ ಸಂಕಿರಣ, ಜಾನಪದ ಸಮಾವೇಶಗಳನ್ನು ನಡೆಸಿದೆ. ಸ್ವತಃ ಜಾನಪದ ಪುಸ್ತಕಗಳ ಪ್ರಕಟಣೆ, ಇತರರು ಪ್ರಟಿಸಿದ ಗ್ರಂಥಗಳಿಗೆ ಧನ ಸಹಾಯ, ಬಹುಮಾನ ಕಲಾವಿದರಿಗೆ ವೈದ್ಯಕೀಯ ನೆರವು ಇಂತಹ ಹತ್ತು–ಹಲವು ಕಾರ್ಯಕ್ರಮಗಳು ಈ ಅಕಾಡೆಮಿಯನ್ನು ವಿಶಿಷ್ಟವಾಗಿಸಿದೆ.

'ಬುಡಕಟ್ಟು ಜನಾಂಗಗಳು ವಿಶಿಷ್ಟ ರೀತಿಯ ಪಳೆಯುಳಿಕೆ. ಮುಗ್ಧ ಗಿರಿಜನರ ಬದುಕನ್ನು ಹಾಗೇ ಅವರ ಪರಿಸರದಲ್ಲಿಯೇ ಚಿತ್ರೀಕರಿಸುವ ವಿಶೇಷ ಯೋಜನೆ ಯಶಸ್ವಿಯಾಗಿದೆ. 'ಇದು–ಮುಂದಿನ ಪೀಳಿಗೆಗೆ ಪುಟ್ಟ ಕಾಣಿಕೆ' ಎನ್ನುತ್ತಾರೆ ಅಕಾಡೆಮಿಯ ಈಗಿನ ಅಧ್ಯಕ್ಷರಾದ ಎಸ್.ಕೆ. ಕರೀಂಖಾನ್.

ಬುಡಕಟ್ಟು ಜನಾಂಗದತ್ತ ಅಕಾಡೆಮಿ ಕಳೆದ ಮೂರು ವರ್ಷಗಳಿಂದ ವಿಶೇಷ ಗಮನಹರಿಸಿದೆ. ಉತ್ತರ ಕನ್ನಡದ ಹಾಲಕ್ಕಿ, ಸಿದ್ಧಿ, ಗೊಂಡರು ಶಿವಮೊಗ್ಗ ಜಿಲ್ಲೆಯ ಹಸಲ, ಕುಣುಬಿಯರು, ಕೊಡಗಿನ ಎರವ, ಕಾಡುಕುರುಬ, ಜೇನುಕುರುಬರು, ಮೈಸೂರು ಜಿಲ್ಲೆಯ ಸೋಲಿಗರು ಮುಂತಾದ ಜನಾಂಗಗಳ ಸಮಗ್ರ ಜೀವನ, ಕಲೆಯ ವೈವಿಧ್ಯತೆಯನ್ನು ಅಕಾಡೆಮಿ ವಿಡಿಯೋದಲ್ಲಿ ಸೆರೆಹಿಡಿದಿದೆ.

ಅಪರೂಪದ ಸಾವಿರಾರು ವರ್ಣ ಪಾರದರ್ಶಿಕೆಗಳು ಹಾಗೂ ಛಾಯಾಚಿತ್ರಗಳು ಅಕಾಡೆಮಿಯ ಸಂಗ್ರಹದಲ್ಲಿದೆ. ಜಾನಪದ ಅಕಾಡೆಮಿಯ ಉತ್ಸಾಹಿ ರಿಜಿಸ್ಟ್ರಾರ್ ಹಿ.ಚಿ. ಬೋರಲಿಂಗಯ್ಯ. ಪರಿಸರ ಛಾಯಾಗ್ರಹಣದಲ್ಲಿ ವಿಶೇಷ ಛಾಪು ಮೂಡಿಸಿರುವ ವಿ. ಶ್ರೀನಿವಾಸಮೂರ್ತಿ ಕರ್ನಾಟಕದ ದುರ್ಗಮ ಕಾಡುಗಳನ್ನು ಹೊಕ್ಕು, ಅಪರೂಪದ ಜನಾಂಗಗಳನ್ನು ನಾಡಿಗೆ ನೀಡಿದ್ದಾರೆ.

ದಿನದ ಕಾಯಕದಲ್ಲಿ ಮುಳುಗಿದ ಎಷ್ಟೋ ಬುಡಕಟ್ಟು ಜನಾಂಗಗಳ ವಾದ್ಯಗಳು ಇದೀಗ ಮೂಲೆ ಸೇರಿವೆ. ವೇಷ–ಭೂಷಣಗಳು ಇನ್ನಿಲ್ಲವಾಗಿದೆ. ವರ್ಷಕ್ಕೊಮ್ಮೆ ವಿಶೇಷ ಹಬ್ಬದಲ್ಲಿ ಮಾತ್ರ ಹೊರ ಬಂದು ಮತ್ತೆ ಪೆಟ್ಟಿಗೆ ಸೇರುವ ಪರಿಸ್ಥಿತಿಯಲ್ಲಿ ಅಕಾಡೆಮಿ ಅತ್ಯುತ್ತಮ ಕಲಾತಂಡಗಳನ್ನು ಆಯ್ಕೆ ಮಾಡಿ ವಾದ್ಯ, ಪರಿಕರಗಳಿಗೆ, ವೇಷ–ಭೂಷಣಗಳಿಗೆ ಆರ್ಥಿಕ ನೆರವು ನೀಡುವುದರ ಮೂಲಕ ಗಿರಿ–ಕಂದರಗಳಲ್ಲಿ ಮತ್ತೆ ಹೊಸ ಲಯ ಹುಟ್ಟು ಹಾಕಿದೆ. ಇದರಿಂದಾಗಿ ಬೆಟ್ಟದ ಮೇಲೆ ಬದುಕಿ ಕಲೆಯಿಂದ ದೂರವಾದ ಕಲಾವಿದರು ಬೆಟ್ಟದಿಂದ ಬಯಲಿಗೆ, ಬಯಲಿನಿಂದ ದೆಹಲಿಗೆ ತೆರಳಿ ಹಲವು ಕಾರ್ಯಕ್ರಮ ನೀಡಿದ್ದಾರೆ.

ಕಗ್ಗಾಡಿನ ಕಲಾವಿದರನ್ನು ಪ್ರೋತ್ಸಾಹಿಸುವ ಸಲುವಾಗಿಯೇ ವಿಶೇಷ ಗಿರಿಜನ ಪ್ರಶಸ್ತಿಯನ್ನೂ ಅಕಾಡೆಮಿ ನೀಡುತ್ತಿದೆ. ಮೇಘಾನೆಯ ಗಣೇಶ, ಹಾಲಕ್ಕಿ ಜನಾಂಗದ ಸುಕ್ರಿ ಬೊಂಬೊಮ್ಮಗೌಡ, ನಾಗಪ್ಪಾ ಚಾಪಾಗೌಡ ಈ ವಿಶೇಷ ಪ್ರಶಸ್ತಿಗಳನ್ನು ಪಡೆದಿದ್ದಾರೆ.

ಗಿರಿ–ಕಂದರದಲ್ಲಿ ಪುನಃ ಹೆಜ್ಜೆಗೆಜ್ಜೆಯ ಸದ್ದು ಕೇಳಿಬರುವಲ್ಲಿ ಅಕಾಡೆಮಿಯ ಪಾತ್ರ ಮಹತ್ವದ್ದು. ನೂತನ ಪೀಳಿಗಗೆ ಜಾನಪದ ರಸದೌತಣ ಬಡಿಸಿದ ಹೆಮ್ಮೆ ದಶಮಾನೋತ್ಸವಕ್ಕೆ ಸಾರ್ಥಕತೆ ಸಂದಿದೆ.

ಕುಣಿಯುವುದು ಇವರ ಸಂಪ್ರದಾಯ. ಸುಗ್ಗಿ ಹಾಗೂ ಕಾಮ ಹಬ್ಬ ಬಿಟ್ಟರೆ ಉಳಿದ ಹಬ್ಬಗಳಲ್ಲಿ ಇವರು ಢಕ್ಕೆ ಬಡಿಯುವುದಿಲ್ಲ. ಶಿವರಾತ್ರಿಯ ಗೊಂಡರ ಕುಣಿತ ಭೂತಗಣಗಳ ಕುಣಿತ ಎಂದೇ ಹೆಸರಾಗಿದೆ.

ಶಿವರಾತ್ರಿಯ ಮಧ್ಯರಾತ್ರಿ ಆರಂಭವಾಗುವ ಈ ಕುಣಿತ ನಂತರವೂ ಮುಂದುವರಿಯುತ್ತದೆ. ನೀಲಿ ಪಂಚೆ, ಹಳದಿ ಅಂಗಿ ತಲೆಗೆ ರುಮಾಲು, ಸೊಂಟಕ್ಕೆ ಹಸಿರು ಬಟ್ಟೆ ಕಟ್ಟಿ ಢಕ್ಕೆ ಹೆಗಲಿಗೆ ಜೋತು ಹಾಕಿಕೊಂಡು ಲಯಬದ್ಧವಾಗಿ ಕುಣಿಯುತ್ತಾರೆ. ಮಧ್ಯೆ ಇಬ್ಬರು ಹೋಳಿ ಕಾಮರು ಮುಖ ಮುಚ್ಚಿಕೊಂಡು ಕೋಲು ಜಲ್ಲೆ ಹಿಡಿದು ಮೇಲೆ ಹಾರುತ್ತಾ, ಜಿಗಿಯುತ್ತಾ ಹೊಸ ಲಯ ಹುಟ್ಟು ಹಾಕುತ್ತಾರೆ.

ಗೊಂಡರ ಅತಿ ವಿಶೇಷ ಊರ ಜಾತ್ರೆ ಕೋಗ್ತಿಯಲ್ಲಿ ನಡೆಯುತ್ತದೆ. ಕೋಗ್ತಿ ಗೊಂಡರಿಗೆ ಮಹತ್ವದ ಸ್ಥಳ. ನ್ಯಾಯ ಪಂಚಾಯತಿಯ ಕೇಂದ್ರ ಕೂಡ. ಕೋಗ್ತಿ ದೇವಸ್ಥಾನದ ಧನಕನಕವನ್ನು ಕದಿಯಲು ಪ್ರಯತ್ನಿಸಿದರೆಂಬ ಕಾರಣಕ್ಕಾಗಿ ಮಂತ್ರವಾದಿ, ಬ್ರಾಹ್ಮಣ, ಮುಸ್ಲಿಂ, ನಾಪಿತನ ಕತ್ತರಿಸಿದ ತಲೆಗಳ ಪ್ರತಿರೂಪದ ಮೆರವಣಿಗೆಯನ್ನು ಪ್ರತೀವರ್ಷ ನಡೆಸುತ್ತಾರೆ.

ಕಾಲ ನಡಿಗೆಯ ಮೂಲಕ ಭೇಟಿ ಮಾಡಿದ ಮತ್ತೊಂದು ಬುಡಕಟ್ಟು ಜನಾಂಗ ಹಸಲರು. ಹಸಲರು ಕಾಡಿನ ಹಸುಳೆಗಳೆಂದೇ ಹೆಸರುವಾಸಿ. ಹಿರೇಮನೆ, ಗಾಲಿಮನೆಗಳಲ್ಲಿನ ಹಸಲರ ಕುಟುಂಬಗಳಿಗೆ ಭೇಟಿ ನೀಡಿದಾಗ ನಮ್ಮೊಂದಿಗಿದ್ದದ್ದು ಹಸಲರ ವಿದ್ಯಾಭ್ಯಾಸಕ್ಕಾಗಿ ಅತ್ಯಂತವಾಗಿ ಶ್ರಮಿಸಿದ ಹಿರೇಮನೆ ಗಿರಿಜನ ಆಶ್ರಮ ಶಾಲೆಯ ಎನ್. ಹುಚ್ಚಪ್ಪ ಮಾಸ್ತರ್.

ದಕ್ಷಿಣ ಕನ್ನಡದಿಂದ ವಲಸೆ ಬಂದ ಹಸಲರು ಮಲೆನಾಡ ತೋಟಗಳಲ್ಲಿ ಮೈಮುರಿದು ದುಡಿಯುವವರು. ಬೇಟೆ ಇವರ ಬದುಕಿನ ಜೀವನಾಡಿ. ಸದಾ ಬಿಲ್ಲು–ಬಾಣ ಹೊತ್ತ ಇವರ ಮೂಲ ಪುರುಷ ಹೊನ್ನಪ್ಪ. ಅಡಿಕೆ ತೋಟಗಳಲ್ಲಿ ಸರ್ಕಸ್ ಮಾಡುತ್ತಾ ಒಂದು ಮರದಿಂದ ಇನ್ನೊಂದು ಮರಕ್ಕೆ ಉಯ್ಯಾಲೆಯಾಡುತ್ತಾ ಸರಸರನೆ ಅಡಿಕೆ ಕೀಳಲು ಹಸಲರೇ ಆಗಬೇಕು ಎನ್ನುವಷ್ಟು ಚಾಕಚಕ್ಯತೆ. ಆಯಾಸವಿಲ್ಲದ ದುಡಿತ ಇವರದ್ದು. ಹಿರೇಮನೆಯಲ್ಲಿ ಗಿರಿಜನ ಆಶ್ರಮ ಶಾಲೆ ಆರಂಭವಾದದ್ದು ಹಲವು ಹಸಲರ ಮಕ್ಕಳಿಗೆ ದಾರಿ ದೀಪವಾದಂತಿದೆ. ಹಾಡಿಯ ಹುಡುಗರು ಇಲ್ಲಿ ಅಕ್ಷರ ಕಲಿತು ಬೆಳೆದಿರುವುದರಿಂದ ಹಸಲರ ಮನೆ, ಹಾಡಿಗಳು ಇನ್ನಿಲ್ಲದಂತೆ ಹೊಸ ಗಾಳಿ ಕಂಡಿದೆ.

ಕಾಡುಗಳಲ್ಲಿ ಕಾಲ್ನಡಿಗೆಯ ಮೂಲಕ ಹೊರಟವರಿಗೆ ಸಿಕ್ಕಿದ್ದು ಬುಡಕಟ್ಟು ಜನಾಂಗದ ಬದುಕಿನ ಅನರ್ಘ್ಯ ರತ್ನಗಳು. ಬಯಲ ನಾಗರಿಕತೆಯ ಬದುಕಿನಿಂದ ದೂರವೇ ಇದ್ದು, ಕಾಡುಗಳೊಂದಿಗೆ ತಮ್ಮನ್ನು ಗುರುತಿಸಿ ಕೊಂಡಿರುವ ಇವರದ್ದು ಒಂದು ನೋಟಕ್ಕೆ ದಕ್ಕದ ಬದುಕು.

ಪ್ರಜಾಮತ

ದಶಕೋತ್ಸವದ ಸಿದ್ಧತೆ

ರಂಗಚಿಂತಕ

ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ದಶಕೋತ್ಸವದ ಸಂಭ್ರಮ. ಜಾನಪದಕ್ಕಾಗಿಯೇ ಬೇರೆ ಯಾವ ರಾಜ್ಯದಲ್ಲಿಯೂ ಪ್ರತ್ಯೇಕ ಅಕಾಡೆಮಿ ಇರದ ಸಂದರ್ಭದಲ್ಲಿ ಜನಪದ ತಂಗಾಳಿಯನ್ನು ಪರಿಚಯಿಸುವ ಉದ್ದೇಶದಿಂದ ಆರಂಭವಾದ ಅಕಾಡೆಮಿಯ ಬಗ್ಗೆ ಒಂದು ಕಣ್ಣೋಟ.



ಜಾನಪದ

ಜಾನಪದ–ಯಕ್ಷಗಾನ ಅಕಾಡೆಮಿ ದಶಕೋತ್ಸವದ ಸಿದ್ಧತೆ

ಡಾ|| ಎಸ್. ಕೆ. ಕರೀಂಖಾನ್

ಕಲ್ಬುರ್ಗಿ ವಿಶ್ವವಿದ್ಯಾಲಯದಿಂದ 'ಡಾಕ್ಟರೇಟ್' ಪಡೆದ ಕರೀಂಖಾನರಿಗೆ ಎಂ. ಪಿ. ಪ್ರಕಾಶರಿಂದ ಗೌರವಾರ್ಪಣೆ

ನಿಧಿ ಸಂಗ್ರಹಣೆ

1989

ಜಾನಪದಕ್ಕಾಗಿಯೇ ಪ್ರತ್ಯೇಕ ಅಕಾಡೆಮಿಯನ್ನು ಹೊಂದಿರುವುದು ಕರ್ನಾಟಕದ ಹೆಗ್ಗಳಿಕೆ. ಈ ದಶಕದ (1980) ಆರಂಭದೊಂದಿಗೆ ಹುಟ್ಟಿ ಬಂದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಜನಪದ ಪರಂಪರೆಯ ಸಂರಕ್ಷಣೆ, ಅಧ್ಯಯನ, ನವ ಪ್ರಯೋಗ ಶೀಲತೆಗೆ ಒತ್ತುಕೊಟ್ಟು ಸಾರ್ಥಕ ಯೋಜನೆಗಳ ಮೂಲಕ ಗತಿಶೀಲವಾಗಿದೆ.

ಹಿರಿಯ ಜಾನಪದ ತಜ್ಞ, ಗಾಂಧಿವಾದಿ ಡಾ. ಎಸ್.ಕೆ. ಕರೀಂಖಾನ್ ಅವರ ನೇತೃತ್ವದಲ್ಲಿ ಈಗ ಅಕಾಡೆಮಿ ಬರುವ ವರ್ಷ ದಶಕೋತ್ಸವದ ಸಿದ್ಧತೆಗಾಗಿ ಯೋಜನೆಗಳನ್ನು ರೂಪಿಸುತ್ತಿದೆ.

"ಔದ್ಯಮೀಕರಣ, ನಗರೀಕರಣಗಳಿಂದ ನಮ್ಮ ಹಳ್ಳಿಯ ಕಲೆಯಾದ ಜಾನಪದ ನಶಿಸುತ್ತಿದೆ. ಇಂತ ಕಲೆಯನ್ನು ಪೋಷಿಸುವುದು ಎಷ್ಟರಮಟ್ಟಿಗೆ ಸಮರ್ಪಕ" ಎಂದು ಪ್ರಶ್ನಿಸುವವರಿಗೆ–

"ಔದ್ಯೋಗಿಕ ಕ್ರಾಂತಿಯ ದಿನಗಳಲ್ಲೇ ಗಾಂಧೀಜಿ ತಕಲಿಯಿಂದ ನೂಲುವುದು, ಗ್ರಾಮ ಕೈಗಾರಿಕೆ, ಗ್ರಾಮಾಭ್ಯುದಯಗಳ ಕಡೆ ಅಪಾರ ಗಮನ ನೀಡಿ, ಈ ಯೋಜನೆಗಳು ಕಾರ್ಯಗತವಾಗಲು ಶ್ರಮಿಸಿದರು. ಹಳ್ಳಿಗಳ ದೇಶವಾದ ಭಾರತ ಹಳ್ಳಿಗಳ ಏಳಿಗೆ ಆಗದ ಹೊರತು ಪ್ರಗತಿ ಸಾಧಿಸದೆಂದು ಮನಗಂಡಿದ್ದರು ಗಾಂಧೀಜಿ. ಜನಪದ ಎಂದರೆ ಹಳ್ಳಿ. ಜಾನಪದ ಎಂದರೆ ಹಳ್ಳಿಗ. (ಕುಮಾರವ್ಯಾಸ ಭಾರತದಲ್ಲೂ ಈ ಪದ ಬಳಕೆ ಇದೆ) ಆದ್ದರಿಂದ ನಮ್ಮ ಹಳ್ಳಿಗಾಡಿನವರ ಸಂಸ್ಕೃತಿ, ಹಬ್ಬ–ಹರಿದಿನ, ಜಾತ್ರೆ–ಪರಸೆ–ಮೇಳ, ಆಟ–ಪಾಟಗಳ, ಮನೋಲ್ಲಾಸಕರ ಪ್ರಯೋಗಗಳು ಜಾನಪದ ಕಲೆಯ ಪ್ರಕಾರಗಳು. ಈ ಕಲಾಪ್ರಕಾರವನ್ನು ಉಳಿಸಿ, ಬೆಳೆಸುವುದು ಅತ್ಯಗತ್ಯ. ನಗರೀಕರಣದಿಂದ ಹಳ್ಳಿಗಳು ಬಡವಾಗುತ್ತಿರುವುದು ಸ್ವಲ್ಪ ಮಟ್ಟಿಗೆ ನಿಜವಾದರೂ ಸ್ವಚ್ಛಂದ ವಾತಾವರಣದಲ್ಲಿ ಅರಳುವ ಈ ಸ್ಫೂರ್ತಿದಾಯಕ ಕಲೆಯನ್ನು ಬದುಕಿಸುವುದು ಗ್ರಾಮ ಸಮಾಜವಿರುವವರೆಗೂ ಆಗಲೇಬೇಕಾದ ಕೆಲಸ" ಎಂದು ಸಮರ್ಥಿಸುತ್ತಾರೆ ಅಕಾಡೆಮಿ ಅಧ್ಯಕ್ಷ ಕರೀಂಖಾನ್.

"ಜಾನಪದ ಕಲಾವಿದರು, ರಸ್ತೆಯಲ್ಲಿ ಮೆರವಣಿಗೆಯ ರಂಗನ್ನು ಹೆಚ್ಚಿಸುವ (ಮಹಾರಾಜರ ಕಾಲದಿಂದಲೂ) ಕಲಾವಿದರಾಗಿಯೇ ಉಳಿದರೇ ಹೊರತು, ರಾಜರ ಆಸ್ಥಾನದಲ್ಲಿ, ಸಭೆಗಳಲ್ಲಿ ಗೌರವ ಪಡೆಯಲಿಲ್ಲ. ಅಂತೆಯೇ ಈಗ ಈ ಕಲಾವಿದರಿಗೆ ಸೂಕ್ತ ಮನ್ನಣೆ, ಪುರಸ್ಕಾರ, ಪ್ರಶಸ್ತಿ, ಸ್ಥಾನಮಾನಗಳನ್ನು ನೀಡುವುದು ಅವರ ಕಲೆಯ ಬಗ್ಗೆ ಆಳವಾದ ಅಧ್ಯಯನ, ಪ್ರಯೋಗಶೀಲತೆ; ಬೇರೆ ಬೇರೆ ಪ್ರದೇಶದ ಕಲಾವಿದರೊಂದಿಗೆ ವಿಚಾರವಿನಿಮಯ, ಪ್ರವಾಸ ಮುಂತಾದವುಗಳ ಮೂಲಕ ಈ ಕಲಾವಿದರಲ್ಲಿನ ಕೀಳರಿಮೆ ಹೋಗಲಾಡಿಸಲು ಅಕಾಡೆಮಿಗಳಂತಹ ಸಂಸ್ಥೆಗಳ

ಯತ್ನ ಸಾಗಿದೆ."

"ಈ ದಿಸೆಯಲ್ಲಿ ಜಾನಪದ ಕಲಾವಿದರಲ್ಲಿ ಆತ್ಮವಿಶ್ವಾಸ ಮೂಡಿಸಬಲ್ಲ, ಗ್ರಾಮ, ಮಂಡಲ, ತಾಲ್ಲೂಕು, ಜಿಲ್ಲಾ, ರಾಜ್ಯ ಹಾಗೂ ಅಂತರರಾಜ್ಯ ಮಟ್ಟಗಳಲ್ಲಿ ವೇದಿಕೆ ನಿರ್ಮಿಸಿಕೊಡಬಲ್ಲ ಹಲವು ಕಲಾಮೇಳಗಳು; ವಿಚಾರ ಸಂಕಿರಣಗಳನ್ನು (ವೈಜ್ಞಾನಿಕ ದೃಷ್ಟಿಯ ವಿಶ್ಲೇಷಣಾತ್ಮಕ ಚರ್ಚೆ); ಜಾನಪದ ಸಮಾವೇಶಗಳು; ಮೂಡಲಪಾಯ ಯಕ್ಷಗಾನ, ದೊಡ್ಡಾಟದ ಪ್ರಕಾರಗಳು, ಸೂತ್ರದ ಬೊಂಬೆಯಾಟ ಹೀಗೆ ವಿಭಿನ್ನ ಪ್ರಕಾರಗಳ ಜಾನಪದ ಕಲೆಯ ಪ್ರಯೋಗಾತ್ಮಕ ಚಟುವಟಿಕೆಗಳಿಗೆ ಇಂಬು ಕೊಡುವ ಕಮ್ಮಟಗಳು; ಜಾನಪದ–ಕೃತಿಗಳ (ಯಕ್ಷಗಾನ–ದೊಡ್ಡಾಟ) ಹಸ್ತಪ್ರತಿ ಸಂಗ್ರಹ ; ಜಾನಪದ ಕಲಾವಿದರಿಗೆ ಮಾಸಾಶನ–ಗೌರವಧನ ನೀಡಿಕೆಗೆ ಆಯ್ಕೆ ಮಾಡುವುದು; ಜಾನಪದ ಗದ್ಯ–ಪದ್ಯ, ವಿಚಾರ–ವಿಮರ್ಶೆ–ಸಂಶೋಧನೆ ಕುರಿತ ಪುಸ್ತಕಗಳಿಗೆ ಧನಸಹಾಯ/ಬಹುಮಾನ ಯೋಜನೆ – ಮುಂತಾದ ಯೋಜನೆಗಳನ್ನು ಅಕಾಡೆಮಿ ಕಾರ್ಯಗತಗೊಳಿಸುತ್ತ ಬಂದಿದೆ."

"ಇನ್ನೂ ಸಾಕಷ್ಟು ಕೆಲಸ ಆಗಬೇಕಿದೆ. ಈ ಕ್ಷೇತ್ರದಲ್ಲಿ ಹಲವಾರು ವೃದ್ಧ ಕಲಾವಿದರ ಕಲಾ ಪ್ರದರ್ಶನಗಳ ವಿಡಿಯೋ–ಆಡಿಯೋ ಕ್ಯಾಸೆಟ್ (ಈಗ ಅಕಾಡೆಮಿ ಸುಮಾರು ನೂರು ಗಂಟೆಗಳಷ್ಟು ಸಂಗ್ರಹಿಸಿದೆ)ಗಳನ್ನು ಇನ್ನಷ್ಟು ವ್ಯಾಪಕವಾಗಿ ಮಾಡಬೇಕಿದೆ. ಜಾನಪದ ಕಲಾಪ್ರಕಾರ, ಪರಿಕರಗಳ, ವೇಷಭೂಷಣಗಳ, ಕಲಾವಿದರ ಬದುಕಿನ ಪರಿಚಯ, ಭಾವಚಿತ್ರಗಳ ಸಂಗ್ರಹ ಮುಂತಾದವುಗಳಿಂದ ಸಮೃದ್ಧವಾದ ಒಂದು ವಸ್ತು ಸಂಗ್ರಹಾಲಯ, ದೊಡ್ಡ ಗ್ರಂಥಾಲಯ ನಿರ್ಮಾಣ ಆಗಬೇಕಿದೆ. ಇದಕ್ಕೆಲ್ಲ ಆರ್ಥಿಕ ಬಲ

ಸಾಕಷ್ಟಿರಬೇಕು. ಸರಕಾರ ಈ ಕಲೆಗಾಗಿ ನೀಡುತ್ತಿರುವ ಅನುದಾನ, ಹಣ ವಿನಿಯೋಗ ಸಾಲದು. ಇದ್ದುದರಲ್ಲಿಯೇ ಕಾರ್ಯ-ಕಲಾಪ ನಡೆಸಿಕೊಂಡು ಹೋಗುತ್ತಿದ್ದೇವೆ.''

''ಬರುವ ವರ್ಷ ಅಕಾಡೆಮಿಯ ದಶಕೋತ್ಸವಕ್ಕೆ ವಿಶೇಷ ಅನುದಾನದ ಅಗತ್ಯ ಇದ್ದೇ ಇದೆ. ಈಗ ದಶಮಾನೋತ್ಸವ ಆಚರಣೆಗಾಗಿ ಅಕಾಡೆಮಿ ಸದಸ್ಯರು, ಮತಿತ್ತರ ಜಾನಪದ ತಜ್ಞರುಗಳ ಜೊತೆ ವಿಚಾರ-ವಿನಿಮಯ ನಡೆಸಿ ಹಲವು ಉಪಯುಕ್ತ ಕಾರ್ಯ-ಯೋಜನೆಗಳನ್ನು ಹಮ್ಮಿಕೊಳ್ಳುವ ಸಿದ್ಧತೆ ಸಾಗಿದೆ'' ಎನ್ನುವ ಕರೀಂಖಾನ್ ಅವರಿಗೆ ಎಂಬತ್ತರ ಇಳಿವಯಸ್ಸಿನಲ್ಲೂ ತಾವು ಕೈಕೊಂಡ ಕಾರ್ಯಗಳನ್ನು ಕೈಗೂಡಿಸಲು ತುಂಬಿದ ಉತ್ಸಾಹ-ಕ್ರಿಯಾಶೀಲತೆ. ಅಪ್ಪಟ ಗಾಂಧಿವಾದಿ, ದಿಟ್ಟ ಹೋರಾಟಗಾರ ಕರೀಂಖಾನ್ ಸ್ವಾತಂತ್ರ್ಯ ಹೋರಾಟದ ದಿನಗಳಲ್ಲಿ ಏಳು ಬಾರಿ ಜೈಲು ವಾಸ ಅನುಭವಿಸಿದರೂ ಜನಪದ ಗೀತೆಗಳ ಮೂಲಕ ತಮ್ಮ ಹೋರಾಟದ ಬಾವುಟವನ್ನು ಹಾರಿಸುತ್ತಲೇ ಬಂದರು. ಸ್ವಾತಂತ್ರ್ಯ ಬಂದ ನಂತರ ಸ್ವಾತಂತ್ರ್ಯ ಹೋರಾಟಗಾರರು, ದೇಶಭಕ್ತರೆನಿಸಿಕೊಂಡವರೆಷ್ಟು ಜನ ಗಾಂಧಿವಾದ, ತತ್ವ-ನಿಷ್ಠೆಗಳನ್ನು ಇಂದಿಗೂ ಉಳಿಸಿಕೊಂಡಿದ್ದಾರೆ? - ಇಂಥವರು ಸಿಗುವುದಪರೂಪ. ಇಂಥ ವಿರಳ ಜೀವಿ, ಕ್ಷುಲ್ಲಕ ರಾಜಕಾರಣ, ಹುಸಿತನ, ಡಾಂಭಿಕತೆ ಹಾಗೂ ಪ್ರಚಾರ ಪ್ರಿಯತೆಯಿಂದ ದೂರವಾದ ಸರಳ ಜೀವಿ ಕರೀಂಖಾನ್ ಸರಕಾರ ನೀಡುತ್ತಿರುವ ಐದುನೂರು ರೂಪಾಯಿಗಳ ಗೌರವ ಧನದಲ್ಲಿ ನಗರದ ಬಸವನಗುಡಿಯ ಹೋಟೆಲೊಂದರ ಚಿಕ್ಕ ಕೊಠಡಿಯಲ್ಲಿ ಜೀವನ ಸಾಗಿಸುತ್ತಿದ್ದಾರೆ.

ಆದರೆ ಅವರ ಜಾನಪದದ ಕೈಂಕರ್ಯಕ್ಕೇನೂ ಬಡತನವಿಲ್ಲ. ಅಕಾಡೆಮಿ ಅಧ್ಯಕ್ಷರಾಗಿ ಈ ಎರಡು ವರ್ಷಗಳಲ್ಲಿ ಗ್ರಾಮೀಣ ಸಂಸ್ಕೃತಿಯೊಂದಿಗೆ ಮತ್ತೆ ಬೆರೆತು ನಾಡಿನಾದ್ಯಂತ ಸಂಚರಿಸಿ, ಜಾನಪದ ಕಲೆಯ ಬಗೆಗೆ ಕಾಳಜಿಯ ಕೊಡುಗೆ ನೀಡುತ್ತಿದ್ದಾರೆ.

ವೃದ್ಧರಿಗೆ ಭದ್ರ ನೆಲೆ (ಆರ್ಥಿಕವಾಗಿ)ಯನ್ನೊದಗಿಸಬೇಕಾದ ತೀವ್ರತರ ಹೊಣೆ ನಮ್ಮ ಸರಕಾರ ಹಾಗೂ ಸಂಘ-ಸಂಸ್ಥೆಗಳ ಮೇಲಿದೆ. ನಮ್ಮ ಜಾನಪದವನ್ನು ಕಾಪಾಡಿಕೊಂಡಂತೆ ಈ ಜಾನಪದ ಜೋಗಿಯನ್ನು, ಸಂಸ್ಕೃತಿಪ್ರಿಯರು ಕಾಪಾಡಿಕೊಳ್ಳಬೇಕಿದೆ.

ಸಂಯುಕ್ತ ಕರ್ನಾಟಕ

ಜಾನಪದಕ್ಕೊಂದು ಹೆಮ್ಮೆಯ ಕೊಡುಗೆ

ಜಿ. ಎನ್. ಮೋಹನ್

ಆಧುನಿಕತೆಯ ಗಾಳಿಯಲ್ಲಿ ಆರುತ್ತಿರುವ ಸೊಡರುಗಳನ್ನು ರಕ್ಷಿಸಿ, ಮುಂದಿನ ಪೀಳಿಗೆಗೆ ನೀಡುವುದು ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಗುರಿ. ಈ ನಿಟ್ಟಿನಲ್ಲಿ ಗಿರಿಜನರ ಬದುಕನ್ನು ಅವರ ದಿನನಿತ್ಯದ ಪರಿಸರದಲ್ಲಿಯೇ ಚಿತ್ರೀಕರಿಸಲಾಯಿತು. ಅವರ ಬದುಕಿನ ಬಗೆಯ ಒಂದು ಕಣ್ಣೋಟ ಸಿಕ್ಕಿತು. ಜಾನಪದ ಅಕಾಡೆಮಿಯ ಒಡಲಲ್ಲಿರುವ ಹಲವು ನೂರು ಗಂಟೆಗಳ ವಿಡಿಯೋ ಕ್ಯಾಸೆಟ್ ಸಂಗ್ರಹದ ಬಗ್ಗೆ ಈ ಲೇಖನ.

ಸಂಯುಕ್ತ ಕರ್ನಾಟಕ

ಬುಡಕಟ್ಟು ಜನಾಂಗ–ಜಾನಪದ ಕಲೆಗಳ ವಿಡಿಯೋ ಚಿತ್ರ

ಜಾನಪದಕ್ಕೊಂದು ಹೆಮ್ಮೆಯ ಕೊಡುಗೆ

ಹಾಲಕ್ಕಿಗಳ ಹಾಡು ಚಿತ್ರ : ವಿ. ಶ್ರೀನಿವಾಸಮೂರ್ತಿ

24, ಜೂನ್ 1988

ಜಾನಪದ ಒಡಲಲ್ಲಿ ಆಯ್ದಷ್ಟೂ ಮುತ್ತುಗಳೇ. ಜಾನಪದದ ಒಡಲು ಒಂದು ರೀತಿಯಲ್ಲಿ ಬತ್ತಲಾರದ ಗಂಗೆ. ದಟ್ಟ ಕಾಡುಗಳ ಮಧ್ಯೆ ಮನೆ ಮಾಡಿಕೊಂಡು ನಿಸರ್ಗದ ಮಧ್ಯೆ ಏಗುವ ಬುಡಕಟ್ಟಿನ ಬದುಕು ನಿಜಕ್ಕೂ ಸುಂದರ. ಹಾರುವ ಬೆಳ್ಳಕ್ಕಿ, ವಿಶಾಲ ಕಡಲು, ತೂಗುವ ತೆಂಗು ಇವುಗಳ ಜೊತೆ ಜೊತೆಗೇ ಬೆಸೆದುಕೊಂಡಿರುವ ಬುಡಕಟ್ಟುಗಳು ಅವಿಭಾಜ್ಯ ಅಂಗವಾಗಿದೆ.

ಎತ್ತರದ ದಿಬ್ಬಗಳ ಮಧ್ಯೆ, ಗಿರಿ ಕಾನನಗಳ ಮಧ್ಯೆ, ಆಳದ ಕಣಿವೆಗಳಲ್ಲಿ ಎಲ್ಲೆಂದರಲ್ಲಿ ನೀರು ಹರಿಯುವ ಜಾಗವಿದ್ದರೆ ಸಾಕು ಬಿಡಾರ ಹೂಡಿರುವ ಈ ಬುಡಕಟ್ಟುಗಳ ಬಳಿಗೇ ಹೋಗಿ ಆ ಪ್ರಕೃತಿಯ ಹಿನ್ನೆಲೆಯಲ್ಲೇ ಅವರ ಬದುಕನ್ನು ಸೆರೆ ಹಿಡಿದು ಬಂದ ಹೆಮ್ಮೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯದ್ದು.

ಇತ್ತೀಚೆಗೆ ತಾನೆ ಹೊಸದಾಗಿ ರೂಪುಗೊಂಡ ಅಕಾಡೆಮಿ ಹಿರಿಯ ಸಾಹಿತಿ ಎಸ್. ಕೆ. ಕರೀಂಖಾನ್‌ರವರ ಅಧ್ಯಕ್ಷತೆಯಲ್ಲಿ ಹಲವು ಹೊಸ ಬಗೆಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಅದರಲ್ಲಿ ಬುಡಕಟ್ಟು ಜನಾಂಗ, ಜಾನಪದ ಕಲೆಗಳ ವಿಡಿಯೋ ಚಿತ್ರೀಕರಣ ಅತ್ಯಂತ ಮುಖ್ಯವಾದದ್ದು.

ಬುಡಕಟ್ಟು ಜನಾಂಗಗಳು ಇಂದು ಕ್ರಮೇಣ ನಾಗರಿಕತೆಯ ಗಾಳಿಗೆ ತೆರೆದುಕೊಳ್ಳುತ್ತಿದೆ. ಮುಂದೆ ಪ್ರಕೃತಿಯ ಮಧ್ಯೆ ಬುಡಕಟ್ಟುಗಳು ಕಾಣಸಿಗದ ಸಂದರ್ಭ ಒದಗಿಬರಬಹುದು. ಆ ಮುಂಚೆಯೇ ಮುಂದಿನ ಪೀಳಿಗೆಗಾಗಿ ಇದನ್ನು ಕಾಯ್ದಿಡಲು ಈ ವಿಡಿಯೋ ಚಿತ್ರೀಕರಣವನ್ನು ಹಮ್ಮಿಕೊಂಡಿದ್ದೇವೆ ಎನ್ನುತ್ತಾರೆ ಎಸ್. ಕೆ. ಕರೀಂಖಾನ್.

ಇತ್ತೀಚೆಗೆ ತಾನೆ ಜಾನಪದ ಯಕ್ಷಗಾನ ಅಕಾಡೆಮಿ ತಾನು ನಡೆಸಿದ ವಿಡಿಯೋ ಚಿತ್ರೀಕರಣದ ಪ್ರದರ್ಶನವನ್ನು ತನ್ನ ಕಾರ್ಯಾಲಯದಲ್ಲಿ ಇಟ್ಟುಕೊಂಡಿತ್ತು. ಪಶ್ಚಿಮ ಘಟ್ಟಗಳು ಜಾನಪದ ಬುಡಕಟ್ಟಿನ ತವರೂರು. ಈ ಪಶ್ಚಿಮ ಘಟ್ಟಗಳ ಮಧ್ಯೆ ಇರುವ ಎಲ್ಲಾ ಬುಡಕಟ್ಟು ಜನಾಂಗಗಳತ್ತ ಅಕಾಡೆಮಿ ವಿಡಿಯೋ ಕಣ್ಣನ್ನು ಹರಿಸಿದೆ. ಶಿವಮೊಗ್ಗ ಜಿಲ್ಲೆಯ ಗೊಂಡರು 5 ಸಾವಿರ ಅಡಿ ಎತ್ತರದ ಬೆಟ್ಟಗಳ ಕುಣುಬಿಯರು ಉತ್ತರ ಕನ್ನಡದ ಸಿದ್ದಿಯರು, ಮುಕ್ರಿಯರು, ಹಾಲು ಹೊಳೆ ಹರಿಸುವ ಗೌಳಿಗರು, ಕೊಡಗಿನ ಕುಡಿಯರು, ಯರವರು, ಫಣಿಯರು, ಮೈಸೂರಿನ ಸೋಲಿಗರಲ್ಲದೆ ಚಿಟ್‌ಮೇಳ, ಕಿನ್ನರಿಜೋಗಿ ಮೇಳ, ಪಟಕುಣಿತ, ಚಾಡಿಕೆ, ವೀರಗಾಸೆ, ಲಂಬಾಣಿ ಕುಣಿತ, ಸೋಮನ ಕುಣಿತ, ಕೋಲಾಟ, ಪೂಜಾಕುಣಿತ, ಕರಪಾಲ ಮೇಳಗಳಂತಹ ಜಾನಪದ ಕಲೆಗಳ ಬಗ್ಗೆಯೂ ಅಕಾಡೆಮಿ ಗಮನ ಹರಿಸಿದೆ.

ಸಹ್ಯಾದ್ರಿಯ ಶ್ರೇಣಿಯಲ್ಲಿ ಹರಡಿದ ಈ ಕಲೆಗಳನ್ನು ಸೆರೆ ಹಿಡಿಯುವುದು ಒಂದು ಸಾಹಸವೇ ಸರಿ. ಗುಡ್ಡಗಳನ್ನು ಏರಿ, ಕಣಿವೆ ಇಳಿದು ಜನಾಂಗಗಳನ್ನು ಕಾಪಿಡುವ ಶ್ರಮದ ಕೆಲಸವನ್ನು ವಿ. ಶ್ರೀನಿವಾಸಮೂರ್ತಿ ಅತ್ಯಂತ ಸಮರ್ಪಕವಾಗಿ ನಿರ್ವಹಿಸಿದ್ದಾರೆ.

ಕಡಲತೀರ, ಹಾರುವ ಮಿಂಚುಳ್ಳಿಗಳು, ಯಾತ್ರೆಗೆ ಸಿದ್ಧವಾದ ಬೋಟ್‌ಗಳು, ಮೀನು ಹಿಡಿಯಲು ಹರಡಿದ ಬಲೆ, ರೆಕ್ಕೆ ತೆರೆದ ಬೆಳ್ಳಕ್ಕಿಗಳ ಮೂಲಕ ಮೊದಲು ಸ್ಥಳವನ್ನು ಸ್ಪಷ್ಟಪಡಿಸಿ ನಂತರ ಕಾಡಿನೊಳಗೆ ಕರೆದೊಯ್ದು ಅವರ ಒಂದೊಂದೇ ಬದುಕನ್ನು ಈ ಚಿತ್ರಗಳು ಬಿಚ್ಚಿಡುತ್ತದೆ. ಜಾನಪದ ಬುಡಕಟ್ಟುಗಳ ಹಾಗೂ ಕುಣಿತಗಳ ಕ್ಯಾಸೆಟ್‌ಗಳು ಜಾನಪದ ಅಕಾಡೆಮಿಯ ಹೆಮ್ಮೆಯ ಗರಿ.

5 ಸಾವಿರ ಅಡಿ ಎತ್ತರದ ಮೇಲೆ ಸೈಕಲ್‌ಗಳನ್ನೇ ಕಂಡರಿಯದ ಮುಗ್ಧರನ್ನೊಳಗೊಂಡ ಮೇಘಾನೆಯ ಕುಣುಬಿಯರು ಲಿಂಗನಮಕ್ಕಿ ಜಲಾಶಯ ಮುಳುಗಡೆಯಾದಾಗ ಅಲ್ಲಿಂದ ವಲಸೆ ಬಂದು ಮೇಘಾನೆಯ ಈ ಬೆಟ್ಟಗಳ ಮೇಲೆ ನೆಲೆನಿಂತಿದ್ದಾರೆ. ಬೆಟ್ಟಗುಡ್ಡಗಳ ಮೇಲೆ ಹೊಲಗದ್ದೆ ಮಾಡಿಕೊಂಡು ಬದುಕುತ್ತಿರುವ ಇವರಿಗೆ ನಾಗರಿಕತೆಯ ಸೋಂಕೆ ಇಲ್ಲ. ಹಾಲಕ್ಕಿ ಒಕ್ಕಲಿಗರದು ಮಾತ್ರ ವರ್ಣಮಯ ಬದುಕು. ಹಾಲು, ಅಕ್ಕಿ ಎಂಬ ಪದಗಳು ಸೇರಿ ಹಾಲಕ್ಕಿಯಾದ ಈ ಜನಾಂಗದ ಜೀವನದಲ್ಲೇ ಈ ಎರಡರದ್ದೂ ಹೊಳೆ ಹರಿಯುತ್ತದೆ. 15 ಅಡಿಗಳ ಮುಂಗಾಲುಗಳನ್ನು ಕಟ್ಟಿ ಕುಣಿಯುವ ಅವರ ಕಲೆ ನಿಜಕ್ಕೂ ಮೂಗಿನ ಮೇಲೆ ಬೆರಳಿಡುವಂತೆ ಮಾಡುತ್ತದೆ. ಹಾಲು ಗೌಳಿಗರ ಉಸಿರು. ಅವರ ಬದುಕಿನ ಚಿತ್ರಣ ಅತ್ಯಂತ ಸೊಗಸಾಗಿ ಮೂಡಿ ಬಂದಿದೆ.

ಅಕಾಡೆಮಿಯ ರಿಜಿಸ್ಟ್ರಾರ್

ಹಿ.ಚಿ. ಬೋರಲಿಂಗಯ್ಯ ಈ ಕ್ಯಾಸೆಟ್ ಬದುಕಿಗೆ ಸಾಹಿತ್ಯವನ್ನು ಒದಗಿಸಿದ್ದಾರೆ. ಜಾನಪದದಲ್ಲಿ ಪದವಿ ಪಡೆದ ಇವರು ಅತ್ಯಂತ ಸರಳವಾದ ಭಾಷೆಯಲ್ಲಿ ನೇರವಾಗಿ ಮನ ಮುಟ್ಟುವಂತೆ ಜನಾಂಗಗಳ ಬದುಕಿನ ಬಗ್ಗೆ ಬರೆದಿದ್ದಾರೆ. ಬೋರಲಿಂಗಯ್ಯನವರು ಕಾಡುಗುಡ್ಡಗಳಲ್ಲಿ ಜನಾಂಗಗಳ ಜೊತೆಯಲ್ಲಿ ಅಲೆದಾಡಿದ್ದರ ಪರಿಣಾಮವಾಗಿ ಸಾಹಿತ್ಯವೂ ಜಾನಪದದ ಗಟ್ಟಿತನದಿಂದ ಕೂಡಿದೆ. ನಾಗೇಶರಾವ್ ಉತ್ತಮ ಕಂಠ ಹೊಂದಿದ್ದು, ಜನಾಂಗದ ಬದುಕಿಗೆ ಕಂಚಿನ ಕಂಠ ಒದಗಿಸಿದ್ದಾರೆ.

ನಮ್ಮ ಮುಂದಿನ ಗುರಿ ಜಾತ್ರೆಗಳೆಡೆ ಎನ್ನುವ ಕರೀಂಖಾನರು, ಕರ್ನಾಟಕದ ಎಲ್ಲಾ ಜಾಗಗಳಲ್ಲಿ ಹರಡಿರುವ ವಿಶಿಷ್ಟ ರೀತಿಯ ಜಾತ್ರೆಗಳನ್ನು ಸೆರೆಹಿಡಿಯುವ ಯೋಜನೆ ಹಾಕಿದ್ದಾರೆ. ಅದರಂತೆ ಉಡುಪಿ ಬಳಿಯ ಹಿರಿಯಡ್ಕದ 'ಸಿರಿ' ಜಾತ್ರೆ ಹಾಗೂ ಗುಲ್ಬರ್ಗಾ ಜಿಲ್ಲೆಯ ಮಾಶ್ಯಾಳದ ಚೌಡೇಶ್ವರಿ ಜಾತ್ರೆ ಚಿತ್ರಿಸಿಕೊಂಡಿದ್ದಾರೆ.

ಇದು ನಿಜಕ್ಕೂ ಹೆಮ್ಮೆಯ ಕೆಲಸ ಹಾಗೂ ನಗರದವರಿಗೆ ಒಂದು ಅತ್ಯುತ್ತಮ ಕೊಡುಗೆ. ಈ ಎಲ್ಲಾ ಕಾರ್ಯಗಳಲ್ಲೂ ತೊಡಗಿಸಿಕೊಂಡ ಜಾನಪದ ಅಕಾಡೆಮಿಯವರು ಅಭಿನಂದನಾರ್ಹರು.

ಮಣ್ಣಿನ ಮಕ್ಕಳ ಮನವರಳಿದ ಕ್ಷಣ

ಸತ್ಯಾ

ಪಶ್ಚಿಮಘಟ್ಟದುದ್ದಕ್ಕೂ ಹರಡಿರುವ ಗಿರಿಜನರು ಹಾಡಿದರು, ಕುಣಿದರು, ಕುಪ್ಪಳಿಸಿದರು. ಆಯಾಸವಿಲ್ಲದ ಕುಣಿತ, ಮಾಸದ ನಗೆಗಳ ಗಿರಿಜನರು ಜಾನಪದ ಮೇಳದಲ್ಲಿ ಹಲವರ ಮನ ಅರಳಿಸಿದರು. ಆ ಕ್ಷಣದತ್ತ ಒಂದು ನೋಟ.

ಮಣ್ಣಿನ ಮಕ್ಕಳ ಮನವರಳಿದ ಕ್ಷಣ

'ನೀನಾಸಂ' ಕಲಾವಿದ/ದೆಯರೊಂದಿಗೆ...

ರಂಗದಿಂದ ಬಂದಿಷ್ಟು ದೂರ

18, ಫೆಬ್ರವರಿ 1988

ರಷ್ಯಾದ ಬೀದಿ ಬೀದಿಗಳಲ್ಲಿ ಡೊಳ್ಳಿನ 'ಢಕ್ ಢಕ್' ಮಾರ್ದನಿಸಿ, ಅವರ ಎದೆ ಬಡಿತ ಹೆಚ್ಚಿಸಿ, ಬಂದ ಕಣ್ಣೂರಿನ ಯುವಕ ಸಂಘದ ಡೊಳ್ಳುಗಳು ಮತ್ತೆ ಮೊನ್ನೆ ಸಾಗರದಲ್ಲಿ ನೆಲ ನಡುಗಿಸಿದವು. 'ಡಡ್ ಡಡ್' ಎಂದು ನಿಧಾನವಾಗಿ ಎದೆ ಬಡಿತಕ್ಕೆ ಕೂಗಿ ಆರಂಭವಾದ ಡೊಳ್ಳಿನ ಬಡಿತ ತಾರಕಕ್ಕೇರುತ್ತಾ ಎಲ್ಲರ ಎದೆಬಡಿತವನ್ನೂ ತನ್ನ ಬಡಿತದ ತಾಳಕ್ಕೆ ಸರಿ ಹೊಂದಿಸಿತ್ತು. ಚಳಿಗಾಲದ ಸರಿ ರಾತ್ರಿ 10 ಗಂಟೆಯಲ್ಲಿ ಸಾಗರದ ಬೃಹತ್ ಪುರಸಭಾ ಬಯಲು ಮಂದಿರ ಜನರಿಂದ ತುಂಬಿಹೋಗಿತ್ತು.

ಜಾನಪದವೇ ಹಾಗೆ. ಜನರ ಒಡನಾಡಿಯಾದ ಇದು ಮಾಂತ್ರಿಕನಂತೆ ಜನರನ್ನು ಸೆಳೆಯುತ್ತದೆ. ಹಾಡಲು ಪದ, ಜೊತೆಗೊಂದಿಷ್ಟು ಕುಣಿತವಿದ್ದರೆ ಜನಸ್ತೋಮ ನೆರೆಯುತ್ತದೆ. ಅಂತಹುದರಲ್ಲಿ ಗಿರಿಜನರ ಜಾನಪದ ವಿಚಾರ, ಕಲೆ, ಕುಣಿತ ಎಂದರೆ ಕೇಳಬೇಕೆ? ಗಿರಿ, ಕಾನನ, ಕರಾವಳಿಯ ಪ್ರದೇಶವಾದ ಪಶ್ಚಿಮ ಘಟ್ಟಗಳು ಶ್ರೀಮಂತ ಪ್ರಕೃತಿಯ ಮಕ್ಕಳು ಗಿರಿಜನರನ್ನೂ ತನ್ನ ಒಡಲಲ್ಲಿಟ್ಟುಕೊಂಡಿದೆ. ಕೊಡಗಿನ ಕೆಂಬಟ್ಟಿಯವರಿಂದ ಹಿಡಿದು ಕೊರಗರು, ಗೊಂಡರು, ಸಿದ್ದಿಯರು, ಜೇನು ಕುರುಬರು, ಸೋಲಿಗರು, ಕುಡುಬಿಯರು, ಮಲೆಕುಡಿಯರು, ಮುಕ್ರಿಯರು, ಹಾಲಕ್ಕಿ ಒಕ್ಕಲಿಗರು ಈ ಪ್ರದೇಶದುದ್ದಕ್ಕೂ ಚಾಚಿಕೊಂಡಿದ್ದಾರೆ.

ಈ ಘಟ್ಟದ ಹಸಿರಿನಲ್ಲಿರುವ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಇದೇ ಡಿಸೆಂಬರ್‌ನ ಮೊದಲ ವಾರದಲ್ಲಿ ಗಿರಿಜನ ಹಾಗೂ ಅವರ ಜಾನಪದ ಕಲಾ ಪ್ರಕಾರಗಳನ್ನು ಕುರಿತ ವಿಚಾರ ಸಂಕಿರಣ ಮತ್ತು ಕಲಾಮೇಳ ನಡೆಯಿತು. ಮಲೆನಾಡು ಜಾನಪದ ಮತ್ತು ಯಕ್ಷಗಾನ ಕಲಾಪ್ರತಿಷ್ಠಾನ ಹಾಗೂ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು ಜೊತೆಗೂಡಿ ನಡೆಸಿದ ಈ ಕಾರ್ಯಕ್ರಮ ಗಿರಿಜನರನ್ನು ಕುರಿತ ಪ್ರಥಮ ಬೃಹತ್ ಮೇಳ.

1981ರಲ್ಲಿ ಆರಂಭವಾದ ಮಲೆನಾಡು ಪ್ರತಿಷ್ಠಾನ ಮೊದಲಿಗೆ ಕೇವಲ ಯಕ್ಷಗಾನದ ಪ್ರತಿಷ್ಠಾನವಾಗಿತ್ತು. ಬರ ಬರುತ್ತಾ ಮಲೆನಾಡಿನ ಸೊಬಗಿನಲ್ಲಿ ಹುದುಗಿರುವ ಜಾನಪದ ಕಲೆಗಳನ್ನು ಬೆಳಕಿಗೆ ತರಲು ಹಾಗೂ ಉಳಿಸಲು ನಿರ್ಧರಿಸಿ, ಪ್ರತಿಷ್ಠಾನ ತನ್ನ ಕಾರ್ಯ ವ್ಯಾಪ್ತಿ ಹೆಚ್ಚಿಸಿಕೊಂಡು ಜಾನಪದ ಮತ್ತು ಯಕ್ಷಗಾನ ಕಲಾ ಪ್ರತಿಷ್ಠಾನವಾಗಿದೆ. ಸಾಗರದ ಜಾನಪದ ಪ್ರೇಮಿ ಹುಚ್ಚಪ್ಪ ಮಾಸ್ತರ್ ನೇತೃತ್ವದಲ್ಲಿ ಹಲವಾರು ಕಾರ್ಯಕ್ರಮಗಳನ್ನು ಈ ಪ್ರತಿಷ್ಠಾನ ಹಮ್ಮಿಕೊಂಡಿದೆ.

ನೂತನ ಅಧ್ಯಕ್ಷರ ನೇತೃತ್ವದಲ್ಲಿ ಕೆಲಸ ಆರಂಭಿಸಿರುವ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯೂ

ಬಿಡುವಿಲ್ಲದ ಕೆಲಸ ಹಮ್ಮಿಕೊಂಡಿದೆ. 82ರ ಹರೆಯದ ಅಧ್ಯಕ್ಷರಾದ ಎಸ್.ಕೆ. ಕರೀಂ ಖಾನರು ನಾಡಿನಾದ್ಯಂತ ಓಡಾಡಿ ಜಾನಪದ ಕಲೆಯನ್ನು ಜೀವಂತಗೊಳಿಸಲು ಹುರುಪಿನಿಂದಿದ್ದಾರೆ.

ಜನಜಂಗುಳಿಯ ಜಂಜಾಟಗಳಿಂದ ದೂರವೇ ನೆಲಸಿ, ಪ್ರಕೃತಿಯ ಮಧ್ಯೆ ಮೌನವಾಗಿ ಮುಲುಗುವ ಗಿರಿಜನರ ಜೋಳಿಗೆಯೊಳಗಿನ ಸರಕನ್ನೆಲ್ಲ ಜಾಲಾಡುವಂತಿತ್ತು ಈ ಕಾರ್ಯಕ್ರಮ.

ಧಾರ್ಮಿಕ ಆಚರಣೆಗಳನ್ನೇ ಪ್ರಮುಖವಾಗಿರಿಸಿಕೊಂಡು ನಿತ್ಯ ಜೀವನ ರೂಪಿಸಿಕೊಂಡಿರುವ ಗಿರಿಜನರ ಬದುಕು ಕುತೂಹಕಲಕರ; ವಿಶೇಷ ಆಸಕ್ತಿ ಹುಟ್ಟಿಸುತ್ತದೆ. ಅವರ ನಂಬಿಕೆ, ಆಚಾರ–ವಿಚಾರಗಳು, ಆಚರಿಸುವ ಮಡಿ–ಮೈಲಿಗೆ–ನಿಯಮಗಳು, ಹಬ್ಬ–ಹರಿದಿನ, ಮದುವೆ–ಮುಂಜಿಯಂತಹ ಸಮಾರಂಭಗಳು ಆಚರಣೆಯ ಮಟ್ಟಿಗೆ ಬಹಳ ಅರ್ಥಪೂರ್ಣ. ಅವರ ಪ್ರತಿಯೊಂದು ನಂಬಿಕೆಯ ಹಿನ್ನೆಲೆಯಲ್ಲೂ ಬಲವಾದ ಕಾರಣ, ಘಟನೆ ಇದ್ದೇ ಇರುತ್ತದೆ.

ಹಬ್ಬ, ಮದುವೆ ಮುಂತಾದ ಶುಭ ಸಂದರ್ಭಗಳಲ್ಲಿ ಹಲವು ಗಿರಿಜನ ಬುಡಕಟ್ಟುಗಳಲ್ಲಿ ಹಳ್ಳದಲ್ಲಿಯೇ ಸ್ನಾನ ಮಾಡಬೇಕೆಂಬ ನಿಯಮವಿದೆ. ಕಾರಣ ಬೇಸಾಯವನ್ನೇ ಕಸುಬನ್ನಾಗಿಟ್ಟುಕೊಂಡ ಬುಡಕಟ್ಟಿನ ಜನ ತಮ್ಮ ಬೆಳೆಗೆ ನೀರು ಒದಗಿಸುವ ಈ ಹಳ್ಳ, ಹೊಳೆಗಳ ಪಾವಿತ್ರ್ಯ ಹಾಗೂ ಮಹತ್ವದ ಬಗ್ಗೆ ತೋರಿಸುವ ಗೌರವ ಇದು.

ಕೃಷಿ, ಬೇಸಾಯ ಬಿಟ್ಟರೆ ಮತ್ತೆ ಮುಖ್ಯ ಕಸುಬು ಬೇಟೆ ಮಾಡುವುದು ಹಾಗೂ ಹೈನುಗಾರಿಕೆ. ಮದುವೆ ನಿಶ್ಚಯವಾದ ಮೇಲೂ ಮದುವೆಯ ಹಿಂದಿನ ದಿನ ಗಂಡು ಭಾರೀ ಭೇಟೆ ತರದಿದ್ದಲ್ಲಿ ವಧು ಬೇರೆ

ಯವರ ಪಾಲಾಗುತ್ತಾಳೆ.

ಎಮ್ಮೆ, ಹಸುಗಳನ್ನು ಸಾಕಿ ಹಾಲು, ಮೊಸರು, ತುಪ್ಪ ಮಾರುವ ಗಿರಿಜನರು ಈ ಪ್ರಾಣಿಗಳ ಬಗ್ಗೆ ತೋರುವ ಪ್ರೀತಿ ಹಾಗೂ ಮುತುವರ್ಜಿ ಅತಿ ಎನಿಸುವಷ್ಟು. ಹಾಲು ಕರೆಯುವ ಕೆಲಸಕ್ಕೆ ವಿಶೇಷವಾಗಿ ಒಬ್ಬ ವ್ಯಕ್ತಿಯನ್ನು ನೇಮಿಸುವುದರ ಜೊತೆಗೆ ಆ ನೇಮಕದ ಸಂದರ್ಭದಲ್ಲಿ ವಿಶೇಷ ಪೂಜೆ, ಪುರಸ್ಕಾರ, ಆಚರಣೆಗಳನ್ನು ಅನುಸರಿಸುವುದೂ ಉಂಟು.

ಹೀಗೆ ನಿತ್ಯದ ವಿಧಿಗಳಲ್ಲಿ ಹಲವಾರು ಚೌಕಟ್ಟುಗಳನ್ನು ನಿರ್ಮಿಸಿಕೊಂಡು ಬದುಕುವ ಗಿರಿಜನರ ಮೇಲೆ ಬೆಳಕು ಚೆಲ್ಲಿತು ಈ ವಿಚಾರ ಸಂಕಿರಣ. ಹಿರಿಯ ಜಾನಪದ ತಜ್ಞರುಗಳಾದ ಜೀ. ಶಂ. ಪರಮಶಿವಯ್ಯ, ವಿವೇಕ ರೈ, ಡಾ. ಎಲ್.ಆರ್. ಹೆಗಡೆ, ಡಾ. ಸೋಮಶೇಖರ ಇಮ್ರಾಪುರ ಇವರುಗಳ ಅಧ್ಯಕ್ಷತೆಯಲ್ಲಿ ಹಲವಾರು ಆಸಕ್ತ ಯುವಜನರು ಮಂಡಿಸಿದ ಪ್ರಬಂಧಗಳು ಪಶ್ಚಿಮಘಟ್ಟದಲ್ಲಿರುವ ಗಿರಿಜನರ ಬದುಕಿನ ಪರಿಯನ್ನು ತೆರೆದಿಟ್ಟವು.

ಹಗಲು ವಿಚಾರ ಸಂಕಿರಣಗಳ ನಂತರ ರಾತ್ರಿ ನಡೆಸಿದ ಜಾನಪದ ಕಲಾ ಮೇಳದಲ್ಲಿ ಹಲವಾರು ಗಿರಿಜನ ಬುಡಕಟ್ಟುಗಳ ಜಾನಪದ ಕಲೆಗಳು ಹೊರಬಂದವು. ಗುಮ್ಮಟೆ ಹಿಡಿದು ಬಡಿಯುತ್ತಾ ವೃತ್ತಾಕಾರವಾಗಿ ಕುಣಿಯುವ ಗೊಂಡರ ಮಧ್ಯೆ ಶಿವಭೂತ ಗಣಗಳೂ ಸೇರಿ ಕುಣಿಯುತ್ತವೆ; ಸೈಕಲ್ಲನ್ನೂ ಕಾಣದೆ ಬದುಕಿದ್ದ ಕುಣುಬಿಯರ ತಂಡವೊಂದು ಪ್ರಥಮ ಬಾರಿಗೆ ರಂಗದ ಮೇಲೆ ನರ್ತಿಸಿದ್ದು ಅತ್ಯಂತ ವಿಶೇಷ. ಉಳಿದಂತೆ 'ರಾಘವೇಂದ್ರ ಯಕ್ಷಗಾನ ಮಂಡಳಿ'ಯ ಯಕ್ಷಗಾನ, ರಷ್ಯಾಕ್ಕೆ ಹೋಗಿದ್ದ ಕಣ್ಣೂರಿನ ಡೊಳ್ಳು ತಂಡ, ಜೋಗೇರ ಪದಗಳು ರಂಜಿಸಿದವು.

ವಿಚಾರ ಸಂಕಿರಣ, ಕಲಾಮೇಳ ಬಿಟ್ಟು ಜಾನಪದ ಕಲೆಯ ಪರಿಚಯ, ಕಲಾವಿದರ ಪರಿಚಯ ಹಾಗೂ ಕಲೆಯ ಉಳಿವಿಗಾಗಿ ಅಕಾಡೆಮಿ ವಿಸ್ತೃತ ಯೋಜನೆ ಹಮ್ಮಿಕೊಂಡಿದೆ. ನಾಗರಿಕರ ಜಗತ್ತನ್ನೂ ಕಾಣದೆ ಬದುಕುತ್ತಿರುವ ಹಲವಾರು ಗಿರಿಜನರನ್ನು ಹಾಗೂ ಅವರ ಕಲೆಯನ್ನೂ ಅವರ ಪರಿಸರದಲ್ಲೇ ವಿಡಿಯೋದಲ್ಲಿ ಚಿತ್ರೀಕರಿಸಲಾಗುತ್ತಿದೆ. ಅಕಾಡೆಮಿಯ ರಿಜಿಸ್ಟ್ರಾರ್ ಹಿ. ಚಿ ಬೋರಲಿಗಂಯ್ಯ ಹಾಗೂ ಅವರ ಉತ್ಸಾಹೀ ತಂಡ ಬಿಡುವಿಲ್ಲದೆ ಚಿತ್ರೀಕರಣ, ಮಾಹಿತಿ ಸಂಗ್ರಹಣೆ ನಡೆಸಿದೆ.

ಸಾಗರದ ಸಮೀಪದಲ್ಲಿರುವ ನಾಗವಳ್ಳಿ ಬಳಿಯ ಪರ್ವತ ಶ್ರೇಣಿಗಳಲ್ಲಿ ನುಗ್ಗಿ ಮಧ್ಯದಲ್ಲೇ ದೊಡ್ಡ ಅಡವಿ ಹೊತ್ತು ನಿಂತಿರುವ 5 ಸಾವಿರ ಅಡಿಗಳ ಎತ್ತರದ ಮೇಘಾನೆ ಬೆಟ್ಟ ಏರಿದ ಈ ತಂಡ ಅಲ್ಲಿ ಶಾಂತ ಜೀವನ ನಡೆಸುತ್ತಿರುವ ಕುಣುಬಿಯರ ಜೀವನ, ಹಾಡು, ಕುಣಿತಗಳನ್ನು ಚಿತ್ರೀಕರಿಸಿಕೊಂಡಿದೆ. ಸೈಕಲ್ ಕೂಡ ನೋಡದ ಈ ಜನರನ್ನು ಮೊದಲ ಬಾರಿಗೆ ಪಟ್ಟಣಕ್ಕೆ ಕರೆತಂದ ಖ್ಯಾತಿ ಇವರದು. ಕರಾವಳಿಯ ಹೊನ್ನಾವರ, ಅಂಕೋಲ ಸುತ್ತಮುತ್ತಲಿರುವ ಹಾಲಕ್ಕಿ ಒಕ್ಕಲಿಗರನ್ನೂ ವಿಡಿಯೋದಲ್ಲಿ ಸೆರೆ ಹಿಡಿದಿದ್ದಾರೆ.

ಕನ್ನಡಪ್ರಭ

ಉತ್ತರ ಕನ್ನಡ ಜಿಲ್ಲೆಯಲ್ಲೊಂದು ಜಾನಪದ ಮೇಳ

ಆಶಾಧರ

ತಮ್ಮ ಜನಸಮೂಹಕ್ಕೆ ಮಾತ್ರ ಮನರಂಜನೆಯ ಮಾಧ್ಯಮವಾಗಿ ಬೆಳೆದ ಜಾನಪದ ತಂಡಗಳಿಗೆ ಹೊರ ಊರುಗಳಲ್ಲಿ ಪ್ರದರ್ಶನ ಅವಕಾಶ ದೊರಕಿದ್ದೇ ವಿರಳ. ಈ ಕಚ್ಚೆ ಉಟ್ಟವರ, ಕುಪ್ಪುಸವಿಲ್ಲದೇ ಸೀರೆ ತೊಟ್ಟವರ ಕುಣಿತ, ಹಾಡು, ವಾದ್ಯಗಳಲ್ಲಿ ಏನಿದೆ ಎಂಬ ತಾತ್ಸಾರಕ್ಕೆ ಉತ್ತರವಾಗಿ ಈ ಜಿಲ್ಲೆಯ ವಿವಿಧ ಮೂಲೆಗಳಿಂದ ಬಂದ ಹಳ್ಳಿಗಾಡಿನ ಹೈದರು ತಮ್ಮ ಸಾಂಸ್ಕೃತಿಕ ಸಂಪತ್ತನ್ನು ವೇದಿಕೆಯಲ್ಲಿ ಹಾಗೂ ಬೀದಿಯಲ್ಲಿ ಹಂಚಿಹೋದದ್ದು ಒಂದು ಅಪರೂಪದ ಘಟನೆಯಾಗಿತ್ತು.

● ಸಾಹಿತ್ಯ ಕಲೆ ●

ಉತ್ತರ ಕನ್ನಡ ಜಿಲ್ಲೆಯಲ್ಲೊಂದು ಜಾನಪದ ಮೇಳ

ಜಿಲ್ಲೆಯಲ್ಲಿ ಜಾನಪದ ಕಲೆಯನ್ನು ವೇದಿಕೆಯಲ್ಲಿ ಪ್ರದರ್ಶನ ... ಜಂಟಿಯಾಗಿ ಪ್ರಯತ್ನಿಸಿದವರು ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ ಬೆಂಗಳೂರು ಮತ್ತು ಜಿಲ್ಲಾ ...ದ ಕಲಾ ಮಹೋತ್ಸವ ಸಮಿತಿ ಅಂಕೋಲಾ.

...ತ್ತರ ಕನ್ನಡ ಜಿಲ್ಲೆಯಲ್ಲಿ ಕಂಡುಬರುವಷ್ಟು ಜಾನಪದ ...ಸಿ ಕರ್ನಾಟಕದ ಇನ್ನಾವ ಜಿಲ್ಲೆಯಲ್ಲಿಯೂ ಬರುವುದಿಲ್ಲ. ಭೌಗೋಳಿಕವಾಗಿ ಅಭ್ಯಸಿಸಿದರೆ ...ಸೀಮೆ ಮಲೆನಾಡು ಮತ್ತು ...ೀಯ ಪ್ರಾಕೃತಿಕ ಬೆಡಗನ್ನು ಬೆರೆಸಿಕೊಂಡ ಈ ಜಿಲ್ಲೆಯಲ್ಲಿ ...ದ ಕಲೆಗಳೂ ಅಷ್ಟೇ ಸಮೃದ್ಧವಾಗಿ ಬೆಳೆದಿವೆ. ...ಡಿನ ಬೆಟ್ಟದ ಸಾಲುಗಳ ಮಂದಹಾಸದಲ್ಲಿ ...ಸೀಮೆಯ ವಿಶಾಲವಾದ ಸೌಂದರ್ಯದಲ್ಲಿ ಕಣ್ತುಂಬುವ ...ೀಯ ಮೋಹಕ ಬೆಡಗಿನಲ್ಲಿ ಬದುಕುತ್ತಿರುವ ಜನರಲ್ಲಿ ... ವೈವಿಧ್ಯಮಯವಾಗಿ ಅರಳಿದೆ. ಈ ಮೂರು ...ಳಲ್ಲಿ ಜಾನಪದ ಕಲೆಗಳು ಆಯಾ ವಾತಾವರಣಕ್ಕೆ ತಕ್ಕಂತೆ

ವೇದಿಕೆಯಲ್ಲಿ ಅವಕಾಶ ನೀಡಲಾದ ಸುಮಾರು 51 ...ದ ತಂಡಗಳ ಪೈಕಿ ಜಿಲ್ಲೆಯ ವಿವಿಧ ಮೂಲೆಗಳಿಂದ ...ು 45 ತಂಡಗಳು ಭಾಗವಹಿಸಿದ್ದವು. ಆಗಮಿಸಿದ ... ತಂಡಗಳ ಪೈಕಿ ಮೂರು ತಂಡಗಳು ಬುಡಕಟ್ಟು ...ಕ್ಕೆ ಸೇರಿದವುಗಳು.

...ರ ಕನ್ನಡದ ಜಾನಪದ ಕಲೆಯಲ್ಲಿ ಹೊರನಾಡಿನಲ್ಲಿ ...ವಾದವು ಎಂದರೆ ಯಕ್ಷಗಾನ ಮತ್ತು ಸುಗ್ಗಿ ತಂಡ. ಯಕ್ಷಗಾನ ಜಿಲ್ಲೆಯ ಎಲ್ಲಾ ಜನಾಂಗದ ಕಲೆಯಾಗಿದ್ದರೆ, ಮಾತ್ರ ಹಾಲಕ್ಕಿ ಒಕ್ಕಲು ಜನಾಂಗದ ಪ್ರಬುದ್ಧ ಕಲೆ.

ವೇದಿಕೆಯಲ್ಲಿ ವಿವಿಧ ತಂಡಗಳಿಂದ ಈ ಕಲೆ ಪ್ರದರ್ಶನಗೊಂಡರೂ ಪ್ರೇಕ್ಷಕರಿಗೆ ಮಾಮೂಲಿ ಎನಿಸಿತು. ಉತ್ತರ ಕನ್ನಡದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ವಾಸಿಸುವ ಹಾಲಕ್ಕಿ ಒಕ್ಕಲು ಜನಾಂಗದ ಸಾಂಸ್ಕೃತಿಕ ಸಂಪತ್ತು ಅಷ್ಟೇ ಶ್ರೀಮಂತ ಎಂದು ವೇದಿಕೆಯಲ್ಲಿ ನೀಡಿದ ಪ್ರದರ್ಶನದಲ್ಲಿ ಕಂಡುಬಂತು. ಈ ಜನಾಂಗದ ಹೆಂಗಸರು ಮತ್ತು ಗಂಡಸರು ಹಾಡಿ ಕುಣಿದು ನರ್ತಿಸಿದ್ದನ್ನು ಕಂಡರೆ ಇವರ ಬದುಕೇ ಜನಪದ ಎಂಬ ವಾಸ್ತವ ಸತ್ಯವೆನಿಸಿತು. ಕಲಾ ಮಹೋತ್ಸವದ ಸ್ವಾಗತಗೀತೆ ಇತ್ತೀಚೆಗೆ ಜಾನಪದ ಅಕಾಡೆಮಿಯಿಂದ ರಾಜ್ಯ ಪ್ರಶಸ್ತಿ ಪಡೆದ ಸುಕ್ರಿಗೌಡ ಅವರ ತಂಡದಿಂದ ಹಾಡಲ್ಪಟ್ಟಿತು. ಜಿಲ್ಲೆಯ ಇತಿಹಾಸದಲ್ಲಿ ಜಾನಪದ ಹಾಡನ್ನು ಸ್ವಾಗತ ಗೀತೆಯಾಗಿ ಕಾರ್ಯಕ್ರಮದಲ್ಲಿ ಹಾಡಿದ್ದು ಇದು ಪ್ರಥಮ. ನಂತರ ಇದೇ ತಂಡದಿಂದ ಮೂಡಿಬಂದ ತಾರ್ಲೆ ನೃತ್ಯ ಪ್ರಾರಂಭದಲ್ಲಿ ಪ್ರೇಕ್ಷಕರಿಗೆ ಉತ್ತಮ ಪ್ರಚೋದನೆ ನೀಡಿತು.

ತಾರ್ಲೆ ನೃತ್ಯ ಪಂಚಾದಿ ಮಹಿಳೆಯರು ಒಬ್ಬರನ್ನೊಬ್ಬರು ಕೈಹಿಡಿದು ಗೋಲಾಕಾರದಲ್ಲಿ ನಿಂತು ನರ್ತಿಸುವ, ಮಾದರಿಯಲ್ಲಿದೆ. ಈ ನೃತ್ಯಕ್ಕೆ ಕೆಲವು ಹಿನ್ನೆಲೆ ಇದೆ. ಮುಂಗಾರು ಮಳೆ ಅವಧಿಯಲ್ಲಿ ಬಿತ್ತನೆ ಪ್ರಾರಂಭವಾದರೂ ಮಳೆ ಆಗಮನವಾಗದಿರುವ ಸಂದರ್ಭದಲ್ಲಿ ಈ ಮಹಿಳೆಯರು ರಾತ್ರಿ ಬಯಲಿನಲ್ಲಿ ಸೇರಿ "ಹುಯ್ಯೆ ಹುಯ್ಯಲಿ ತಾರ್ಲೆ" ಎಂಬ ಆಶಯವುಳ್ಳ ಹಾಡು ಹೇಳುತ್ತ ಸಮೂಹವಾಗಿ ನರ್ತಿಸುವುದು ಹಿಂದೆ ಈ ಜನಾಂಗದ ಮಹಿಳೆಯರು ಮಳೆ ಬಾರದಿದ್ದಾಗ ಬೆತ್ತಲೆಯಾಗಿ ನರ್ತಿಸುತ್ತಿದ್ದರಂತೆ. ಹೀಗೆ ನರ್ತಿಸಿದರೆ ಮಳೆ ಬಂದೇ ಬರುತ್ತದೆ ಎಂಬ ನಂಬಿಕೆ ಈಗಲೂ ಈ ಜನಾಂಗದಲ್ಲಿದೆ.

ಹಾಲಕ್ಕಿ ಜನಾಂಗದ ಗಂಡಸರು ಪ್ರದರ್ಶಿಸಿದ ಗುಮಟೆ ಪದ ಮತ್ತು ಕುಣಿತ ವೇದಿಕೆಯಲ್ಲಿ ರಂಜನೆ ನೀಡಿದ ಮತ್ತೊಂದು ಕಲೆ. ಉತ್ತರ ಕನ್ನಡದ ವಿಶೇಷ ವಾದ್ಯ ಗುಮಟೆ. ಎರಡೂವರೆಯಿಂದ ಮೂರು ಅಡಿ ಉದ್ದವಿರುವ ಹೂಜಿ ಆಕಾರದ ವಾದ್ಯ. ಈ ವಾದ್ಯದ ಒಂದು ಬಾಯಿಗೆ ಉಡ ಅಥವಾ ಇಡುಕುರಿಯ ಚರ್ಮದ ತೊಗಲನ್ನು ಕಟ್ಟಿ ಬಿಗಿದಿರುತ್ತಾರೆ. ಗುಮಟೆಯ ಇನ್ನೊಂದು ಬಾಯಿ ತೆರೆದೇ ಇರುತ್ತದೆ. ಹೊಟ್ಟೆಯ ಮುಂದೆ ಈ ಸಾಧನವನ್ನು ತೂಗಿ ಹಾಕಿ ನುಡಿಸಲಾಗುತ್ತದೆ. ಬಲಗೈ ಹಸ್ತದಿಂದ ಗುಮಟೆಯ ಚರ್ಮ ಬಿಗಿದ ಭಾಗಕ್ಕೆ ಬಾರಿಸುತ್ತ ಎಡ ಭಾಗದಲ್ಲಿರುವ ಗುಮಟೆಯ ಕಿರುಭಾಗದಲ್ಲಿ ಬಾಯಲ್ಲಿ

ಚಿತ್ರ : ಲೇಖನ - ಆಶಾಧರ

ಮತ್ತೊಂದು ಹಸ್ತವಿಟ್ಟು ಮುಚ್ಚಿ ತೆರೆಯುವದು. ಏಕಕಾಲಕ್ಕೆ ಆರೇಳು ಜನರು ಸಾಲಾಗಿ ನಿಂತು ಗುಮಟೆ ಬಾರಿಸುತ್ತ ಪದ ಹೇಳುತ್ತಾರೆ. ಈ ಪದ ಹೆಚ್ಚಾಗಿ ಸಮಾಜದ ದೌರ್ಬಲ್ಯದ ಕುರಿತಾದ ಸ್ವರಚಿತ ಅಣಕಗಳಾಗಿರುತ್ತವೆ. ಈ ಮೇಳದಲ್ಲಿ ಕೂಚಿ ಎಂಬುವನೊಬ್ಬ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗುಮಟೆಯಿಂದ ಎದುರಿಗೆ ಚಕ್ರಾಕಾರದಲ್ಲಿ ಸುತ್ತುತ್ತಾ ಮೇಳದಲ್ಲಿ ಉತ್ಸಾಹ ತುಂಬಲು ನಡುನಡುವೆ "ಶಾಭಾಷ್" ಎಂದು ಹೇಳುತ್ತಾ ಕುಣಿಯುತ್ತಿರುತ್ತಾನೆ. ಘಟ್ಟದ ಕೆಳಗಿನ ತಾಲೂಕುಗಳಲ್ಲಿನ ಹಿಂದುಳಿದ ಜನಾಂಗದಲ್ಲಿ ಈ ಕಲೆ ನೆಲೆಸಿದ್ದರೂ ಹಾಲಕ್ಕಿ ಸಮಾಜ ಮಾತ್ರ ಈ ಕಲೆಯಲ್ಲಿ ಪರಿಣತರು. ಈ ಗುಮಟೆ ಪದದೊಡನೆ ಕುಣಿಯುವ ಗೋಕರ್ಣದ ಹತ್ತಿರದ ಈರಣ್ಣಗೌಡನ ನರ್ತನ ... ಆಕರ್ಷಣೀಯ.

ಜಿಲ್ಲೆಯ ಕಾಡಲ್ಲಿ ಬದುಕನ್ನು ಕಳೆದುಕೊಂಡ ಸಿದ್ದಿ. ಡಮಾಮಿ ನೃತ್ಯ ಸಹ ವೇದಿಕೆಯಲ್ಲಿ ರಂಜಿಸಿದ ಮಾಧ್ಯಮ. ನವರಾತ್ರಿ ಯುಗಾದಿ ಮುಂತಾದ ಡಮಾಮಿ ಎಂಬ ವಾದ್ಯವನ್ನು ಹಿನ್ನೆಲೆಯಲ್ಲಿ ಬಾರಿಸುತ್ತಿದ್ದರೆ, ಹೆಂಗಸರು ಕುಸುರಿ ಬರೆದ ಕೋ... ನರ್ತಿಸುತ್ತಾರೆ. ಈ ಕುಣಿತದ ಪದಗಳು ಈ ರೀತಿ:

ಬರಬರ ಗಾಳಿಯೇ ಹುಡುಹುಡು ಮಳೆಯೇ!
ಭೂಮಿ ಮೇಲ ಬೀಳ ಮಳೆಯೇ ಏ ಮಳೆಯ
ಭೂಮಿ ಮೇಲ ಸುರಿಸುವ ಮಳೆಯೇ ದಗದಗ

ಸರ್ಕಸ್ ಪ್ರಪಂಚದ ಮೋಜಿನ ವಿಚಿತ್ರ ... ಕಂಡುಬಂದ ಮರಕಾಲು ಕುಣಿತ ದೊಡ್ಡವರೂ ಮಕ್ಕಳನ್ನು ರಂಜಿಸಿತು. ಉತ್ಸವದ ದಿನಗಳಲ್ಲಿ ವೇಷ ತೊಟ್ಟು ಕಾಲಿಗೆ ಎತ್ತರದ ಮರದ ಕಾಲು ತಿರುಗುವದು. ಕುದುರೆ ಎತ್ತುಗಳನ್ನು ಹೋಲುವ ... ರಚಿಸಿ ಅವುಗಳನ್ನು ಏರಿ ಸವಾರಿ ಮಾಡುವಂತೆ ... ಕುಣಿತದ ಮೂಲಕ ತೋರಿಸಲಾಯಿತು. ಇವರು ಬ್ಯಾಲೆನ್ಸ್ ಕಾಯ್ದುಕೊಳ್ಳುವ ರೀತಿ ಅದ್ಭುತವೆನಿಸುತ್ತಿತ್ತು.

ಜಿಲ್ಲೆಯ ವಿವಿದ ಮೂಲೆಗಳಿಂದ ಬಂದ ಕಲೆಗ... ಲಂಬಾಣಿ ಮಹಿಳೆಯರ ಗುಂಪು ನೃತ್ಯ ರಂಜನೆ ನೀಡಿ... ಡೊಳ್ಳು ಕುಣಿತ, ಬೇಡರ ಕುಣಿತ, ಪುಗಡಿ ಕುಣಿತ, ಗೌಳಿ ಜನಾಂಗದ ನೃತ್ಯ ಹೀಗೆ ಹಲವು ಜಾನಪದ ಕಲೆಗಳು, ಡಿಂಗಿ ಪದ ಹಾಗೂ ತಾಳಮದ್ದಳೆಗಳು ವೇದಿಕೆಯಲ್ಲಿ ರಂಜಿಸಿದ ಪ್ರಮುಖ ಕಲೆಗಳು.



ಲಂಬಾಣಿ ನೃತ್ಯ



ಸಿದ್ದಿ ಮಹಿಳೆಯರಿಂದ ಡಮಾಮಿ ನೃ...

25, ಜೂನ್ 1989

ರಾಜ್ಯದ ಗುಡ್ಡಗಾಡು ಜಿಲ್ಲೆಗಳಲ್ಲೊಂದಾದ ಉತ್ತರ ಕನ್ನಡದಲ್ಲಿ ಅಪೂರ್ವವಾದ ಜಾನಪದ ಕಲಾ ಮಹೋತ್ಸವ ಮೇ ತಿಂಗಳ ಮಧ್ಯಭಾಗದಲ್ಲಿ ಅಂಕೋಲಾ ನಗರದಲ್ಲಿ ಜರುಗಿತು. ಈ ಜಿಲ್ಲೆಯ ವಿವಿಧ ಮೂಲೆಗಳಿಂದ ಬಂದ ಹಳ್ಳಿಗಾಡಿನ ಹೈದರು, ತಮ್ಮ ಸಾಂಸ್ಕೃತಿಕ ಸಂಪತ್ತನ್ನು ವೇದಿಕೆಯಲ್ಲಿ ಹಾಗೂ ಬೀದಿಯಲ್ಲಿ ಸಹ ಹಂಚಿಹೋದದ್ದು ಒಂದು ಅಪರೂಪದ ಘಟನೆಯಾಗಿತ್ತು.

ಅಪ್ಪಟ ಹಳ್ಳಿ ಹೈದರಾದ ಕಪ್ಪು ಬಣ್ಣದ ಈ ಕಲಾವಿದರೆಲ್ಲರು ಹವ್ಯಾಸಿಗಳಾಗಿರದೇ ಹಳ್ಳಿಯ ಮಣ್ಣಿನಲ್ಲಿ ಹಣ್ಣಾದ ಶ್ರಮಜೀವಿಗಳು. ಕಾಡಿನ ಗರ್ಭದಲ್ಲಿ ತಮ್ಮ ಕಾಯಕ ಹಂಚಿಕೊಂಡವರು. ಇಲ್ಲಿ ಬಂದ ಬಹುತೇಕ ಗಂಡಸರೆಲ್ಲರೂ ಕಚ್ಚೆ ಪಂಚೆ ತೊಟ್ಟವರಾದರೆ, ಆಕಾಶಕ್ಕೆ ತಮ್ಮ ಬೆತ್ತಲು ಬೆನ್ನು ನೀಡಿ, ಮೈ ಬಗ್ಗಿಸಿ ದುಡಿವ ಹೆಂಗಸರೂ ಇದ್ದರು. ಇವರು ತಮ್ಮ ಕಲಾಪ್ರದರ್ಶನ ಸಂದರ್ಭದಲ್ಲಿ ಯಾವ ಹೆಚ್ಚಿನ ಶೃಂಗಾರ ಮಾಡಿಕೊಳ್ಳದೆ ಅದೇ ರೂಪದಲ್ಲಿ ಬಂದು ವೇದಿಕೆಯಲ್ಲಿ ಕಾಣಿಸಿಕೊಂಡರು. ಇವರ ಬದುಕಿನಲ್ಲಿ, ಬೆವರ ಹನಿಯಲ್ಲಿ, ಸುಖ–ದುಃಖದಲ್ಲಿ ಸಾಗಿಹೋದ ಅನುಭವಗಳು ಸಾಂಸ್ಕೃತಿಕ ರಂಗದಲ್ಲಿ ಜನಪದ ಕಲೆಯಾಗಿದ್ದವು. ಇವರ ಬದುಕಿನ ಕತೆಯಾಗಿ ಹೊರ ಹೊಮ್ಮಿದವು.

ಇವರೆಲ್ಲರೂ ಹಾಡಿದರು, ನರ್ತಿಸಿದರು, ವಾದ್ಯ ಬಾರಿಸಿ ರಂಜಿಸಿದರು. ಅನುಭವವೇ ಹಾಡಾಗಿ, ಸಂತೋಷವೇ ನರ್ತನವಾಗಿ, ಉದ್ವೇಗ–ಉನ್ಮಾದವೇ ವಾದ್ಯವಾಗಿ ಇಲ್ಲಿ ಕಂಡುಬಂದವು. ಸಂತೋಷದಲ್ಲಿ ಕೇಕೆ ಹಾಕಿ ಹಾರಿದ್ದೇ ಕುಣಿತವಾಯ್ತು. ಸಂತೋಷದಲ್ಲಿ ಮನುಷ್ಯ ಬದುಕಿನಲ್ಲಿ ಘಟಿಸಿದ ಎಲ್ಲ ಭಾವಗಳೂ ಅಭಿನಯವಾಯ್ತು. ಆಂಗೀಕಾಭಿನಯದ ಜೊತೆಗೆ ಸುಮ್ಮನಿರದ ಮನಸ್ಸು ಘಟನೆಗಳನ್ನು ಜೋಡಿಸಿ, ಹಾಡಾಗಿ ಹೊರಹಾಕಿತ್ತು. ಇಷ್ಟಿದ್ದರೂ ಏನೋ ಕೊರತೆ ಇದೆ ಎಂದ ಸೃಜನಶೀಲ ಮನಸ್ಸು ಹಾಡು, ಕುಣಿತಕ್ಕೆ ಹಿಮ್ಮೇಳವಾಗಿ ವಾದ್ಯವನ್ನು ಹುಟ್ಟು ಹಾಕಿತು. ಜನಪದ ಜನ್ಮ ತಾಳಿದ್ದು ಈ ಹಂತದಲ್ಲಿ. ಜನಪದ ಕಲೆ ಹಳ್ಳಿಗರ ಬದುಕಿನ ಸಂಸ್ಕಾರದ ಅಭಿವ್ಯಕ್ತಿಯಾಗಿ ಅರಳಿದ್ದು ಹೀಗೆ.

ತಮ್ಮ ಜನಸಮೂಹಕ್ಕೆ ಮಾತ್ರ ಮನರಂಜನೆಯ ಮಾಧ್ಯಮವಾಗಿ ಬೆಳಯದೆ ಈ ಎಲ್ಲ ಜಾನಪದ ತಂಡಕ್ಕೆ ಹೊರ ಊರಿನಲ್ಲಿ ಪ್ರದರ್ಶನಾವಕಾಶ ದೊರಕಿದ್ದೇ ವಿರಳ. ಈ ಕಚ್ಚೆ ಉಟ್ಟವರ, ಕುಪ್ಪುಸವಿಲ್ಲದೆ ಸೀರೆ ತೊಟ್ಟವರ ಕುಣಿತ, ಹಾಡು ವಾದ್ಯಗಳಲ್ಲಿ ಏನಿದೆ? ಎಂಬ ತಾತ್ಸಾರಕ್ಕೆ ಉತ್ತರವಾಗಿ ಉತ್ತರ ಕನ್ನಡ ಜಿಲ್ಲೆಯಲ್ಲಿ ಜಾನಪದ ಕಲೆಯನ್ನು ವೇದಿಕೆಯಲ್ಲಿ ಪ್ರದರ್ಶನ ನೀಡಲು ಜಂಟಿಯಾಗಿ ಪ್ರಯತ್ನಿಸಿದವರು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಬೆಂಗಳೂರು ಮತ್ತು ಜಿಲ್ಲಾ ಜಾನಪದ ಮಹೋತ್ಸವ ಸಮಿತಿ ಅಂಕೋಲಾ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಕಂಡು ಬರುವಷ್ಟು ಜಾನಪದ ಕಲೆಗಳು ಕರ್ನಾಟಕದ ಇನ್ನಾವ ಜಿಲ್ಲೆಯಲ್ಲಿಯೂ ಕಂಡುಬರುವುದಿಲ್ಲ. ಭೌಗೋಳಿಕವಾಗಿ ಅಭ್ಯಸಿಸಿದರೆ ಬಯಲುಸೀಮೆ ಮಲೆನಾಡು ಮತ್ತು ಕರಾವಳಿಯ ಪ್ರಾಕೃತಿಕ ಬೆಡಗನ್ನು ಬೆರೆಸಿಕೊಂಡ ಈ ಜಿಲ್ಲೆಯಲ್ಲಿ ಜಾನಪದ ಕಲೆಗಳೂ ಅಷ್ಟೇ ಸಮೃದ್ಧವಾಗಿ ಬೆಳೆದಿವೆ. ಮಲೆನಾಡಿನ ಬೆಟ್ಟದ ಸಾಲುಗಳ ಮಂದಹಾಸದಲ್ಲಿ ಬಯಲುಸೀಮೆಯ ವಿಶಾಲವಾದ ಸೌಂದರ್ಯದಲ್ಲಿ ಕಣ್ತುಂಬುವ ಕರಾವಳಿಯ ಮೋಹಕ ಬೆಡಗಿನಲ್ಲಿ ಬದುಕುತ್ತಿರುವ ಜನರಲ್ಲಿ ಕಲೆಯೂ ವೈವಿಧ್ಯಮಯವಾಗಿ ಅರಳಿದೆ. ಈ ಮೂರು ಸೀಮೆಗಳಲ್ಲಿ ಜಾನಪದ ಕಲೆಗಳು ಆಯಾ ವಾತಾವರಣಕ್ಕೆ ತಕ್ಕಂತೆ ಜನಿಸಿವೆ.

ಈ ವೇದಿಕೆಯಲ್ಲಿ ಅವಕಾಶ ನೀಡಲಾದ ಸುಮಾರು 51 ಜಾನಪದ ತಂಡಗಳ ಪೈಕಿ ಜಿಲ್ಲೆಯ ವಿವಿಧ ಮೂಲಗಳಿಂದ ಸುಮಾರು 45 ತಂಡಗಳು ಭಾಗವಹಿಸಿದ್ದವು. ಆಗಮಿಸಿದ ಮಹಿಳಾ ತಂಡಗಳ ಪೈಕಿ ಮೂರು ತಂಡಗಳು ಬುಡಕಟ್ಟು ಜನಾಂಗಕ್ಕೆ ಸೇರಿದವುಗಳು.

ಉತ್ತರ ಕನ್ನಡದ ಜಾನಪದ ಕಲೆಯಲ್ಲಿ ಹೊರ ನಾಡಿನಲ್ಲಿ ಜನಪ್ರಿಯವಾದವುಗಳೆಂದರೆ ಯಕ್ಷಗಾನ ಮತ್ತು ಸುಗ್ಗಿ ತಂಡ. ಇಲ್ಲಿ ಯಕ್ಷಗಾನ ಜಿಲ್ಲೆಯ ಎಲ್ಲಾ ಜನಾಂಗದ ಕಲೆಯಾಗಿದ್ದರೆ, ಸುಗ್ಗಿ ಮಾತ್ರ ಹಾಲಕ್ಕಿ ಒಕ್ಕಲು ಜನಾಂಗದ ಪ್ರಬುದ್ಧ ಕಲೆ. ವೇದಿಕೆಯಲ್ಲಿ ವಿವಿಧ ತಂಡಗಳಿಂದ ಈ ಕಲೆ ಪ್ರದರ್ಶನಗೊಂಡರೂ ಪ್ರೇಕ್ಷಕರಿಗೆ ಮಾಮೂಲಿ ಎನಿಸಿತು.

ಉತ್ತರ ಕನ್ನಡದಲ್ಲಿ ಅತ್ಯಧಿಕ ಸಂಖ್ಯೆಯಲ್ಲಿ ವಾಸಿಸುವ ಹಾಲಕ್ಕಿ ಒಕ್ಕಲು ಜನಾಂಗದ ಸಾಂಸ್ಕೃತಿಕ ಸಂಪತ್ತು ಅಷ್ಟೇ ಶ್ರೀಮಂತ ಎಂದು ವೇದಿಕೆಯಲ್ಲಿ ನೀಡಿದ ಪ್ರದರ್ಶನದಲ್ಲಿ ಕಂಡುಬಂತು. ಈ ಜನಾಂಗದ ಹೆಂಗಸರು ಮತ್ತು ಗಂಡಸರು ಹಾಡಿ, ಕುಣಿದು ನರ್ತಿಸಿದ್ದನ್ನು ಕಂಡರೆ ಇವರ ಬದುಕೇ ಜನಪದ ಎಂಬ ವಾಸ್ತವ ಸತ್ಯವೆನಿಸಿತು. ಕಲಾ ಮಹೋತ್ಸವದ ಸ್ವಾಗತಗೀತೆ ಇತ್ತೀಚೆಗೆ ಜಾನಪದ ಅಕಾಡೆಮಿಯಿಂದ ರಾಜ್ಯಪ್ರಶಸ್ತಿ ಪಡೆದ ಸುಕ್ರಿಗೌಡ ಅವರ ತಂಡದಿಂದ ಹಾಡಲ್ಪಟ್ಟಿತು. ಜಿಲ್ಲೆಯ ಇತಿಹಾಸದಲ್ಲಿ ಜಾನಪದ ಹಾಡನ್ನು ಸ್ವಾಗತ ಗೀತೆಯಾಗಿ ಕಾರ್ಯಕ್ರಮದಲ್ಲಿ ಹಾಡಿದ್ದು ಇದು ಪ್ರಥಮ. ನಂತರ ಇದೇ ತಂಡದಿಂದ ಮೂಡಿಬಂದ ತಾರ್ಲೆ ನೃತ್ಯ ಪ್ರಾರಂಭದಲ್ಲಿ ಪ್ರೇಕ್ಷಕರಿಗೆ ಉತ್ತಮ ಪ್ರಚೋದನೆ ನೀಡಿತು.

ತಾರ್ಲೆ ನೃತ್ಯ ಪಂಜಾಬಿ ಮಹಿಳೆಯರು ಒಬ್ಬರನ್ನೊಬ್ಬರು ಕೈಹಿಡಿದು ಗೋಲಾಕಾರದಲ್ಲಿ ನಿಂತು ನರ್ತಿಸುವ ಮಾದರಿಯಲ್ಲಿದೆ. ಈ ನೃತ್ಯಕ್ಕೆ ಕೆಲವು ಹಿನ್ನೆಲೆ ಇದೆ. ಮುಂಗಾರು ಮಳೆ ಅವಧಿಯಲ್ಲಿ ಬಿತ್ತನೆ ಪ್ರಾರಂಭವಾದರೂ ಮಳೆ ಆಗಮನವಾಗದಿರುವ ಸಂದರ್ಭದಲ್ಲಿ ಈ ಮಹಿಳೆಯರು ರಾತ್ರಿ ಬಯಲಿನಲ್ಲಿ ಸೇರಿ "ಹುಬ್ಬೆ ಹುಲ್ಲಾಡೆ ತಾರ್ಲೆ" ಎಂಬ ಆಶಯವುಳ್ಳ ಹಾಡು ಹೇಳುತ್ತ ಸಮೂಹವಾಗಿ ನರ್ತಿಸುವುದು. ಹಿಂದೆ ಈ ಜನಾಂಗದ ಮಹಿಳೆಯರು ಮಳೆ ಬಾರದಿದ್ದಾಗ ಬೆತ್ತಲೆಯಾಗಿ ನರ್ತಿಸುತ್ತಿದ್ದರಂತೆ. ಹೀಗೆ ನರ್ತಿಸಿದರೆ ಮಳೆ ಬಂದೇ ಬರುತ್ತದೆ ಎಂಬ ನಂಬಿಕೆ ಈಗಲೂ ಈ ಜನಾಂಗದಲ್ಲಿದೆ.

ಹಾಲಕ್ಕಿ ಜನಾಂಗದ ಗಂಡಸರು ಪ್ರದರ್ಶಿಸಿದ ಗುಮಟೆ ಪದ ಮತ್ತು ಕುಣಿತ ವೇದಿಕೆಯಲ್ಲಿ ರಂಜನೆ ನೀಡಿದ ಮತ್ತೊಂದು ಕಲೆ. ಉತ್ತರ ಕನ್ನಡದ ವಿಶೇಷ ವಾದ್ಯ ಗುಮಟೆ.

ಎರಡೂವರೆಯಿಂದ ಮೂರು ಅಡಿ ಉದ್ದವಿರುವ ಹೂಜಿ ಆಕಾರದ ವಾದ್ಯ. ಈ ವಾದ್ಯದ ಒಂದು ಬಾಯಿಗೆ ಉಡ ಅಥವಾ ಕಾಡುಕುರಿಯ ಚರ್ಮದ ತೊಗಲನ್ನು ಕಟ್ಟಿ ಬಿಗಿದಿರುತ್ತಾರೆ. ಗುಮಟೆಯ ಇನ್ನೊಂದು ಬಾಯಿ ತೆರೆದೇ ಇರುತ್ತದೆ. ಹೊಟ್ಟೆಯ ಮುಂದೆ ಈ ಸಾಧನವನ್ನು ತೂಗಿ ಹಾಕಿ ನುಡಿಸಲಾಗುತ್ತದೆ. ಬಲಗೈ ಹಸ್ತದಿಂದ ಗುಮಟೆಯ ಚರ್ಮ ಬಿಗಿದ ಭಾಗಕ್ಕೆ ಬಾರಿಸುತ್ತ ಎಡ ಭಾಗದಲ್ಲಿರುವ ಗುಮಟೆಯ ಕರಿಭಾಗದಲ್ಲಿ ಬಾಯಲ್ಲಿ ಮತ್ತೊಂದು ಹಸ್ತವಿಟ್ಟು ಮುಚ್ಚಿ ತೆರೆಯುವುದು. ಏಕಕಾಲಕ್ಕೆ ಆರೇಳು ಜನರು ಸಾಲಾಗಿ ನಿಂತು ಗುಮಟೆ ಬಾರಿಸುತ್ತ ಪದ ಹೇಳುತ್ತಾರೆ. ಈ ಪದ ಹೆಚ್ಚಾಗಿ ಸಮಾಜದ ದೌರ್ಬಲ್ಯದ ಕುರಿತಾದ ಸ್ವರಚಿತ ಅಣಕಗಳಾಗಿರುತ್ತವೆ. ಮೇಳದಲ್ಲಿ ಕೂಚ ಎಂಬವನೊಬ್ಬ ಕಾಲಿಗೆ ಗೆಜ್ಜೆ ಕಟ್ಟಿಕೊಂಡು ಗುಮಟೆಯಿಂದ ಎದುರಿಗೆ ಚಕ್ರಾಕಾರದಲ್ಲಿ ಸುತ್ತುತ್ತಾ ಮೇಳದಲ್ಲಿ ಉತ್ಸಾಹ ತುಂಬಲು ನಡುನಡುವೆ "ಶಾಭಾಷ್" ಎಂದು ಹೇಳುತ್ತಾ ಕುಣಿಯುತ್ತಿರುತ್ತಾನೆ. ಘಟ್ಟದ ಕೆಳಗಿನ ತಾಲ್ಲೂಕುಗಳಲ್ಲಿನ ಹಿಂದುಳಿದ ಜನಾಂಗದಲ್ಲಿ ಈ ಕಲೆ ನೆಲೆಸಿದ್ದರೂ, ಹಾಲಕ್ಕಿ ಸಮಾಜ ಮಾತ್ರ ಈ ಕಲೆಯಲ್ಲಿ ಪರಿಣಿತರು. ಈ ಗುಮಟೆ ಪದದೊಡನೆ ಕುಣಿಯುವ ಗೋಕರ್ಣದ ಹತ್ತಿರದ ಈರಣ್ಣಗೌಡನ ನರ್ತನ ಆಕರ್ಷಣೀಯ.

ಜಿಲ್ಲೆಯ ಕಾಡಲ್ಲಿ ಬದುಕನ್ನು ಕಳೆದುಕೊಂಡ ಸಿದ್ದಿ ಮಹಿಳೆಯರ ಡಮಾಮಿ ನೃತ್ಯ ಸಹ ವೇದಿಕೆಯಲ್ಲಿ ರಂಜಿಸಿದ ಮತ್ತೊಂದು ಮಾಧ್ಯಮ. ನವರಾತ್ರಿ, ಯುಗಾದಿ ಮುಂತಾದ ಹಬ್ಬಗಳಲ್ಲಿ ಡಮಾಮಿ ಎಂಬ ವಾದ್ಯವನ್ನು ಹಿನ್ನೆಲೆಯಲ್ಲಿ ಗಂಡಸರು ಬಾರಿಸುತ್ತಿದ್ದರೆ, ಹೆಂಗಸರು ಕುಸುರಿ ಬರೆದ ಕೊಡ ಹಿಡಿದು ನರ್ತಿಸುತ್ತಾರೆ. ಈ ಕುಣಿತದ ಪದಗಳು ಈ ಕೆಳಗಿನಂತಿರುತ್ತದೆ.

ಬರಬರ ಗಾಳಿಯೇ ಹುಡುಹುಡು ಏ
ಮಳೆಯೆ!

ಮಿ ಮೇಲ್ ಬೀಳ ಮಳೆಯೋ
ಏ ಮಳೆಯೆ!
ಮಿ ಮೇಲೆ ಸುರಿಸುವ ಮಳೆಯೋ ದಗದಗ
ಏ ಮಳೆಯೆ!

ಸರ್ಕಸ್ ಪ್ರಪಂಚದ ಮೋಜಿನ
ತ್ರ ದಂಡೇ ಇಲ್ಲಿ ಕಂಡುಬಂದ
ಕಾಲು ಕುಣಿತ, ದೊಡ್ಡವರೊಂದಿಗೆ
ಮಕ್ಕಳನ್ನು ರಂಜಿಸಿತು. ಉತ್ಸವದ
ಗಳಲ್ಲಿ ಬೇರೆ ಬೇರೆ ವೇಷ ತೊಟ್ಟು,
ಗೆ ಎತ್ತರದ ಮರದ ಕಾಲು ಕಟ್ಟಿ
ಡು ತಿರುಗುವುದು. ಕುದುರೆ, ಎತ್ತು
ನ್ನು ಹೋಲುವ ಮರದ ಆಕೃತಿ ರಚಿಸಿ,
ಗಳನ್ನು ಏರಿ ಸವಾರಿ ಮಾಡುವಂತೆ ಈ
ಕಾಲು ಕುಣಿತದ ಮೂಲಕ ತೋರಿಸ
ಮಿತು. ಇವರು ಕುಣಿಯುತ್ತಾ
ಲೆನ್ಸ್ ಕಾಯ್ದುಕೊಳ್ಳುವ ರೀತಿ ಅದ್ಭುತ
ಸುತ್ತಿತ್ತು.

ಜಿಲ್ಲೆಯ ವಿವಿಧ ಮೂಲೆಗಳಿಂದ
ದ ಕಲೆಗಳ ತಂಡದಲ್ಲಿ ಲಂಬಾಣಿ ಮಹಿಳೆ
ರ ಗುಂಪು ನೃತ್ಯ ರಂಜನೆ ನೀಡಿತು.
ಸರ ಡೊಳ್ಳು ಕುಣಿತ, ಬೇಡರ ಕುಣಿತ.
ಡಿ ಕುಣಿತ, ಢಕ್ಕೆ ಕುಣಿತ, ಗೌಳಿ
ಂಗದ ನೃತ್ಯ ಹೀಗೆ ಹಲವು ಜಾನಪದ
ಗಳು, ಬಿಂಗಿ ಪದ ಹಾಗೂ ಯಕ್ಷಗಾನ
ಮದ್ದಳೆಗಳು ವೇದಿಕೆಯಲ್ಲಿ ರಂಜಿಸಿದ
ಖ ಜಾನಪದ ಕಲೆಗಳು.

ಎರಡು ದಿನ ನಡೆದ ಕಾರ್ಯ
ದ ಮೊದಲ ದಿನ ಇಲ್ಲಿ ಭಾಗವಹಿ
ಜಾನಪದ ಕಲೆಗಳ ತಂಡ ಅಂಕೋಲಾ
ದ ಸುತ್ತ ಮೆರವಣಿಗೆ ಹೊರಟು ವೇದಿಕೆ
ವ ಮೊದಲು ಬೀದಿಯಲ್ಲಿ ಜನರಿಗೆ
ಪ್ರದರ್ಶನ ನೀಡುತ್ತಾ ಸಾಗಿದವು.
ಕಾಲದಲ್ಲಿ ಬೀದಿಯಲ್ಲಿ ಕುಣಿಯು
ನ್ನು ಬಿಟ್ಟರೆ ಒಟ್ಟು ಜಾನಪದ
ಳನ್ನು ಒಂದೆಡೆ ತಂದು ಬೀದಿಯಲ್ಲಿ
ರ್ಶನ ಮಾಡಿದ ಘಟನೆ ಉತ್ತರ ಕನ್ನಡ
ಯಲ್ಲಿಯೇ ಮೊದಲ ಬಾರಿ ಎನಿಸಿತು.

ವೇದಿಕೆಯ ಮೇಲೆ ಜಾನಪದ ಕಲೆಗಳ ಪ್ರದರ್ಶನವಾಗಲಿ ಅಥವಾ ಕಲೆಯನ್ನು ಬೀದಿಗೆ ತಂದು ಜನರ ಗಮನ ಸೆಳೆಯುವ ಮುಖ್ಯ ಆಶಯವೆಂದರೆ ಈ ಜಾನಪದ ಸಂಸ್ಕೃತಿಯನ್ನು ಉಳಿಸಿ, ಬೆಳೆಸುವುದರತ್ತ ನಾಗರಿಕರ ಗಮನ ಸೆಳೆಯುವುದು. ಹಿಂದೆ ಗದ್ದೆಯಲ್ಲಿ ಗೇಯುವಾಗ, ತೆನೆ ಕೊಯ್ಯುವಾಗ, ಬಂದ ಕಾಳನ್ನು ಕುಟ್ಟುವಾಗ, ಬೀಸುವಾಗ ಹೀಗೆ ಮಾನವ ಶ್ರಮದ ವಿವಿಧ ಹಂತಗಳಲ್ಲಿ ಹಾಡುಗಳು ಹುಟ್ಟಿ, ಇವು ಶ್ರಮವನ್ನು ಮರೆಸುವ ಮಾಧ್ಯಮವಾಗಿ ಮನರಂಜನೆಯಾಗಿದ್ದವು. ಆದರೆ ಇಂದಿನ ಯಾಂತ್ರಿಕತೆಯ ಅರಚಾಟದಲ್ಲಿ ಶ್ರಮವೂ ಸಾಯುವುದರೊಂದಿಗೆ ಅಭಿವ್ಯಕ್ತಿಯೂ ಹೊರಟುಹೋಗಿದೆ. ಹೀಗಾಗಿ ಇನ್ನು ಜಾನಪದ ಜನಿಸಲಾರದಾದರೂ ಹಿಂದೆ ಹುಟ್ಟಿ ಬೆಳೆದುದನ್ನು ಈಗ ನಿರ್ಲಕ್ಷಿಸದೆ ಬೆಳಸಬೇಕೆಂಬ ಬೇಡಿಕೆ ಈ ಪ್ರಯತ್ನದಲ್ಲಿತ್ತು.

ನಿಜವಾಗಿ ಕಲೆಗಳು ಬಂದು ಬೀದಿಯಲ್ಲಿ ಮತ್ತು ವೇದಿಕೆ ನಿಂತು ನ್ಯಾಯ ಕೇಳುವ ನೀತಿ ಈಗ ಬಂದಿರುವುದು ಈ ಆಧುನಿಕತೆ ಸೃಷ್ಟಿಸಿದ ದುರಂತವಾಗಿದೆ. ನಿಜವಾಗಿ ಸತ್ವವಿರುವ ಈ ಜನಪದವನ್ನು ಉಳಿಸಿ, ಬೆಳೆಸುವುದರತ್ತ ಜನತೆ ಮತ್ತು ಸರಕಾರ ಶ್ರಮಿಸಬೇಕಾಗಿದೆ. ಅಮೆರಿಕೆಯಲ್ಲಿ ಜಾನಪದ ವಿಶ್ವವಿದ್ಯಾಲಯದ ವಿಷಯದಲ್ಲಿ ಒಂದಾಗಿ ಕಲಿಸುತ್ತಿದ್ದರೆ, ರಷ್ಯಾದಲ್ಲಿ ರಾಷ್ಟ್ರೀಯ ಪ್ರಜ್ಞೆಯನ್ನು ಪ್ರಜೆಗಳಲ್ಲಿ ಜಾನಪದ ಮಾಧ್ಯಮದ ಮೂಲಕ ಮೂಡಿಸುತ್ತಿದ್ದಾರೆ. ನಾರ್ವೆಯಂತಹ ಚಿಕ್ಕ ನಾಡಿನಲ್ಲಿ ಜಿಲ್ಲೆಗೊಂದು ಜನಪದ ವಸ್ತು ಸಂಗ್ರಹಾಲಯವಿದೆ. ಆದರೆ ಜನಪದ ಬಲವಾಗಿ ಬೇರೂರಿರುವ ನಮ್ಮ ದೇಶದಲ್ಲಿ ಅದನ್ನು ಉಳಿಸಿ, ಬೆಳೆಸುವುದರತ್ತ ನಾವು ಮಾಡಬೇಕಾದ ಪ್ರಯತ್ನ ಮಾಡಿಲ್ಲ ಎಂದೆನಿಸುತ್ತದೆ. ಆದುದರಿಂದ ಜಾನಪದ ಅಕಾಡೆಮಿಗಳು, ವಿಶ್ವವಿದ್ಯಾಲಯಗಳು ಹಾಗೂ ಸಮೂಹ ಮಾಧ್ಯಮಗಳು ಈ ದಿಶೆಯಲ್ಲಿ ಸಾಕಷ್ಟು ಬೆಂಬಲ ನೀಡಬೇಕಾಗಿದೆ. ಜನಪದ ಉಳಿಯಬೇಕಾದರೆ ಅದು ಹಳ್ಳಿಗರ ಕಚ್ಚೆ ಉಟ್ಟವರ ಕಲಾ ಮಾಧ್ಯಮವಾಗದೇ ಎಲ್ಲರಲ್ಲಿ. ಹಂಚಿಹೋಗಬೇಕು.

ಕನ್ನಡಪ್ರಭ

ಯಕ್ಷಗಾನದಲ್ಲಿ ಬಣ್ಣಗಾರಿಕೆ

ಹಿ. ಚಿ. ಬೋರಲಿಂಗಯ್ಯ

ಯಕ್ಷಗಾನದ್ದು ರಂಗುರಂಗಿನ ಲೋಕ. ಯಕ್ಷಗಾನದಲ್ಲಿ ಮುಖವರ್ಣಿಕೆಗೆ ಬಳಸುವ ಬಣ್ಣಗಳದ್ದಂತೂ ಅದೇ ಒಂದು ಬೆಡಗಿನ ಪ್ರಪಂಚ. ಯಕ್ಷಗಾನದ ಬಣ್ಣಗಾರಿಕೆ ಎಂದರೆ ಸುಲಭದ ಮಾತಲ್ಲ. ಯಕ್ಷಗಾನ ಪಾತ್ರಧಾರಿ ನಟ, ಅದೇ ವೇಳೆಯಲ್ಲಿ ಕುಂಚ ಹಿಡಿದ ಅಪ್ರತಿಮ ಕಲಾವಿದನೂ ಹೌದು. ಯಕ್ಷಗಾನ ಬಣ್ಣಗಾರಿಕೆಯ ಕಮ್ಮಟ. ಈ ಹತ್ತು-ಹಲವು ವಿಚಾರಗಳ ಬಗ್ಗೆ ಬೆಳಕು ಚೆಲ್ಲುತ್ತಾ ಹೋಯಿತು.

ವಾಙ್ಮಯ ವಿಶೇ...

ಕನ್ನಡಪ್ರಭ ಭಾನುವಾರದ ಪುರವಣಿ

ಅರ್ಥಪೂರ್ಣ ಕಮ್ಮಟ

ಯಕ್ಷಗಾನದಲ್ಲಿ ಬಣ್ಣಗಾರಿಕೆ

ಬಣ್ಣದ ವೇಷದ ಅದ್ಭುತ ನಟ ಮಾಲಿಂಗ

ಹಿ.ಚಿ. ಬೋರಲಿಂಗಯ್ಯ

28, ಜನವರಿ 1990

ಉಸಿರು ಬಿಡಲೂ ಬಿಡುವಿಲ್ಲದ ಜನನಿಬಿಡ ಮುಂಬೈ ನಗರದ ದಾದರ್ ಸ್ಟೇಷನ್‌ನಲ್ಲಿ ರೈಲು ಇಳಿದು ಸಯಾನ್ ಬಡಾವಣೆಗೆ ಹೊರಟಾಗ ಇರುವೆ ಸಾಲಿನಂತೆ ಹರಿಯುತ್ತಿದ್ದ ಲಕ್ಷಾಂತರ ವಾಹನಗಳ ನಡುವಿನಿಂದ ತಪ್ಪಿಸಿಕೊಳ್ಳುವುದೇ ಕಷ್ಟವಾಯಿತು. ಇಂಥ ಕಾಂಕ್ರೀಟ್ ಕಾಡಿನ ನಡುವೆ ಅದಾವ ಯಕ್ಷಗಾನ ಸಮ್ಮೇಳನ ಮಾಡುತ್ತಾರೋ ಅನ್ನುವ ಭಾವನೆಯೂ ಬಂದದ್ದುಂಟು. ಸಯಾನ್‌ನ ಗೋಕುಲ ಕಟ್ಟಡದಲ್ಲಿರುವ ಗೀತಗೋವಿಂದ ಸಭಾಗೃಹಕ್ಕೆ ಕಾಲಿಟ್ಟಾಗ ಇಡೀ ಮುಂಬೈನ ಸದ್ದುಗದ್ದಲವೇ ಮರೆತುಹೋಗಿ ನಿಶ್ಶಬ್ದ ಹಾಗೂ ಸದ್ಭಾವನೆಯಿಂದ ಕೂಡಿದ ಕೃಷ್ಣನ ದೇವಸ್ಥಾನ ಮೈಸೂರಿನ ಗಂಧದ ಹೊಗೆಯ ಕಂಪು ಬೀರಿ ಸ್ವಾಗತಿಸಿತು. ಯಕ್ಷಗಾನದ ಹಿರಿಯ ದಿ. ಕುರಿಯ ವಿಠಲಶಾಸ್ತ್ರಿ ವೇದಿಕೆ ನಾಲ್ಕು ದಿನಗಳ ಯಕ್ಷಗಾನ ಸಮ್ಮೇಳನಕ್ಕೆ ಸಜ್ಜಾಗಿ ನಿಂತಿತ್ತು.

ಪ್ರತಿ ನಿಮಿಷವನ್ನು ತೂಗಿ ನೋಡುವ ಮುಂಬೈನ ನಮ್ಮ ಕನ್ನಡಿಗರು ಅಂದು ಮಾತ್ರ ಎಲ್ಲಿಲ್ಲದ ಉತ್ಸಾಹದಿಂದ ತಮ್ಮನ್ನು ತಾವೇ ಈ ಉತ್ಸವದಲ್ಲಿ ತೊಡಗಿಸಿಕೊಂಡಿದ್ದರು. ಮುಂಬೈ ಕನ್ನಡಿಗರ ಪದವೀಧರ ಯಕ್ಷಗಾನ ಸಮಿತಿ, ಬಿ.ಎನ್.ಕೆ.ಬಿ. ಅಸೋಸಿಯೇಷನ್ ಹಾಗೂ ಬೆಂಗಳೂರಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗಳು ಸಂಯುಕ್ತವಾಗಿ ಏರ್ಪಡಿಸಿದ್ದ ಈ ಸಮ್ಮೇಳನಕ್ಕೆ ತೆಂಕುತಿಟ್ಟಿನ ಅತಿರಥ ಮಹಾರಥರು ಆಗಮಿಸಿದ್ದೊಂದು ವಿಶೇಷ.

ಬಣ್ಣದ ವೇಷದ ಪ್ರಸಿದ್ಧ ಕಲಾವಿದರಾದ ಚಂದ್ರಗಿರಿ ಅಂಬು, ಬಣ್ಣದ ಮಹಾಲಿಂಗ, ಪಕಳಕುಂಜ ಕೃಷ್ಣಾ ನಾಯಕ್, ಧರ್ಮಸ್ಥಳ ಮೇಳದ ಗೋವಿಂದ ಭಟ್, ಕುಂಬಳೆ ಶ್ರೀಧರ, ಕಾಸರಗೋಡಿನ ಕೃಷ್ಣ ಮಾಸ್ತರ್, ಅರ್ಥದಾರಿ ಪೆರ್ಲ ಕೃಷ್ಣಭಟ್ ಹಾಗೂ ಬಲಿಪ ನಾರಾಯಣ ಭಾಗವತ ಮುಂತಾಗಿ ಯಕ್ಷಗಾನದ ಎಲ್ಲ ವರ್ಗದ ಜನರೂ ಅಲ್ಲಿದ್ದರು. ಮುಂಬೈನಲ್ಲಿ ಯಕ್ಷಗಾನ ಚಟುವಟಿಕೆಗಾಗಿ ತನ್ನನ್ನೇ ಅರ್ಪಿಸಿಕೊಂಡಿರುವ ಪದವೀಧರ ಯಕ್ಷಗಾನ ಸಮಿತಿ ಅಧ್ಯಕ್ಷ ಹಾಗೂ ಸ್ವತಃ ಕಲಾವಿದ ಎಚ್.ಬಿ.ಎಲ್ ರಾವ್ ಇವರೆಲ್ಲರ ನಡುವಿನ ಕೊಂಡಿಯಾಗಿದ್ದರು.

ಕಲಾತ್ಮಕ

ಈ ಸಮ್ಮೇಳನದ ಅತ್ಯಂತ ವಿಶಿಷ್ಟ ಅಂಶವೆಂದರೆ ಉದ್ಘಾಟನೆ, ವಿಚಾರ ಸಂಕಿರಣದ ಹೊರತಾಗಿ ಈ ನಾಲ್ಕು ದಿನಗಳ ಕಾಲ ಅವಿರತವಾಗಿ ನಡೆದ "ಯಕ್ಷಗಾನ ಬಣ್ಣಗಾರಿಕೆಯ ಕಮ್ಮಟ" ದೈವೀ ಆರಾಧನೆಯ ಹಿನ್ನೆಲೆಯಲ್ಲಿ ದೇವಸ್ಥಾನಗಳನ್ನು ಆಶ್ರಯಿಸಿ ಬೆಳೆದು ಬಂದ ಯಕ್ಷಗಾನ ಕ್ರಮೇಣ ತನ್ನ ಆಚರಣಾ ಪರಿಧಿಯನ್ನು ಮೀರಿ ತನ್ನದೇ ಆದ ವೈಶಿಷ್ಟ್ಯತೆಯನ್ನು ಉಳಿಸಿಕೊಂಡಿದೆ.

ಬಣ್ಣದ ವೇಷದ ಅದ್ಭುತ ನಟ ಮಾಲಿಂಗ

ಯಕ್ಷಗಾನ ಆಟದವನಿಗೆ ಹೆಣ್ಣು ಕೊಡಬಾರದು ಎಂಬ ಅಭಿಪ್ರಾಯವಿದ್ದ ಕಾಲದಲ್ಲಿ ಯಕ್ಷಗಾನರಂಗವನ್ನು ಪ್ರವೇಶಿಸಿದ ಬಣ್ಣದ ಮಾಲಿಂಗ ಅಭಿನಯದೊಡನೆ ಪ್ರಸಾದನಕ್ಕೆ ನೀಡಿದ ಕಾಣಿಕೆ ಅಪಾರ.

'ಗಾಂಧಿ ಮಾಲಿಂಗ' ಎಂದೇ ಪ್ರೀತಿಯಿಂದ ಗುರುತಿಸಲ್ಪಡುವ ಬಣ್ಣದ ಮಾಲಿಂಗ ಅಭಿನಯಿಸದ ಪಾತ್ರವಿಲ್ಲ. ೭೬ ವರ್ಷದ ಮಾಲಿಂಗರು ಏನಿಲ್ಲೆಂದರೂ ೬೦ ತಿರುಗಾಟಗಳನ್ನು ಮುಗಿಸಿದ್ದಾರೆ.

ಮಾಲಿಂಗರ ತಾತ ಚಲ್ಯಶಂಕರ ಹಿರಿಯ ಭಾಗವತರು, ಕಲಾವಿದ ಕೋಲುಣಿ ಸುಬ್ಬಮಾವ ಹೀಗೆ ಕಲಾವಿದರ ಕುಟುಂಬದಲ್ಲಿ ಬೆಳೆದ ಇವರಿಗೆ ಯಕ್ಷಗಾನದ ಹೆಜ್ಜೆಗಳು ಆಕರ್ಷಿಸಲು ತಡವಾಗಲಿಲ್ಲ. ತಾತ ಶಂಕರ ಭಾಗವತರ ಭಾಗವತಿಕೆಯ ಮಾರ್ಗದರ್ಶನದಲ್ಲಿ ಮಂಜಪ್ಪ ಹಾಸ್ಯಗಾರರಿಂದ ನೃತ್ಯ ಕಲಿತರು.

ಸ್ತ್ರೀವೇಷದಿಂದ ಆರಂಭಿಸಿ, ಪುರಾಣದ ಹಲವಾರು 'ಗಂಡು' ಪಾತ್ರಗಳನ್ನು ನಿರ್ವಹಿಸಿರುವ ಮಾಲಿಂಗರು ರಾಕ್ಷಸನ ಪಾತ್ರಗಳಲ್ಲಿ ಎತ್ತಿದ ಕೈ. ಹೆಣ್ಣು ಪಾತ್ರದಲ್ಲಿ 'ಅಜಮುಖಿ' ಹಾಗೂ ಗಂಡು ಪಾತ್ರದಲ್ಲಿ 'ಮಹಿರಾವಣ' ಇವರ ನೆಚ್ಚಿನ ಪಾತ್ರಗಳು.

'ಇದು ಯಕ್ಷಗಾನ ಕಲಾವಿದರ ಸುವರ್ಣಯುಗ' ಎನ್ನುವ ಮಾಲಿಂಗರು ಪ್ರೇಕ್ಷಕರು ಎಂದೆಂದಿಗೂ ಕಲೆಯನ್ನು ಬಿಡುವುದಿಲ್ಲ ಎಂದು ತುಂಬಾ ಆತ್ಮವಿಶ್ವಾಸ ವ್ಯಕ್ತಪಡಿಸುತ್ತಾರೆ. ಇದೊಂದು ಅದ್ಭುತ ಕಲೆ. ಸರ್ಕಾರ ಈ ಕಲೆಯ ಬಗ್ಗೆ ವಿಶೇಷ ಗಮನಹರಿಸಬೇಕು ಎಂಬುದು ಇವರ ಖಚಿತ ಅಭಿಪ್ರಾಯ.

ಆದರಲ್ಲಿಯೂ ತೆಂಕುತಿಟ್ಟಿನ (ಅಂದರೆ ಉಡುಪಿಯಿಂದ ಕಾಸರಗೋಡಿನವರೆಗೆ) ಯಕ್ಷಗಾನ ಮಾತ್ರ ಹೆಚ್ಚಿನ ಬದಲಾವಣೆಗೆ ಒಳಗಾಗದೆ ತನ್ನ ಹಸಿತನವನ್ನು ಹಾಗೇ ಕುಳಿಸಿಕೊಳ್ಳಲು ಹೆಣಗುತ್ತಿದೆಯೆಂದರೆ ತಪ್ಪಾಗಲಾರದು.

ಯಕ್ಷಗಾನ ಹೊಸ ಬದಲಾವಣೆಗೆ ಒಳಗಾಗುವ ಉತ್ಸಾಹದಲ್ಲಿ ತನ್ನ ಕಲಾತ್ಮಕತೆಯನ್ನು ಕಳೆದುಕೊಳ್ಳುತ್ತಿದೆ ಎಂಬ ಕೂಗು ಎದ್ದಿರುವ ಈ ಸಂದರ್ಭದಲ್ಲಿ ಪರಂಪರಾಗತ ಯಕ್ಷಗಾನ ನಿಜವಾದ ಸಾಂಪ್ರದಾಯಿಕ ಶೈಲಿಯಲ್ಲಿ ಹೇಗಿತ್ತು? ಮತ್ತು ಅದನ್ನೇ ಏಕೆ ಉಳಿಸಿಕೊಳ್ಳಬೇಕು ಎಂಬುದನ್ನು ನಿರ್ದಿಷ್ಟವಾಗಿ ಪ್ರತಿಪಾದಿಸುವುದೇ ಈ ಬಣ್ಣಗಾರಿಕೆ ಕಮ್ಮಟದ ಉದ್ದೇಶವಾಗಿತ್ತು. ಸಮ್ಮೇಳನದ ವಿವಿಧ ವೇದಿಕೆಗಳಲ್ಲಿ ಮಾತನಾಡಿದ ಪೆರ್ಲ ಕೃಷ್ಣ ಭಟ್, ವಿದ್ವಾನ್ ರಾಮಚಂದ್ರ ಉಚ್ಚಿಲ, ಡಾ. ಅಮೃತ ಸೋಮೇಶ್ವರ, ಎಚ್.ಬಿ.ಎಲ್. ರಾವ್ ಮುಂತಾದ ವಿದ್ವಾಂಸರು ಕೂಡ ಸಮ್ಮೇಳನದ ಈ ಉದ್ದೇಶವನ್ನೇ ಪ್ರತಿಪಾದಿಸಿ ಯಕ್ಷಗಾನ ತನ್ನ ಕಲಾತ್ಮಕತೆಯನ್ನು ಕಾಪಾಡಿಕೊಳ್ಳಬೇಕಾದ ಅಗತ್ಯವನ್ನೇ ಒತ್ತಿ ಹೇಳಿದರು.

ವಿದ್ವಾಂಸರ ಅಭಿಪ್ರಾಯಗಳಿಗೆ ಪೂರಕವಾಗಿ ತೆಂಕುತಿಟ್ಟಿನ ಅತ್ಯಂತ ಹಿರಿಯ ಹಾಗೂ ಪ್ರಸಿದ್ಧ ಕಲಾವಿದರು ಬಣ್ಣಗಾರಿಕೆ ಹಾಗೂ ವೇಷಗಾರಿಕೆಯನ್ನು ಪ್ರತ್ಯಕ್ಷವಾಗಿ ಪ್ರಯೋಗಿಸಿ ತೋರಿಸಿದ್ದು ಸಮ್ಮೇಳನಕ್ಕೂ ಒಂದು ಅಪೂರ್ವ ಮೆರುಗನ್ನು ಕೊಟ್ಟಿತ್ತು.

ಯಕ್ಷಗಾನದ ಬಣ್ಣಗಾರಿಕೆ ಎಂದರೆ ಸುಲಭದ ಮಾತಲ್ಲ. ಯಕ್ಷಗಾನ ಪಾತ್ರದಾರಿ ಕೇವಲ ಅಭಿನಯಗಾರನಷ್ಟೇ ಅಲ್ಲ. ಅವನೊಬ್ಬ ಕುಂಚ ಹಿಡಿದ ಕಲಾವಿದನಿಗೆ ಸಮನಾದ ಕಲಾವಂತ. ಬಣ್ಣವನ್ನು ಹೇಗೆ ತಯಾರಿಸಿಕೊಳ್ಳಬೇಕು ಎಂಬುದರಿಂದ ಹಿಡಿದು, ತನ್ನ ಮುಖಕ್ಕೆ ವಿವಿಧ ಬಣ್ಣಗಳ ಸೂಕ್ಷ್ಮ ಸಂಯೋಜನೆ ಮಾಡಿ ತನ್ನ ತನವನ್ನು ಮರೆಸಿ ಅತಿಮಾನವನನ್ನಾಗಿ ಪರಿವರ್ತಿಸಿಕೊಳ್ಳುವ ಕುಶಲತೆ ಅವನಲ್ಲಿರಬೇಕು. ಅನಂತರ ತನ್ನನ್ನು ತಾನೇ ಮರೆತು ಪಾತ್ರದಲ್ಲಿ ವಿಲೀನವಾಗುವುದು ಮುಂದಿನ ಹಂತ. ಯಕ್ಷಗಾನದ ಬಣ್ಣಗಳೆಂದರೆ ಕೇವಲ ಒಂದೆರಡಲ್ಲ. ವಿವಿಧ ವೇಷಗಳಿಗೆ ತಕ್ಕಂತೆ ವಿವಿಧ ಬಣ್ಣ ತೆಂಕುತಿಟ್ಟಿನ ಯಕ್ಷಗಾನದ ವೇಷಗಳಲ್ಲಿ ಬಣ್ಣದ ವೇಷ, ಎದುರು ವೇಷ ಪುಂಡುವೇಷ, ಕಿರೀಕಾವೇಷ ಮುಂತಾಗಿ ಹಲವು ಮಾದರಿಯ ಪಾತ್ರಗಳುಂಟು.

ಯಾವುದೇ ಪ್ರಸಂಗದ ಆರಂಭದಲ್ಲಿ ಬರುವ ಅರ್ಜುನ, ರಾಮ, ದೇವೇಂದ್ರ ಮುಂತಾದವು ಕಿರೀಕಾ ವೇಷಗಳಾದರೆ ಈ ಪಾತ್ರಗಳ ವಿರುದ್ಧವಾಗಿ ಬರುವ ಕರ್ಣ, ಕೌರವ, ಅತಿಕಾಯ ಮುಂತಾದ ಪಾತ್ರಗಳು ಎದುರು ವೇಷಗಳು. ರಾವಣ, ಕಂಸ, ಜರಾಸಂಧ, ಅನುಸಾಲ್ವ, ನರಸಿಂಹ, ವೀರಭದ್ರ ಮುಂತಾದ ಪಾತ್ರಗಳು ಬಣ್ಣದ ವೇಷಗಳಾದರೆ ಅಭಿಮನ್ಯು, ಬಬ್ರುವಾಹನ, ಕೃಷ್ಣ ಮುಂತಾದವು ಪುಂಡು ವೇಷಗಳು. ಇಷ್ಟಲ್ಲದೆ ಬಕಾಸುರ, ಹಿಡಿಂಬ ಮುಂತಾದ ಅತ್ಯಂತ ಒರಟು ಪಾತ್ರಗಳನ್ನು ಕಾಟು ಬಣ್ಣ ಎಂದು ಕರೆಯುವುದುಂಟು.

ಯಕ್ಷಗಾನದ ನಿಜವಾದ ಬಣ್ಣಗಾರಿಕೆ ಕಂಡುಬರುವುದು ಈ ಬಣ್ಣದ ವೇಷ ಹಾಗೂ ಕಾಟು ಬಣ್ಣಗಳಲ್ಲಿ. ದಕ್ಷಿಣ ಕನ್ನಡದ ಭೂತಾರಾಧನೆ ಹಾಗೂ ಕೇರಳದ ಕಥಕ್ಕಳಿಯ ರಾಕ್ಷಸ ಪಾತ್ರಗಳ ಛಾಯೆ ಈ ಪಾತ್ರಗಳ ಮೇಲಿರಬಹುದಾದರೂ ಬಣ್ಣಗಾರಿಕೆಯಲ್ಲಿ ಮಾತ್ರ ತನ್ನದೇ ಆದ ವೈವಿಧ್ಯತೆ ಹೊಂದಿದೆ. ೭೫ರ ಹರೆಯದ ಸುಪ್ರಸಿದ್ಧ ಬಣ್ಣದ ವೇಷಧಾರಿ ಚಂದ್ರಗಿರಿ ಅಂಬು ಬೆಳಿಗ್ಗೆಯೇ ಬಣ್ಣ ಹಾಕಲು ಕುಳಿತರೆ ಅವರ ಸುತ್ತ ವಿದ್ವಾಂಸರು ಮತ್ತು ಆಸಕ್ತ ಕುತೂಹಲಿಗಳು. ಅಂಬು ವಯೋವೃದ್ಧರಾದರೂ ಬಲಿಷ್ಠ ದೇಹ ಹಾಗೂ ಪ್ರಖರ ವ್ಯಕ್ತಿತ್ವವುಳ್ಳ ಕಲಾವಿದ. ಸಾಮಾನ್ಯವಾಗಿ ಭೂತವೇಷದಲ್ಲಿ ಬಳಸುವ ಇಂಗಳೀಕ, ಕುಂಕುಮ, ಎಣ್ಣೆ, ಮಸಿಗಳು ಒಂದು ಕಡೆ,

ಅಕ್ಕಿ ಹಿಟ್ಟು ಮತ್ತು ಸುಣ್ಣದ ಬಿಳಿ ಮಿಶ್ರಣ ಒಂದು ಕಡೆ. ಮೊದಲು ಕಣ್ಣಿನ ಸುತ್ತ ಕಪ್ಪು ಮತ್ತು ಕೆಂಪು ಬಣ್ಣಗಳಿಂದ ನವಿರಾದ ಗೆರೆ ಮೂಡಿಸಿ ಕಣ್ಣಿಗೆ ಪ್ರಖರತೆಯನ್ನು ಉಂಟು ಮಾಡಿದರು. ನಂತರ ಇದೇ ರೀತಿಯ ಗೆರೆ ಹಣೆಯವರೆಗೆ ವಿಸ್ತರಿಸಿ, ಮೀಸೆಯ ಕೆಳಭಾಗದ ಗದ್ದದವರೆಗೂ ಇಳಿಯಿತು. ಇವುಗಳನ್ನು ಜೀವರೇಖೆಗಳು ಎನ್ನುತ್ತಾರೆ. ಈ ಗೆರೆಗಳ ಎರಡೂ ಪಕ್ಕದಲ್ಲಿ ಸುಣ್ಣ ಮತ್ತು ಅಕ್ಕಿ ಹಿಟ್ಟಿನ ಚುಟ್ಟಿ. ಈ ಚುಟ್ಟಿ ಕೇವಲ ಒಂದು ಸಲ ಇಟ್ಟು ತೆಗೆಯುವುದಲ್ಲ.

ಮೊದಲು ಇಟ್ಟ ಚುಟ್ಟಿ ಒಣಗಿದ ನಂತರ ಅದರ ಮೇಲೆ ಮತ್ತೊಂದು ಲೇಪನ, ಮುಂದೊಂದು ಲೇಪನ, ತೆಂಗಿನ ಗರಿಯ ಕಡ್ಡಿಯಿಂದ ಹೀಗೆ ಒಂದೊಂದೇ ಬೊಟ್ಟು ಇಡುತ್ತಾ ಪ್ರತಿ ಬೊಟ್ಟು ಒಂದಿಂಚು ಬೆಳೆಯುತ್ತದೆ. ಈ ವೇಷ ರಚನೆಯಲ್ಲಿ ಕತ್ತಾಳೆಯ ಮುಳ್ಳುಗಳಂತೆ ಕಾಣುವ ಈ ಚುಟ್ಟಿಗಳದೇ ಒಂದು ವೈಶಿಷ್ಟ್ಯ. ಈ ರೀತಿ ಬರೆಯುವ ಚುಟ್ಟಿಗಳ ವಿನ್ಯಾಸ ಪಾತ್ರದಿಂದ ಪಾತ್ರಕ್ಕೆ ಬದಲಾಗುತ್ತವೆ. ಅಂಬು ಅವರ ಜೊತೆಯಲ್ಲೇ ಬಣ್ಣಕ್ಕಾಗಿ ಕೂತ ಮಹಾಲಿಂಗ ಹಾಗೂ ಪಕಳಕುಂಜರ ವಿನ್ಯಾಸ ಬೇರೆಯದೇ ತೆರನಾಗಿತ್ತು. ಈ ಚುಟ್ಟಿಯ ಕೆಲಸಕ್ಕೆ ಕನಿಷ್ಠ ಮೂರು ಗಂಟೆಗಳ ಸಮಯ ಬೇಕು. ಈ ಚುಟ್ಟಿಯ ವಿನ್ಯಾಸ ಮುಗಿದ ನಂತರ ಮುಖವರ್ಣಿಕೆಯ ಮೂಗಿನ ತುದಿಗೆ ಮೊಟ್ಟೆ ಗಾತ್ರದ ಹತ್ತಿಯ ಗೊಂಡೆಯನ್ನು ಅಂಟಿಸಬೇಕು. ಆಗ ನಿಜವಾದ ಕಣ್ಣು ಮತ್ತು ಮೂಗು ಮಾಯವಾಗಿ ಅತಿ ಮಾನವ ರೀತಿಯ ಅತಿ ರಂಜಿತವಾದ ಆಕಾರ ಹೊರ ಹೊಮ್ಮುತ್ತದೆ. ಚಂದ್ರಗಿರಿ ಅಂಬು "ಈಗಿನದು ಯಾವ ವೇಷ ಮಾರಾಯರೇ, ಬಣ್ಣದ ವೇಷದಲ್ಲಿ ಇಂಥ ಹನ್ನೆರಡು ಬಗೆಯ ವಿನ್ಯಾಸಗಳನ್ನು ನಾನು ನೋಡಿದ್ದುಂಟು" ಎನ್ನುತ್ತಾರೆ.

ಸೃಜನಶೀಲತೆ

• ಗೀತಗೋವಿಂದ ಸಭಾದ ೨ನೇ ಹಾಲ್‌ನಲ್ಲಿ ಮುಂಬೈನ ಯಕ್ಷಗಾನ ಅಭಿಮಾನಿಗಳು ಕಿಕ್ಕಿರಿದು ಸೇರಿದ್ದರು. ಅಮೃತ ಸೋಮೇಶ್ವರ, ರಾಮಚಂದ್ರ ಉಚ್ಚಿಲ ಅವರು ವೇಷಗಳ ಬಣ್ಣಗಾರಿಕೆಯ ಬಗ್ಗೆ ವಿವರಣೆ ನೀಡುತ್ತಿದ್ದರು. ಜಾನಪದ ಅಕಾಡೆಮಿಯ ಕ್ಯಾಮರಾ ತಂಡ ಒಂದೇ ಸಮನೆ ದಾಖಲಾತಿ ಕಾರ್ಯ ನಡೆಸಿತ್ತು. ಚಂದ್ರಗಿರಿ ಅಂಬು ಅವರ ಕಾಲಜಂಘ, ಬಣ್ಣದ ಮಹಾಲಿಂಗ ಅವರ ವಾಲಿ, ಪಕಳಕುಂಜ ಕೃಷ್ಣನಾಯಕರ ಕುಂಭಕರ್ಣ, ಕಾಸರಗೋಡಿನ ಕೃಷ್ಣ ಮಾಸ್ತರರ ಬಭ್ರುವಾಹನ, ಕುಂಬಳೆ ಶ್ರೀಧರರ ನಾಗರಾಜ, ಧರ್ಮಸ್ಥಳ ಗೋವಿಂದಭಟ್ಟರ ಇಂದ್ರ, ನಯನಕುಮಾರ್ ಅವರ ರಾಕ್ಷಸ ಚಾರಕ ಪಾತ್ರಗಳ ಮುಖವರ್ಣಿಕೆ ಸಿದ್ಧವಾಗಿದ್ದವು. ಇಡೀ ಹಾಲ್‌ನಲ್ಲಿ ಬಣ್ಣದ ವಾತಾವರಣ. ನಾವೆಲ್ಲರೂ ಯಾವುದೋ ಪೌರಾಣಿಕ ವಾತಾವರಣದಲ್ಲಿ ವಿಹರಿಸುತ್ತಿದ್ದೆವು.

ಸತತವಾಗಿ ಇಡೀ ನಾಲ್ಕು ದಿನ ನಡೆದ ಈ ಸಮ್ಮೇಳನದ ಮತ್ತೊಂದು ವಿಶೇಷವೆಂದರೆ ತಾಳ ಮದ್ದಳೆಯ ಅಪೂರ್ವ ಪ್ರಸಂಗ. ಪ್ರಸಿದ್ಧ ಅರ್ಥದಾರಿ ಪೆರ್ಲ ಕೃಷ್ಣಭಟ್ ಮತ್ತು ರಮಾನಂದ ಬನಾರಿ ಅವರು ಮುಖಾಮುಖಿಯಾಗಿ ಬಲಿಪ ನಾರಾಯಣ ಭಾಗವತರ ಹಾಡುಗಳನ್ನು ವಿಶ್ಲೇಷಿಸುತ್ತಿದ್ದ ಕರಾವಳಿಗಳಲ್ಲಿ ತಿಂಗಳುಗಟ್ಟಲೆ ಮಳೆ ಹಿಡಿದಾಗ ಆಚೆ ಹೋಗಲಾರದ ಅನಿವಾರ್ಯ ಪರಿಸ್ಥಿತಿಯಲ್ಲಿ ಈ ತಾಳ ಮದ್ದಳೆ ಕಲೆ ಆರಂಭವಾಯಿತೆಂದು ವಿದ್ವಾಂಸರು ಊಹಿಸುತ್ತಾರೆ. ಯಕ್ಷಗಾನ ಪ್ರಸಂಗಗಳನ್ನು ಹಾಡುತ್ತಾ ಇಬ್ಬರು

ಚಂದ್ರಗಿರಿ ಅಂಬು

ಕಾಸರಗೋಡಿನ ದಿವಂಗತ ಬಣ್ಣದ ಕುಟ್ಯಪ್ಪ ನಂತರ ಯಾರೂ ಸರಿಗಟ್ಟಲಾಗದ ಬಣ್ಣದ ವೇಷಧಾರಿ ಎಂಬ ಹೆಗ್ಗಳಿಕೆ ಪಾತ್ರರಾದ ಚಂದ್ರಗಿರಿ ಅಂಬು ಈ ಶತಮಾನ ಕಂಡ ಅಪೂರ್ವ ಯಕ್ಷಗಾನ ಕಲಾವಿದರಲ್ಲಿ ಒಬ್ಬರು. ಎಂಬತ್ತರ ಹರೆಯದ ಅಂಬು ಹುಟ್ಟಿದ್ದು ಕಾಸರಗೋಡಿನ ಸುಂದರ ಚಂದ್ರಗಿರಿ ನದಿ ದಡದಲ್ಲಿ. ತಂದೆ ಬೋಯಿ ಗಾಣಿಗ, ಅತ್ಯಂತ ಬಡವ. ಹುಟ್ಟು ಕಲಾವಿದರಾದ ಅಂಬು ಬದುಕಿಗಾಗಿ ಕಲೆಯನ್ನೇ ಆರಿಸಿಕೊಂಡರು. ತನ್ನ 29ನೇ ವಯಸ್ಸಿನಲ್ಲಿ ಯಕ್ಷಗಾನದ ಹಿರಿಯ ಕಲಾವಿದರಿಂದ ಗುರುತಿಸಲ್ಪಟ್ಟು ಅಂಬು ಪುಂಡುವೇಷ, ಸ್ತ್ರೀವೇಷ, ಎದುರು ವೇಷಗಳ ಮೆಟ್ಟಿಲುಗಳನ್ನು ಏರಿ ಯಕ್ಷಗಾನ ಕಲೆಯ ಪರಮ ಸಿದ್ಧಿ ಎನಿಸಿದ ಬಣ್ಣದ ವೇಷದ ಪಾತ್ರಧಾರಿಯಾದರು.

ಬಣ್ಣದ ವೇಷ ಹಾಕಿ ಅಂಬು ರಂಗಕ್ಕೆ ಬಂದರೆಂದರೆ ಇಡೀ ಸಮೂಹ ಗಂಭೀರವಾಗುತ್ತದೆ. ಧೀರೋದಾತ್ತ ನಡೆಯಲ್ಲಿ ತೆರೆ ಬಿಟ್ಟುಕೊಂಡು ರಂಗ ಪ್ರವೇಶಿಸಿದ ನಂತರ ಚಂಡೆಯ ನುಡಿತಕ್ಕೆ ಅನುಗುಣವಾಗಿ ಕುಣಿಯುವ ಭಂಗಿ ಅನನ್ಯವಾದುದು. ಹಾವಭಾವವಾಗಲೀ, ಮಾತುಗಾರಿಕೆಯಾಗಲೀ ಸಂಪ್ರದಾಯಬದ್ಧ ಸುಂದರ ನೃತ್ಯವಾಗಲೀ ಅಂಬು ಅವರಿಗೆ ಕರತಲಾಮಲಕ. ರಂಗಕ್ಕೆ ಬರುವ ಮೊದಲು ಪೂರ್ವರಂಗದಲ್ಲಿ ತನ್ನ ಮುಖ ವರ್ಣಿಕೆಗೆ ಸುಮಾರು 6 ಗಂಟೆಗಳ ಕಾಲ ಶ್ರಮಿಸುವ ಅಂಬು ಕೇವಲ ಅಭಿನಯಗಾರನಷ್ಟೇ ಅಲ್ಲ, ಪ್ರಸಿದ್ಧ ಬಣ್ಣದ ಕಲಾವಿದ.

ಅಂಬುವಿನ ಬಣ್ಣಗಾರಿಕೆ ಇವತ್ತಿಗೆ ಅನೇಕರಿಗೆ ಮಾರ್ಗದರ್ಶನವಾಗಿದೆ. ಕುತ್ಯಾಲ, ಮುಲ್ಕಿ, ಕಟೀಲು ಮತ್ತು ಧರ್ಮಸ್ಥಳ ಮೇಳಗಳಲ್ಲಿ ಸುಮಾರು ಆರು ದಶಕಕ್ಕೂ ಮಿಕ್ಕಿ ಅನುಭವ ಗಳಿಸಿರುವ ಅಂಬು ಇವತ್ತು ತೆಂಕುತಿಟ್ಟು ಯಕ್ಷಗಾನರಂಗದ ಹಿರಿಯ ತಾತ. ೯೮ರಲ್ಲಿ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಅವರಿಗೆ ರಾಜ್ಯಪ್ರಶಸ್ತಿ ನೀಡಿ ಗೌರವಿಸಿದೆ. ಆದರೆ ಈ ಪ್ರಸಿದ್ಧ ಕಲಾವಿದ ಎಂದೂ ಸುಖದಿನಗಳನ್ನು ಕಂಡವರೇ ಅಲ್ಲ. ವೃತ್ತಿ ಮೇಳಗಳಲ್ಲಿ ಊರೂರು ಸುತ್ತುತ್ತ ಇವರು ತಮ್ಮಷ್ಟೇ ಇಳಿ ವಯಸ್ಸಿನ ಪತ್ನಿಯ ಜೊತೆ ಕಾಲ ನೂಕುತ್ತಿದ್ದಾರೆ. ಬದುಕುವುದಕ್ಕಾಗಿ ಅಂರ ಈ ಇಳಿ ವಯಸ್ಸಿನಲ್ಲೂ ದುಡಿಯ ಬೇಕಾದ ಅನಿವಾರ್ಯತೆ ಇದೆ.

ಅರ್ಥದಾರಿಗಳು ಮುಖಾಮುಖಿಯಾಗಿ ಪ್ರಶ್ನೋತ್ತರ ನಡೆಸುತ್ತ ವಿಶ್ಲೇಷಿಸುವುದೇ ತಾಳಮದ್ದಳೆ. ಪೆರ್ಲ ಕೃಷ್ಣಭಟ್ ಮತ್ತು ಶೇಣಿ ಗೋಪಾಲಕೃಷ್ಣ ಭಟ್ಟರಂತಹ ವಿದ್ವಾಂಸರ ಅರ್ಥಗಾರಿಕೆಯನ್ನು ಯಾರೂ ಮರೆಯುವಂತಿಲ್ಲ. ಅರ್ಥಗಾರನಿಗೆ ಕೇವಲ ಶಾಸ್ತ್ರ ಜ್ಞಾನವಿದ್ದರೆ ಸಾಲದು, ಅವನು ಸೃಜನಶೀಲನಾಗಿರಬೇಕು.

ಇದೆಲ್ಲಾ ಹಗಲಾದರೆ ರಾತ್ರಿಯ ವೈಶಿಷ್ಟ್ಯವೇ ಬೇರೆ, ಈ ಯಾವತ್ತು ಪ್ರಸಿದ್ಧ ಕಲಾಕಾರರು ಬೆಳಗ್ಗೆಲ್ಲಾ ಕಮ್ಮಟದಲ್ಲಿ ಭಾಗವಹಿಸಿ ರಾತ್ರಿ ಪ್ರಸಂಗಕ್ಕೆ ಸಿದ್ಧವಾಗುತ್ತಿದ್ದರು. ದಕ್ಷಿಣ ಕನ್ನಡ ಮತ್ತು ಕಾಸರಗೋಡು ಜಿಲ್ಲೆಯ ವಿವಿಧ ಭಾಗಗಳಿಂದ ಬಂದಿದ್ದ ಹತ್ತಾರು ಪ್ರತಿಭಾನ್ವಿತರು ಒಂದೆಡೆ ಸೇರಿ ಮಾಡುವ ಪ್ರಸಂಗಗಳ ಗಮ್ಮತ್ತೇ ಬೇರೆ. ಇಂದ್ರಶೀಲ, ಜಾಂಬುವತಿ ಕಲ್ಯಾಣ, ಭಕ್ತ ತಾಮ್ರಧ್ವಜ ವೀರ ವೀರವರ್ಮ, ಅಂಗದ ಸಂಧಾನ, ಅತಿಕಾಯ ಮೋಕ್ಷ ಮತ್ತು ಮೈರಾವಣ ಕಾಳಗ ಮುಂತಾದ ಸುಪ್ರಸಿದ್ಧ ಯಕ್ಷಗಾನಗಳ ಪ್ರದರ್ಶನವೂ ಆಯಿತು. ಮುಂಬೈ ಪದವೀಧರ ಸಂಘದ ಎಚ್.ಬಿ.ಎಲ್. ರಾವ್ ಪೆರ್ಲ ಲಕ್ಷ್ಮೀನಾರಾಯಣ ಶೆಟ್ಟಿ ಮತ್ತು ತರುಣ ಉತ್ಸಾಹಿ ಉಪಾಧ್ಯಾಯ ಅವರ ಸತತ ಪರಿಶ್ರಮ. ಈ ಎಲ್ಲ ಕಾರ್ಯಕ್ರಮಗಳ ಯಶಸ್ವಿಗೆ ಕಾರಣವಾಯಿತು. ಮುಂಬೈ ಕನ್ನಡತಿ ಮಹಾರಾಷ್ಟ್ರದ ಮಾಜಿ ಮಂತ್ರಿ ಡಾ. ಲಲಿತಾರಾವ್, ಪ್ರಾಧ್ಯಾಪಕಿ ಸುನೀತಾ ಶೆಟ್ಟಿ, ಮುಂಬೈ ವಿಶ್ವವಿದ್ಯಾನಿಲಯದ ಕನ್ನಡ ವಿಭಾಗದ ಮುಖ್ಯಸ್ಥ ತಾಳ್ತಜೆ ವಸಂತಕುಮಾರ್ ಮುಂತಾದವರೂ ಪ್ರತಿದಿನವೂ ಭಾಗವಹಿಸಿ ಅನೇಕ ವಿಧದಲ್ಲಿ ಸಹಕರಿಸುತ್ತಿದ್ದರು.

ಇಂದು ಯಕ್ಷಗಾನ ಕನ್ನಡ ನಾಡಿನ ಕಲಾಕ್ಷೇತ್ರದ ಹೆಮ್ಮೆಯ ಕಾಣಿಕೆಯಾಗಿ ವಿದೇಶವನ್ನು ಕಂಡು ಬಂದಿದೆ. ಅಪೂರ್ವ ಬಣ್ಣಗಾರಿಕೆ, ಮನಮೋಹಕ ವಸ್ತ್ರ ವಿನ್ಯಾಸ, ಅಂಗಿಕ ಅಭಿನಯ, ವೇದಿಕೆಯೇ ತತ್ತರಿಸುವಂಥ ರಭಸದ ಕುಣಿತ, ಥವಗುಟ್ಟಿಸುವ ಚಂಡೆ ಮದ್ದಳೆ, ಶಾಸ್ತ್ರೀಯವಾದ ಭಾಗವತಿಕೆಗಳ ಸಮ್ಮಿಶ್ರ ಕಲೆಯಾದ ಯಕ್ಷಗಾನ ಈ ದೇಶದ ಮಹೋನ್ನತ ಕಲೆಗಳಲ್ಲಿ ಒಂದು. ಅಷ್ಟೇ ಅಲ್ಲ. ನವರಸಗಳನ್ನು ಒಳಗೊಂಡ ವಿರಳ ಕಲೆಗಳಲ್ಲಿ ಒಂದು ಎಂದರೂ ಅತಿಶಯೋಕ್ತಿಯಲ್ಲ. ಇಂತಹ ಕಲೆಗೆ ವಿಶೇಷ ರೂಪು ನೀಡುವ ನಿಟ್ಟಿನಲ್ಲಿ ಕಲೆಯ ಪರಿಶ್ರಮವನ್ನು ಸಾರಿ ಹೇಳುವುದರಲ್ಲಿ ಯಕ್ಷಗಾನ ಸಮ್ಮೇಳನ ಯಶಸ್ವಿಯಾಯಿತು.



ಕನ್ನಡಪ್ರಭ

ರಾಗಿ ಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡು

ಜಿ. ಎನ್. ಮೋಹನ್

ಗಿರಿಕಾನನಗಳಲ್ಲಿ ಹಾಡುಗಳನ್ನು ಎದೆಯಲ್ಲಿ ಆತುಕೊಂಡು ರೆಕ್ಕೆ ಬಿಚ್ಚಿದ ಹಕ್ಕಿಗಳಂತೆ ಹಾರುವ ಗಿರಿಜನರ ಬದುಕಿನ ಪುಟಗಳು ನಗರದ ಜನರಿಗೆ ಎಟುಕದೆ ದೂರವೇ ಉಳಿದಿದೆ. ಈ ರಂಗುರಂಗಿನ ಬದುಕನ್ನು ನಗರದ ಮಧ್ಯೆ ಚರ್ಚೆಗೆ ತೆರೆದಿಟ್ಟು ಆ ಸಂಸ್ಕೃತಿಯತ್ತ ಕ್ಷ-ಕಿರಣ ಬೀರಲಾಯಿತು.


ವಾಙ್ಮಯ ವಿಶೇ...

7-2-1988

'ರಾಗಿ ಕಲ್ಲಿನ ಮೇಲೆ ಚೆಲ್ಲೀದೆ ನಮ್ಮ ಹಾಡು'

7, ಫೆಬ್ರವರಿ 1988

ಗಿರಿಕಾನನಗಳಲ್ಲಿ ಹಾಡುಗಳನ್ನು ಎದೆಯಲ್ಲಿ ಅತುಕೊಂಡು ದಿನವಿಡೀ ಸುರಿವ ಜಡಿಮಳೆಗೆ, ಇಲ್ಲವೇ ಉರಿಬಿಸಿಲಿಗೆ ಮೈಒಡ್ಡಿ ಎರಡೂ ಒಂದಿಷ್ಟು ಬಾಡಿದಾಗ ರೆಕ್ಕೆ ಬಿಚ್ಚಿದ ಬೆಳ್ಳಕ್ಕಿಗಳಂತೆ ಹಾರುವ ಗಿರಿಜನರ ಬದುಕಿನ ಪುಟಗಳು ನಗರದ ಜನರಿಗೆ ಕೈಗೆಟುಕದೆ ದೂರವೇ ಉಳಿದಿವೆ.

ಹಾದಿಗಳಲ್ಲಿ ಗೆಜ್ಜೆ ಕಟ್ಟಿ ಕುಣಿಯುವ ಗಿರಿಜನರು ದಿನನಿತ್ಯದ ಬದುಕಿಗಾಗಿ ಊರು ಊರುಗಳಲ್ಲಿ ಹೆಜ್ಜೆ ಸವೆಸುತ್ತಾರೆ. ದಿನದ ಆಯಾಸ ಕಣ್ಣುರೆಪ್ಪೆಗಳ ಮೇಲೆ ಕೂತಾಗ ಆ ದಣಿವನ್ನು ನೀಗಲು ಎದೆಯೊಳಗೆ ಹಾಡು ಹುಟ್ಟುತ್ತದೆ. ತಾವು ಕಂಡ ಊರು, ಹಾದು ಬಂದ ಗುಡ್ಡ, ಮೇಲೆ ಕೋಗಿಲೆ, ಹಿಂದೆಯೇ ಬಿಟ್ಟು ಬಂದ ತವರು ಎಲ್ಲವೂ ಇವರ ಹಾಡುಗಳಲ್ಲಿ ದನಿ ತೆಗೆಯುತ್ತವೆ. ಹರೆಯದ ಜೋಡಿಗಳು ಗೆಜ್ಜೆ ಕಟ್ಟಿ ಹಾಡಿಗೆ ನೋಟದ ರಂಗು ಕೊಡಿಸುತ್ತಾರೆ.

ಈ ರಂಗುರಂಗಿನ ಬದುಕನ್ನು ನಗರದ ಮಧ್ಯ ಚರ್ಚೆಗೆ ತೆರದಿಟ್ಟು ಆ ಸಂಸ್ಕೃತಿಯತ್ತ ಕ್ಷ–ಕಿರಣ ಬೀರಿದ್ದು ರ್ನಾಟಕ ಜಾನಪದ ಮತ್ತು ಯಕ್ಷಗಾನ ಕಾಡೆಮಿ.

ಹಲವು ಯೋಜನೆ

ಇತ್ತೀಚೆಗೆ ಹೊಸದಾಗಿ ಜಾನಪದ ತ್ತು ಯಕ್ಷಗಾನ ಅಕಾಡೆಮಿಯು ಧ್ಯಕ್ಷತೆಯನ್ನು ವಹಿಸಿಕೊಂಡಿರುವ ರಿಯರಾದ ಎಸ್.ಕೆ. ಕರೀಂಖಾನ್‌ರವರು ನಪದ ಕಲೆಗಳ ಉಳಿವಿಗಾಗಿ ಹಲವು ತಿಯ ಯೋಜನೆಗಳನ್ನು ತಯಾರಿಸಿ ದ್ದಾರೆ. ಜಾನಪದ ಮತ್ತು ಯಕ್ಷಗಾನ ಕಾಡೆಮಿ ತನ್ನ ಪ್ರಸುತ್ತ ಅವಧಿಯಲ್ಲಿ ಜನರಿಗಾಗಿಯೇ ಹಲವಾರು ಕಾರ್ಯಮಗಳನ್ನು ಹಮ್ಮಿಕೊಂಡಿದೆ. ಇದರಲ್ಲಿ ಮುಖ್ಯವಾದುದು ಗಿರಿಜನರನ್ನು ಒರೆಗಲ್ಲಿಗೆ ಹಚ್ಚುವ ವಿಚಾರ ಸಂಕಿರಣಗಳು ಹಾಗೂ ಕಲಾಮೇಳಗಳು.

ಪಶ್ಚಿಮಘಟ್ಟಗಳು ಗಿರಿಜನರ ತವರು. ಕಾರವಾರದಿಂದ ಹಬ್ಬಿರುವ ಈ ಪಶ್ಚಿಮ ಘಟ್ಟಗಳಲ್ಲಿ ಗಿರಿಜನರು ಬದುಕು ಸಾಗಿಸುತ್ತಿದ್ದಾರೆ. ಪಶ್ಚಿಮಘಟ್ಟಗಳ ಶ್ರೇಣಿಯಲ್ಲಿ ಸಾಹಸಮಯ ಬದುಕಿಗೆ ಮಗ್ಗುಲಾಗಿರುವ ಈ ಗಿರಿಜನರು ಎಷ್ಟೋ ಮಂದಿ ನಗರದ ಸರಹದ್ದನ್ನೂ ಕಂಡಿಲ್ಲ. ಈ ಬಾರಿ ವಿಚಾರಸಂಕಿರಣವನ್ನು ಪಶ್ಚಿಮ ಘಟ್ಟಗಳ ನೆಲೆಯಾದ ಸಾಗರದಲ್ಲಿ ಏರ್ಪಡಿಸಿದ್ದು ಸಮಯೋಚಿತವಾಗಿತ್ತು. ಜಾನಪದ ಅಕಾಡೆಮ್ಮಿ ಈ ಕಾರ್ಯಕ್ರಮ ನಡೆಸಲು ಮುಂದಾದಾಗ ಅದಕ್ಕೆ ಬೆನ್ನೆಲುಬಾದದ್ದು ಮಲೆನಾಡು ಯಕ್ಷಗಾನ ಮತ್ತು ಜಾನಪದ ಪ್ರತಿಷ್ಠಾನ.

ತಾಳಗುಪ್ಪದ ಈ ಪ್ರತಿಷ್ಠಾನ 1981ರಲ್ಲಿ ಪ್ರಾರಂಭವಾಗಿ ಅಂದಿನಿಂದಲೂ ಜಾನಪದ ಮತ್ತು ಯಕ್ಷಗಾನದ ಉಳಿವಿಗಾಗಿ ಹಲವು ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬಂದಿದೆ. ಮಲೆನಾಡಿನ ಜಾನಪದ ಕಲೆಗಳಿಗೆ ಹೊಸ ಆಯಾಮ ನೀಡುವ ನಿಟ್ಟಿನಲ್ಲಿ ಸಾಗರ, ಸೊರಬ, ಹೊಸನಗರ, ಸಿದ್ದಾಪುರ, ಶಿರಸಿ, ಯಲ್ಲಾಪುರದಲ್ಲಿ ಹಲವು ರೀತಿಯ ಕಾರ್ಯಕ್ರಮಗಳನ್ನು ಮೊದಲಿನಿಂದಲೂ ನಡೆಸಿಕೊಂಡು ಬರುತ್ತಿದೆ. ಪ್ರತೀವರ್ಷ ನಡೆಸುವ ಯಕ್ಷಗಾನ ರಂಗ ತರಬೇತಿ ಶಿಕ್ಷಣ, ಜಾನಪದ ಕಲಾಮೇಳಗಳು ಈ ಸಂಸ್ಥೆಯ ಹೆಗ್ಗುರುತು. ಕರ್ನಾಟಕದ ಪ್ರಪ್ರಥಮ ಗಿರಿಜನರ ಶಾಲೆಯ ಮುಖ್ಯಸ್ಥರಾದ ಎನ್. ಹುಚ್ಚಪ್ಪ ಮಾಸ್ಟರ್, ತಿಮ್ಮಣ್ಣ ಭಟ್ಟ ಕಲಗಾರು ಹಾಗೂ ಬಿ.ಎನ್. ರಾಜಗೋಪಾಲ್‌ರವರು ಈ ಸಂಸ್ಥೆಯನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ಜಾನಪದ ಗ್ರಾಮೀಣ ಸಂಸ್ಕೃತಿಯ ತಳ. ಈ ಸಂಸ್ಕೃತಿಯ ಉಳಿವು ಹಾಗೂ ಅಭ್ಯುದಯಕ್ಕೆ ಆಳವಾದ ಅಧ್ಯಯನ ಹಾಗೂ ಸಕ್ರಿಯ ಕಾರ್ಯಕ್ರಮ ಅತ್ಯಗತ್ಯ.

ಕರ್ನಾಟಕದ ಗಿರಿಜನರ ಬಗ್ಗೆ ಪ್ರಪ್ರಥಮವಾಗಿ ನಡೆದ ಈ ಬೃಹತ್ ಮೇಳ ಸೋಲಿಗರು, ಬೆಟ್ಟ ಕುರುಬರು, ಜೇನುಕುರುಬರು, ಹಸಲರು, ಗೊಂಡರು, ಸಿದ್ದಿಯರು, ಕುಡುಬಿಯರು, ಮುಕ್ರಿಯರು, ಎರವರು, ಕೊರಗರು ಇತ್ಯಾದಿ ಗಿರಿಜನರ ಒಡನಾಟ, ಬದುಕು, ಸಂಸ್ಕೃತಿಗಳ ಬಗ್ಗೆ ಕಿರುನೋಟ ಹರಿಸುವತ್ತ ಇದು ಸಹಾಯ ಮಾಡಿತು.

ಅರ್ಥಪೂರ್ಣ ಮಾತು

ಈ ವಿಚಾರ ಸಂಕಿರಣದಲ್ಲಿ ಜಾನಪದ ವಿದ್ವಾಂಸರಾದ ಎಲ್.ಆರ್. ಹೆಗಡೆ, ಜೀ.ಶಂ.ಪ, ಸೋಮಶೇಖರ ಇಮ್ರಾಪುರ, ವಿವೇಕ ರೈ ಅವರನ್ನೊಳಗೊಂಡಂತೆ ಹಲವು ಉತ್ಸಾಹಿ ಯುವ ಜಾನಪದ ತಜ್ಞರು ಭಾಗವಹಿಸಿದ್ದರು. ಗಿರಿಜನರ ಬದುಕನ್ನು ಸಂರಕ್ಷಿಸಿ ಪ್ರೋತ್ಸಾಹಿಸುವತ್ತ ಎಲ್ಲರೂ ಕರೆ ನೀಡಿದರು. 'ಪಶ್ಚಿಮ ಘಟ್ಟಗಳನ್ನು ಉಳಿಸಿ' ಎಂಬ ಘೋಷಣೆಯೊಂದಿಗೆ ಪಶ್ಚಿಮಘಟ್ಟ ಅಭಿಯಾನ ಪ್ರಾರಂಭವಾಗಿದೆ. ಗಣ್ಯರು

ಇದರಲ್ಲಿ ಭಾಗವಹಿಸುತ್ತಿದ್ದಾರೆ. ಕಾಡು, ನಿಸರ್ಗ ನಮಗೆ ಬೇಕು, ನಿಜ. ಆದರೆ ಅದನ್ನು ಸಂರಕ್ಷಿಸುವಾಗಲೇ ಆ ಪಶ್ಚಿಮ ಘಟ್ಟದುದ್ದಕ್ಕೂ ಹರಡಿಕೊಂಡಿರುವ ಗಿರಿಜನರನ್ನು, ಅವರ ಬದುಕನ್ನು, ಸಂಸ್ಕೃತಿಯನ್ನು ರಕ್ಷಿಸುವಂತೆಯೂ ಘೋಷಣೆ ಹೊರಡಿಸಬೇಕು' ಎಂಬ ಬಿ.ಎ. ವಿವೇಕ ರೈ ಅವರ ಮಾತು ಅರ್ಥಪೂರ್ಣವಾಗಿತ್ತು.

ಈ ಬೃಹತ್ ಸಂಕಿರಣದ ಸಮಾರೋಪ ಭಾಷಣ ಮಾಡುತ್ತಾ ಜೆ.ಎಚ್. ಪಟೇಲ್ ಅವರ 'ಆಧುನಿಕತೆಯ ಗಾಳಿಯಲ್ಲಿ ಜಾನಪದ ಸೊಡರು ಆರುತ್ತಿದೆ, ನಿಜ. ಜಾನಪದ ಇಂದಿನ ಆಧುನಿಕ ಯುಗದಲ್ಲಿ ಹಲವು ಬದಲಾವಣೆಗಳೊಂದಿಗೆ ಜನರೊಡನೆ ಬೆಸೆಯುವಂತಾಗಬೇಕು' ಎಂದು ಕರೆ ಇತ್ತರು. ಇದೇ ಸಂದರ್ಭದಲ್ಲಿ ರಷ್ಯಾದಲ್ಲಿ ನಡೆದ ಭಾರತ ಉತ್ಸವದಲ್ಲಿ ಪ್ರಚಂಡ ರೀತಿಯಲ್ಲಿ ರಷ್ಯನ್ನರ ಮನಗೆದ್ದ ಕಣ್ಣೂರಿನ ಕಣ್ಣೇಶ್ವರ ಡೊಳ್ಳು ಮೇಳದ ಕಲಾವಿದರನ್ನು ಸನ್ಮಾನಿಸಲಾಯಿತು.

ಕುಣುಬಿ ಕುಣಿತ

ವಿಚಾರ ಸಂಕಿರಣದ ಜೊತೆಯಲ್ಲಿಯೇ ಈ ಗಿರಿಜನ ತಂಡಗಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನೂ ಹಮ್ಮಿಕೊಳ್ಳಲಾಗಿತ್ತು. ಪಶ್ಚಿಮ ಘಟ್ಟಗಳಲ್ಲಿ ನೆಲೆಸಿರುವ ಕುಟುಂಬಗಳಿಗೆ 'ಹೋಳಿ' ಅತ್ಯಂತ ದೊಡ್ಡ ಹಬ್ಬ. ಅಗಲವಾದ ಬಾಯಿಯ ಮಡಿಕೆಗೆ ಉಡದ ಚರ್ಮ ಹೊದೆಸಿ, ಗುಮಟೆಯನ್ನು ಸೊಂಟದವರೆಗೂ ಬರುವಂತೆ ಇಳಿಬಿಡುತ್ತಾರೆ. ಈ ನೃತ್ಯದಲ್ಲಿ ಸೊಂಟದ ಬಳುಕೇ ಪ್ರಧಾನ. ಹರೆಯದವರ ಕುಣಿತಕ್ಕೆ ಕುಡುಬಿ ವೃದ್ಧರು ತಮ್ಮ 'ಗೋಂಯ' ಭಾಷೆಯಲ್ಲಿ ಹಾಡು ಜೋಡಿಸುತ್ತಾರೆ. ಮೇಘಾನೆಯ ಕುಣುಬಿ ತಂಡ ಕುಣುಬಿ ಕುಣಿತದ ಹಲವು ತುಣುಕುಗಳನ್ನು ಪ್ರದರ್ಶಿಸಿದರು.

'ಮೆಘಾನೆ' ಕುಣುಬಿಗಳ ತವರು. ಶಿವಮೊಗ್ಗದ ನಾಗವಳ್ಳಿಯಿಂದ 5 ಸಾವಿರ ಅಡಿ ಎತ್ತರದ ಗಿರಿ ಪ್ರದೇಶಗಳ ಮೇಲೆ ಇರುವ ಪ್ರದೇಶ. ಇತರೆ ಪ್ರದೇಶಗಳಿಂದ ಮೇಘಾನೆಗೆ ಹೋಗಲು ಹಾದಿಯೇ ಇಲ್ಲ. ಮೇಘಾನೆಯನ್ನು ತಲುಪಲು ಮೂರು ಬೃಹತ್ ಬೆಟ್ಟಗಳನ್ನು ಏರಬೇಕು. ಸುತ್ತಲೂ ಮೈಮುಚ್ಚುವ ಹುಲ್ಲುಗರಿಕೆಗಳು. ಮೇಘಾನೆಯ ಒಂದಿಬ್ಬರನ್ನು ಬಿಟ್ಟರೆ ಉಳಿದ ಯಾರೂ 'ಸೈಕಲ್' ಸಹ ನೋಡಿಲ್ಲದ ಮಂದಿ.

ಜಾನಪದ ಅಕಾಡೆಮಿಯ ಉತ್ಸಾಹಿ ರಿಜಿಸ್ಟ್ರಾರ್, ಜಾನಪದ ಸಂಶೋಧಕ ಹಿ.ಚಿ. ಬೋರಲಿಂಗಯ್ಯ ಐದು ಸಾವಿರ ಅಡಿ ಎತ್ತರ ಏರಿ ಅಲ್ಲಿನ ಗಿರಿಜನ ಕುಣುಬಿಗಳ ಬಗ್ಗೆ ಶ್ರೀನಿವಾಸ ಮೂರ್ತಿಯವರ ಸಹಕಾರದೊಂದಿಗೆ ಸತತ ವಿಡಿಯೋ ಚಿತ್ರೀಕರಣ ನಡೆಸಿದರಲ್ಲದೆ, ಗಿರಿಜನ ಮೇಳಕ್ಕೆ ಅವರನ್ನು ಕರೆತಂದರು.

'ವಿಡಿಯೋ ಚಿತ್ರೀಕರಣ ಜಾನಪದ ಯಕ್ಷಗಾನ ಅಕಾಡೆಮಿಯ ಅತಿ ಮುಖ್ಯ ಯೋಜನೆ. ಇತ್ತೀಚಿನವರೆಗೂ ಕೇವಲ ಜಾನಪದ ಕಲೆಗಳನ್ನು ಮಾತ್ರ ದೃಶ್ಯದಲ್ಲಿ ಅಳವಡಿಸಲಾಗಿತ್ತು. ಆದರೆ ಈ ಭಾರಿ ಮುಂದಿನ ಪೀಳಿಗೆಗೆ ಅತ್ಯಂತ ಅಗತ್ಯವಾಗುವ ರೀತಿಯಲ್ಲಿ ಬುಡಕಟ್ಟು ಜನಾಂಗಗಳ, ಗಿರಿಜನರ ಬದುಕನ್ನು ಅವರ ಹಾಡುಗಳಲ್ಲಿ ಅವರ ದಿನನಿತ್ಯದ ಹಾಡು, ಲಯ, ನೋವುಗಳೊಂದಿಗೆ ಸೆರೆ ಹಿಡಿದಿದ್ದೇವೆ' ಎನ್ನುತ್ತಾರೆ ಎಸ್.ಕೆ. ಕರೀಂಖಾನ್.

'ಪರಿಸರ ಎನ್ನುವುದು ಇಲ್ಲದೆ ಯಾವ ಬದುಕಿನ ಚಿತ್ರವೂ ಪರಿಪೂರ್ಣವಾಗಲಾರದು. ಪರಿಸರ ಬದುಕಿನೊಂದಿಗೆ ಬೆಸೆದುಕೊಂಡ ಅಂಶ. ಆದ್ದರಿಂದಲೇ ನಾವು ಗಿರಿಜನರ ಬದುಕನ್ನು ಅವರ ದಿನನಿತ್ಯದ ಪರಿಸರದೊಂದಿಗೇ ಚಿತ್ರಿಸುತ್ತಿದ್ದೇವೆ' ಎನ್ನುತ್ತಾರೆ ಅವರು. ಈಗಾಗಲೇ ಕೊಡಗು, ಸಿದ್ಧಾಪುರ, ಸಾಗರ, ನಾಗವಳ್ಳಿ, ಅಂಕೋಲಾ, ಕುಮಟ, ಹೊನ್ನಾವರಗಳಲ್ಲಿ ಹಾಲಕ್ಕಿ ಒಕ್ಕಲಿಗರು, ಗೊಂಡರು,

ಕುಡುಬಿಯರು, ಸಿದ್ದಿಯರ ಬಗ್ಗೆ 18 ಗಂಟೆಗಳ ವಿಡಿಯೋ ಚಿತ್ರೀಕರಣ ಪೂರೈಸಿದೆ.

ಅಕಾಡೆಮಿ ಇದೇ ರೀತಿ ಹಲವು ದಿಕ್ಕುಗಳಲ್ಲಿ ತನ್ನನ್ನು ಚಾಚಿಕೊಳ್ಳುತ್ತಾ ಹೋದರೆ ಗಿರಿಜನರಿಗೆ ಭದ್ರವಾದ ಬುನಾದಿ ಹಾಕಿದಂತಾಗುತ್ತದೆ. ಈಗ ಅದಕ್ಕೆ ಅಡಿಪಾಯ ಹಾಕಿದ ಯಶಸ್ಸು ಖಂಡಿತಾ ಕರೀಂಖಾನ್‌ರವರಿಗೆ ಸಲ್ಲಬೇಕು.

ಬರಹಕ್ಕೆ ಮೀರಿದ ಸರಳ ವ್ಯಕ್ತಿತ್ವ

ರಾಗಿ ಕಲ್ಲಿನ ಮೇಲೆ ಚೆಲ್ಲಿದೆ ನಮ್ಮ ಹಾಡು
ಬಲ್ಲಂತ ಜಾಣರು ಬರಕೊಳ್ಳಿ! ನಮ್ಮ ಹಾಡ
ಬಳ್ಳ ತಕ್ಕೊಂಡು ಅಳಕೊಳ್ಳಿ.

ಎದೆಯ ಹಾಡಿನ ಬಗ್ಗೆ ಜಾನಪದದ ನುಡಿಮುತ್ತಿದು. ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾದ ಕರೀಂಖಾನ್‌ರವರದ್ದು ಸಹ ಈ ಹಾಡಿನಂತಹದೇ ವ್ಯಕ್ತಿತ್ವ. ಬರಹಕ್ಕೆ ಸಿಗಲಾರದ್ದು, ಬಳ್ಳದ ಅಳತೆಗೆ ಒಗ್ಗಲಾರದ್ದು.

ಚಲನಚಿತ್ರ, ಕ್ರೀಡೆ, ಸಾಹಿತ್ಯದಲ್ಲೆಲ್ಲಾ ಕೈಯಾಡಿರುವ ಕರೀಂಖಾನ್‌ರವರದ್ದು ಅಪ್ಪಟ ಜಾನಪದ ಸೊಗಡಿನ ವ್ಯಕ್ತಿತ್ವ. ಜಾನಪದ ಜನಪ್ರಿಯವಾಗದಿದ್ದಾಗಲೇ ನಾಲ್ಕು ಆಣೆಗೆ ಜಾನಪದ ಗೀತೆಗಳ ಸಂಗ್ರಹ ಅಚ್ಚು ಹಾಕಿ ಮಾರಲು ಮನೆ ಮನೆ ತಿರುಗಿದ್ದಾರೆ. ಕುವೆಂಪುರವರ ಮಾತಿನಲ್ಲಿಯೇ ಹೇಳುವುದಾದರೆ ಇವರದ್ದು ಅಪ್ರತಿಮ ವಾಕ್‌ಶೈಲಿ. 1949ರಲ್ಲಿ ಅ.ನ.ಕೃ.ರವರು "ನನ್ನನ್ನು ನಾನೇ ಕಂಡೆ" ಪುಸ್ತಕದಲ್ಲಿ ಕರೀಂಖಾನ್‌ರವರ ಜಾನಪದ ಸೇವೆ, ಮಾತಿನ ಶೈಲಿಯನ್ನು ಮೆಚ್ಚಿ ಬರೆದಿದ್ದಾರೆ.

ಸ್ವಾತಂತ್ರ್ಯ ಹೋರಾಟದ ಹಲವು ಹಂತಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ ಇವರು ಸುಮಾರು ಸಲ ಬಂದೀಖಾನೆಗೆ ಹೋಗಿದ್ದಾರೆ. 'ರಾಜಕೀಯ ನನಗೆ ಬೇಡ' ಎಂದು ಹೇಳಿ ನಂತರ ಸಂಪೂರ್ಣವಾಗಿ ಚಲನಚಿತ್ರ ಕ್ಷೇತ್ರದಲ್ಲಿ ಇನ್ನಿಲ್ಲದಂತೆ ದುಡಿದಿದ್ದಾರೆ. ಹಾಡು, ಕಥೆ, ಸಂಭಾಷಣೆ, ಎಲ್ಲದರಲ್ಲೂ ಕರೀಂಖಾನ್‌ರವರದ್ದು ಎತ್ತಿದ ಕೈ. ನಂತರ ಕ್ರಮೇಣ ಚಲನಚಿತ್ರರಂಗದಿಂದ ತಾವೇ ಹಿಂದಾದರು. ಚಲನಚಿತ್ರ ಕ್ಷೇತ್ರದ ರಾಜಕೀಯ ಅವರನ್ನು ಹಿಂದೆಗೆಯುವಂತೆ ಮಾಡಿತು. ಜಾನಪದದಲ್ಲಿ ತಮ್ಮನ್ನು ಮತ್ತೆ ಕಂಡುಕೊಂಡ ಕರೀಂಖಾನ್ ಈಗ ಅಕಾಡೆಮಿಯ ಅಧ್ಯಕ್ಷಗಿರಿ ವಹಿಸಿಕೊಂಡಿದ್ದಾರೆ.

ಜಾನಪದ ಮತ್ತು ಯಕ್ಷಗಾನ ಅಕಾಡೆಮಿಗೆ ಇದರಿಂದ ಗರಿ ಬಂದಂತಾಗಿದೆ. ಕರೀಂಖಾನ್‌ರವರದ್ದು ಸುಮ್ಮನೆ ಕೂರುವ ಜೀವವಲ್ಲ. ಹೀಗಾಗಿಯೇ ತಮ್ಮ ಚಲನಚಿತ್ರದ ಅನುಭವಗಳನ್ನು ಉಪಯೋಗಿಸಿ ಗಿರಿಜನರ ಜೀವನ ಚಿತ್ರಣದ ಹೊಸ ಯೋಜನೆಗೆ ಹೆಜ್ಜೆಯಿಟ್ಟಿದ್ದಾರೆ.

'ಹಳ್ಳಿಯಲ್ಲಿ ಜಾನಪದ ವಾತಾವರಣ ಮಾಯವಾಗುತ್ತಿದೆ. ಜಾನಪದ ವಲಸೆ ಹೋಗುತ್ತಿದೆ. ನಗರದ ಕ್ಯಾಸೆಟ್ ಸಂಸ್ಕೃತಿ ಹಳ್ಳಿಯ ಜಾನಪದವನ್ನು ತಿಂದು ಹಾಕುತ್ತಿದೆ. ಈ ಕುಣಿತ, ಹಾಡುಗಳು ಹಾಳಾಗುವ ಮುಂಚೆಯೇ ಅದನ್ನು ಹೆಕ್ಕಬೇಕು' ಎನ್ನುವ ಕರೀಂಖಾನ್‌ರವರು ಜಾನಪದ ಕಲೆಗಳಿಗೆ ಉತ್ತೇಜನ, ಜಾನಪದವನ್ನು ಮರೆಯುತ್ತಿರುವವರಿಗೆ ಶಿಕ್ಷಣ, ಜಾನಪದ ಕಲೆಗಾರರಿಗೆ ವಸ್ತ್ರಾಭರಣ, ನಗರದ ಆಸಕ್ತ ಸಂಶೋಧಕರಿಗೆ ಜಾನಪದ ಕ್ಷೇತ್ರ ಕಾರ್ಯದಲ್ಲಿ ತರಬೇತಿಯ ಕಾಯ ಕ್ರಮಗಳನ್ನು ಹಮ್ಮಿಕೊಂಡಿದ್ದಾರೆ. ಸಧ್ಯದಲ್ಲಿಯೇ ಅಂಕೋಲ, ಅಥಣಿಯಲ್ಲಿ ಜಾನಪದ ಕಲಾಮೇಳಗಳನ್ನು ವ್ಯವಸ್ಥೆ ಮಾಡಲಾಗಿದೆ.

ಈ ಎಲ್ಲದರ ಹಿಂದೆ ಕರೀಂ ಖಾನ್‌ರವರ ಕ್ರಿಯಾಶೀಲತೆಯಿದೆ. ಕರೀಂಖಾನ್‌ರವರ ಜೋಳಿಗೆಯಲ್ಲಿ ಹಲವಾರು ಕನಸುಗಳಿವೆ, ಜಾನಪದ ಹಾಡುಗಳಿವೆ. ಬದುಕಿನ ಪ್ರತಿಭಾವಗಳಿಗೆ ತಮ್ಮ ಜಾನಪದ ಜೋಳಿಗೆಯಿಂದ ಹಾಡುಗಳನ್ನು ಹೆಕ್ಕಿ ಕೊಡುತ್ತಾರೆ.

ಹಸಿರಿನ ಮಡಿಲಲ್ಲಿ ತೊಗಲು ಗೊಂಬೆ ಮೇಳ

ಹಿ. ಚಿ. ಬೋರಲಿಂಗಯ್ಯ

ಗೊಂಬೆರಾಮರು ಊರೂರಿನ ಸಂಚಾರಿ ರಾಯಭಾರಿಗಳು. ಹಳ್ಳಿಯಲ್ಲಿ ಹಬ್ಬದ ವಾತಾವರಣ ಮೂಡಿಸಿ, ಪರದೆಯ ಮೇಲೆ ಅದ್ಭುತ ಲೋಕ ಸೃಷ್ಟಿಸುತ್ತಿದ್ದ ಇಂಥ ಕುಟುಂಬಗಳು ಈಗ ಎಷ್ಟಿವೆ? ಇದ್ದರೂ ಪ್ರೋತ್ಸಾಹವಿದೆಯೆ? ಈ ಎಲ್ಲಾ ಸಮಸ್ಯೆಗಳತ್ತ ಕಣ್ಣೋಟ ಹರಿಸಲೆಂದು ನಳನಳಿಸುವ ಹಸಿರಿನ ಮಡಿಲಲ್ಲಿ ತೊಗಲುಗೊಂಬೆ ಮೇಳ ಕಮ್ಮಟವನ್ನು ಏರ್ಪಡಿಸಲಾಗಿತ್ತು.



ಗೊಂಬೆರಾಮ ಊರಿಗೆ ಬಂದ ಎಂದರೆ ಸಾಕು ಹಿಂದೆ ಹಳ್ಳಿಯಲ್ಲಿ ಹಬ್ಬದ ವಾತಾವರಣ ಮೂಡುತ್ತಿತ್ತು. ಊರ ಚಾವಡಿಯ ಪಡಸಾಲೆಯಲ್ಲಿ ಪರದೆ ಕಟ್ಟಿ, ಪರದೆಯ ಮೇಲೆ ಅದ್ಭುತ ಲೋಕವನ್ನೇ ಸೃಷ್ಟಿ ಮಾಡಿ, ಮಂತ್ರಮುಗ್ಧರನ್ನಾಗಿಸುತ್ತಿದ್ದ ಆ ಗೊಂಬೆ ರಾಮರು ಊರ ಬಾಗಿಲಿಗೆ ಬಂದರೆಂದರೆ ಊರಿಗೆ ಊರೇ ಸುದ್ದಿಯಾಗುತ್ತಿತ್ತು. ಕಟ್ಟುಮಸ್ತಾದ ಹೋರಿಯ ಮೇಲೆ ಗಂಟುಮೂಟೆ ಇಟ್ಟುಕೊಂಡು, ಮಕ್ಕಳು–ಮರಿಗಳನ್ನು ಕಂಕುಳಲ್ಲಿ ಅವುಚಿಕೊಂಡು ಗೊಂಬೆರಾಮರ ಇಡೀ ಕುಟುಂಬವೇ ಆ ಹೋರಿಯ ಜೊತೆ ಊರು ಪ್ರವೇಶಿಸುತ್ತಿತ್ತು. ಗೊಂಬೆರಾಮ ಹೊತ್ತು ತರುತ್ತಿದ್ದ ಗಂಟುಮೂಟೆಗಳು ಸೀತಾ ಸ್ವಯಂವರದಿಂದ – ರಾವಣನ ವಧೆವರೆಗೆ, ಶಂತನು ಮಹಾರಾಜನಿಂದ ಕುರುಕ್ಷೇತ್ರದವರೆಗೆ ನೂರಾರು ಕಥೆಗಳ ಕೌತುಕಗಳನ್ನು ಬಿಚ್ಚುತ್ತಿದ್ದವು.

ಊರ ಚೌಪಡಿಗೋ, ಇಲ್ಲ ವಿಶಾಲ ಪಡಸಾಲೆಯಿರುವ ಯಾವುದಾದರೂ ಮನೆಗೆ ಬಂದು ಸಮಾಲೋಚಿಸಿ, ಕಥೆಗೆ ಅಣಿಯಾಗುತ್ತಿದ್ದರು. ಊರವರೆಲ್ಲ ಸೇರಿ ಕೊಡುವ ದವಸ–ಧಾನ್ಯ, ಬಟ್ಟೆ–ಬರೆಗಳಿಗೆ ರಾತ್ರಿಯಿಡೀ ಕಥೆ ಮಾಡಿ ಮರುದಿನ ಇನ್ನೊಂದೂರ ದಾರಿ ಹಿಡಿಯುತ್ತಿದ್ದರು. ಯಾವುದೇ ಕಥೆ ಆಡಿಸಿದರೂ ಊರಿನವರು ಒಂದು ಪಂಚೆಯನ್ನು ಅವರಿಗೆ ದಾನವಾಗಿ ಕೊಡಬೇಕಾಗುತ್ತಿತ್ತು. ಆ ಪಂಚೆಯನ್ನೇ ಪರದೆ ಮಾಡಿ ಹರಳೆಣ್ಣೆಯ ದೊಡ್ಡ ದೀಪಗಳ ಬೆಳಕಿನಲ್ಲಿ ಗೊಂಬೆಗೆ ಬಣ್ಣ ತುಂಬುತ್ತಿದ್ದರು. ವಿವಿಧಾಕಾರದ ಗೊಂಬೆಗಳನ್ನು ಹಿಡಿದು ಆಡಿಸುತ್ತಿದ್ದ ಅವರ ಕೈಚಳಕದಿಂದ ಗೊಂಬೆಗೆ ಜೀವ ಬರುತ್ತಿತ್ತು. ಜೀವ ತುಂಬಿಕೊಂಡು ಗೊಂಬೆ ಯಕ್ಷಗಾನದ ಮಟ್ಟುಗಳಿಗನುಸಾರವಾಗಿ ಹೆಜ್ಜೆ ಹಾಕತೊಡಗಿತೆಂದರೆ ಆ ಬಣ್ಣಕ್ಕೂ, ಕುಣಿಯುವ ಪರಿಗೂ, ಸಂಭಾಷಣೆಯ ಮೋಡಿಗೂ ತಲೆದೂಗದಿದ್ದವರೇ ಇಲ್ಲ.

ಸಾಮಾನ್ಯವಾಗಿ ಗೊಂಬೆರಾಮರ ಇಡೀ ಕುಟುಂಬ ಈ ರೀತಿಯ ಅಲೆದಾಟದಲ್ಲೇ ಬದುಕು ಸಾಗಿಸುತ್ತಿತ್ತು. ಅಪ್ಪ ಅವ್ವನಾದಿಯಾಗಿ ಮಕ್ಕಳು, ಸೊಸೆಯಂದಿರು ಮೊಮ್ಮಕ್ಕಳತನಕ ಒಂದು ತಂಡದಲ್ಲಿ 15–20 ಜನರಿರುತ್ತಿದ್ದರು. ದಿನಕ್ಕೊಂದು ಊರು. ಮಲಗಿದ್ದಲ್ಲೇ ಸೂರು. ವಾಸ್ತವವಾಗಿ ಇವರು ಊರೂರಿನ ಸಂಚಾರಿ ರಾಯಭಾರಿಗಳಾಗಿರುತ್ತಿದ್ದರು. ಕಲೆಯೇ ಇವರ ಜೀವನವಾಗಿತ್ತಾದ್ದರಿಂದ ಹುಟ್ಟುತ್ತಿದ್ದಂತೆಯೇ ಪಾತ್ರಗಳು, ಸಂಭಾಷಣೆಗಳು, ಹಾಡುಗಳು ಇವರ ಭಾಗವಾಗುತ್ತಿದ್ದವು. ಕಲಾವಿದರಾದುದರಿಂದಲೇ ಇವರಲ್ಲಿ ಎಲ್ಲರೂ ಹೆಚ್ಚು ಕಡಿಮೆ ಪ್ರತಿಭಾವಂತರು; ಪುರಾಣ ಪಾರಂಗತರು. ವಾದ್ಯದಲ್ಲಾಗಲಿ, ರಾಗ ಧಾಟಿಗಳಲ್ಲಾಗಲಿ, ಕಂಠ ಜ್ಞಾನದಲ್ಲಾಗಲಿ, ಇವರಿಗೆ ಸರಿಮಿಗಿಲಾದವರಿರಲಿಲ್ಲ. ಗೊಂಬೆರಾಮರ ಕುಟುಂಬದ ಒಬ್ಬ ಹೆಣ್ಣು ಮಗಳು ಹೆಚ್ಚು ಕಡಿಮೆ ರಾಮಾಯಣ – ಮಹಾಭಾರತದ ಯಾವುದೇ ಹೆಣ್ಣು ಪಾತ್ರದ ಸಂಭಾಷಣೆ, ಹಾಡುಗಳನ್ನು ನಿರರ್ಗಳವಾಗಿ ಹಾಡಿತೋರಿಸಬಲ್ಲ ಚತುರಳಾಗಿರುತ್ತಿದ್ದಳು.

ಜಾನಪದದ ವಿಶಿಷ್ಟ ತೊಗಲು ಗೊಂಬೆಯಾಟ ಈಗ ನಶಿಸುವ ಹಂತದಲ್ಲಿದೆ. ಇದಕ್ಕೆ ಕಾರಣಗಳೇನು? ಈ ಕಲೆಗೆ ಹಳೆಯ ವೈಭವವನ್ನು ದಕ್ಕಿಸಿಕೊಡುವ ಸಾಧ್ಯತೆ ಇದೆಯೆ?

ಈಗಿನ ಕತೆ

ಇಂಥ ಗೊಂಬೆರಾಮರ ಕುಟುಂಬಗಳು ಈಗ ಎಷ್ಟಿವೆ? ಇದ್ದರೂ ಪ್ರೋತ್ಸಾಹವಿದೆಯೆ? ಕಲೆಯನ್ನೇ ವೃತ್ತಿಯನ್ನಾಗಿಸಿಕೊಂಡು ಹೊಟ್ಟೆ ಹೊರೆಯುತ್ತಿದ್ದ ಇವರ ಬಾಳು ಇಂದೇನಾಗಿದೆ? ಇತ್ಯಾದಿ ಪ್ರಶ್ನೆಗಳಿಗೆ ಬಹುಶಃ ಇಂದು ಉತ್ತರ ಹೇಳುವುದು ಬಹಳ ಕಷ್ಟ. ಬದಲಾಗುತ್ತಿರುವ ಈ ಸಮಾಜ ವ್ಯವಸ್ಥೆಯಲ್ಲಿ ಬಹುತೇಕ ನಮ್ಮ ಎಲ್ಲ ಜಾನಪದ ವೃತ್ತಿ ಕಲಾವಿದರ ಕಥೆಯೂ ಕಣ್ಣೀರಿನದ್ದೇ. ಹಿಂದೆಯಾದರೆ, ಮಳೆ ಬರಲಿಲ್ಲವೆಂದಾದರೆ ಆ ಊರಿಗೆ ಗೊಂಬೆರಾಮರು ಬಂದು ಕಥೆ ಮಾಡಿದರೆಂದರೆ ಮಳೆ ಬಂದೇ ತೀರುತ್ತದೆಂಬ ನಂಬಿಕೆಯಿತ್ತು. ಜನನದಲ್ಲಿ, ತಿಥಿಯಲ್ಲಿ, ಹಬ್ಬ–ಹರಿದಿನಗಳಲ್ಲಿ ಗೊಂಬೆರಾಮರಿಗೆ ಬಿಡುವೇ ಇರುತ್ತಿರಲಿಲಲ್ಲ ಆದರೆ ಈಗ?

ಈ ಎಲ್ಲಾ ಸಮಸ್ಯೆಗಳತ್ತ ಕಣ್ನೋಟ ಹರಿಸಬೇಕೆಂದು ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿ, ಕುವೆಂಪು ವಿಶ್ವವಿದ್ಯಾಲಯದ ಸಹ ಭಾಗಿತ್ವದೊಂದಿಗೆ ಭದ್ರಾ ಪ್ರಾಜೆಕ್ಟಿನ ನಳನಳಿಸುವ ಹಸಿರಿನ ಮಡಿಲಲ್ಲಿ ಐದು ದಿನಗಳ ಕಾಲ ತೊಗಲುಬೊಂಬೆ ಮೇಳ ಕಮ್ಮಟವನ್ನು ಏರ್ಪಡಿಸಿತ್ತು.

ಈ ಕಮ್ಮಟದ ವಿಶೇಷವೆಂದರೆ ಕರ್ನಾಟಕದ ವಿವಿಧ ಪ್ರಾದೇಶಿಕ ವೈಶಿಷ್ಟ್ಯಗಳನ್ನೊಳಗೊಂಡ ಗೊಂಬೆಯಾಟದ ತಂಡಗಳು ಭಾಗವಹಿಸಿದ್ದುದು. ಅಷ್ಟೇ ಅಲ್ಲ,

ಪ್ರಸ್ತುತ ಕರ್ನಾಟಕದಲ್ಲಿ ಪ್ರಚಲಿತವಿರುವ ಬಹುತೇಕ ತೊಗಲು ಬೊಂಬೆಯಾಟದ ಪ್ರಮುಖ ಕಲಾಕಾರರು ಪಾಲ್ಗೊಂಡಿದ್ದು, ಜೊತೆಗೆ ಎಸ್.ಕೆ. ಕರೀಂಖಾನ್, ಜೀ.ಶಂ.ಪ., ಮುದೇನೂರು ಸಂಗಣ್ಣ ಮುಂತಾದ ಹಿರಿಯರು ಅಷ್ಟು ದಿನವೂ ಕಲಾವಿದರ ಜೊತೆಗೇ ಇದ್ದು, ಗೊಂಬೆಯಾಟದ ಸಾಧಕ–ಬಾಧಕಗಳ ಬಗ್ಗೆ ಚರ್ಚೆ ನಡೆಸಿದ್ದು ಈ ಕಮ್ಮಟಕ್ಕೆ ಅರ್ಥ ತಂದುಕೊಟ್ಟಿತು. ಈ ತೊಗಲುಬೊಂಬೆ ಕಲಾವಿದರು ಮೂಲತಃ ಮಹಾರಾಷ್ಟ್ರದವರು. ಈಗಲೂ ಇವರ ಮನೆ ಮಾತು ಮರಾಠಿ. ಇವರು ಕರ್ನಾಟಕ, ಆಂಧ್ರಗಳಿಗೆ ನೂರಾರು ವರ್ಷಗಳ ಹಿಂದೆಯೇ ವಲಸೆ ಬಂದರಾದರೂ ಇಂದಿಗೂ ಅವರ ಭಾಷೆಯನ್ನು ಉಳಿಸಿಕೊಂಡಿರುವುದು ಆಶ್ಚರ್ಯ. ಆದರೂ ಕನ್ನಡ ಭಾಷೆಯಲ್ಲಿನ ಇವರ ಜ್ಞಾನ ಯಾವ ಹುಟ್ಟು ಕನ್ನಡಿಗನಿಗಿಂತ ಕಡಿಮೆಯಿಲ್ಲ ಎಂಬುದೂ ಅಷ್ಟೇ ಮುಖ್ಯವಾದ ವಿಚಾರ.

ಕರ್ನಾಟಕದಲ್ಲಿನ ತೊಗಲು ಬೊಂಬೆ ಕಲಾವಿದರಲ್ಲಿ ಮೇಲ್ನೋಟಕ್ಕೆ ಮೂರು ನಾಲ್ಕು ವಿಧಗಳು ಕಾಣಸಿಗುತ್ತವೆ. ವಿಜಾಪುರ ಮತ್ತು ಗುಲ್ಬರ್ಗ ಜಿಲ್ಲೆಗಳಲ್ಲಿನ 'ಕಟಬರಾಟ'. ಬಳ್ಳಾರಿ, ಧಾರವಾಡ ಮುಂತಾದ ಜಿಲ್ಲೆಗಳಲ್ಲಿನ 'ಕಿಳ್ಳೇ ಕ್ಯಾತರಾಟ', ಹಳೇ ಮೈಸೂರು ಭಾಗದ 'ಗೊಂಬೆ ರಾಮರಾಟ' ಮತ್ತು ಆಂಧ್ರ ಗಡಿಯುದ್ದಕ್ಕೆ ಕೋಲಾರ, ಬಳ್ಳಾರಿ ಮುಂತಾದ ಕಡೆ ಕಂಡುಬರುವ 'ತೋಲು ಬೊಮ್ಮಲಾಟ' ಉತ್ತರ ಕರ್ನಾಟಕದ ಕಟಬರಾಟ ಮತ್ತು ಕಿಳ್ಳೇ ಕ್ಯಾತರಾಟಗಳ ವೈಶಿಷ್ಟ್ಯವೇ ಬೇರೆ. ಅವರ ಗೊಂಬೆಗಳು ಚಿತ್ರಕಲೆಯ ದೃಷ್ಟಿಯಿಂದ ತುಂಬ ಅಪರೂಪದ ಕಲಾಕೃತಿಗಳೆಂದೇ ಹೇಳಬಹುದು. ಬಹುಶಃ ಒಂದೂವರೆ ಅಡಿಯ ಈ ಗೊಂಬೆಗಳಿಗೆ ಪ್ರತ್ಯೇಕವಾದ ಕೈಕಾಲಿನ ಚಲನೆಯಿಲ್ಲ. ಇಡೀ ಗೊಂಬೆಗೇ ಚಾಲನೆ ಕೊಡಲಾಗುತ್ತದೆ. ಈ ಗೊಂಬೆಯಾಟದ ಮತ್ತೊಂದು ಪ್ರಾಚೀನ ಅಂಶವೆಂದರೆ ಪರದೆಯ ಹಿಂದೆ ಕೂರುವ ಒಬ್ಬ ಕಾಲವಿದ ಕಥೆಯ ಸನ್ನಿವೇಶಕ್ಕನುಗುಣವಾಗಿ ಗೊಂಬೆಗಳಿಗೆ ಚಾಲನೆ ನೀಡುತ್ತಾನೆ. ಪರದೆಯ ಮುಂದೆ ಕುಳಿತ ಮತ್ತೊಬ್ಬ ಆ ಗೊಂಬೆಯ ಚಲನೆಯನ್ನು ನೋಡುತ್ತಾ ಸಂಭಾಷಿಸುತ್ತಾನೆ. ಕೆಲವೊಮ್ಮೆ ಪ್ರೇಕ್ಷಕರಿಗೆ ಗೊಂಬೆಗಳನ್ನು ತೋರಿಸುತ್ತಾ ಕಥೆಯನ್ನು ಹೇಳುತ್ತಾನೆ. ಪ್ರಮುಖ ಕಲಾವಿದ ಹಾಡುವಾಗ ಮಹಿಳೆಯರು ಹಿಮ್ಮೇಳದಲ್ಲಿ ಹಾಡುತ್ತಾರೆ.

ದಕ್ಷಿಣ ಕರ್ನಾಟಕದ ಗೊಂಬೆ ರಾಮರು ನಾಟಕದ ಅನೇಕ ಅಂಶಗಳನ್ನು ಸ್ವೀಕರಿಸಿರುವುದು ಸ್ಪಷ್ಟ. ಇವರ ಗೊಂಬೆಗಳು ಕಟಬರಾಟದವರಷ್ಟು ಪ್ರಾಚೀನವಲ್ಲ. ಆದರೆ ಅಷ್ಟು ಚಿಕ್ಕವೂ ಅಲ್ಲದ ಇವರ ಗೊಂಬೆಯ ಕೈಕಾಲುಗಳಿಗೆ ಪ್ರತ್ಯೇಕ ಚಾಲನೆಯಿದೆ. ಕಲಾವಿದರು ಯಕ್ಷಗಾನದ ಮಟ್ಟುಗಳನ್ನು ಹಾಡುತ್ತಾ ಅಥವಾ ನಾಟಕದ ಹಾಡನ್ನು ಹಾಡುತ್ತಾ ಆಯಾ ಸನ್ನಿವೇಶಕ್ಕೆ ತಕ್ಕಂತೆ ಕುಣಿಸುತ್ತಾರೆ. ನಿಜವಾದ ವ್ಯಕ್ತಿಗಳದೇ ಪಾತ್ರ ಇದ್ದಂತೆ ಭಾಸವಾಗುತ್ತದೆ. ಯುದ್ಧ ಸನ್ನಿವೇಶಗಳಲ್ಲೂ ಮೈನವಿರೇಳಿಸುವಂತೆ ಗೊಂಬೆಗಳನ್ನು ಕುಣಿಸುತ್ತಾರೆ. ಬಾಣಗಳ ಮೂಲಕ ರುಂಡ–ಮುಂಡಗಳನ್ನು ಚಂಡಾಡುತ್ತಾ ನಿಜವಾದ ನಾಟಕದಲ್ಲಿ ಉಂಟು ಮಾಡಲು ಅಸಾಧ್ಯವಾದ ಸನ್ನಿವೇಶಗಳನ್ನು ಇಲ್ಲಿ ತುಂಬಾ ರಸವತ್ತಾಗಿ ನಿರ್ಮಾಣ ಮಾಡುತ್ತಾರೆ. ಈ ರೀತಿಯಲ್ಲಿ ಜೀವ ತುಂಬಲು ಕಟಬರಾಟ ಅಥವಾ ಕಿಳ್ಳೇಕ್ಯಾತರ ಗೊಂಬೆಗಳಿಗೆ ಸಾಧ್ಯವಿರುವುದಿಲ್ಲ. ಈ ಕಲಾವಿದರ ಮತ್ತೊಂದು ವಿಶೇಷವೆಂದರೆ ಎಲ್ಲರೂ ಪರದೆಯ ಹಿಂದೆಯೇ ಇರುತ್ತಾರಲ್ಲದೆ ಅಪ್ಪಿತಪ್ಪಿಯೂ ಹೊರಗೆ ಕಾಣಿಸಿಕೊಳ್ಳುವುದಿಲ್ಲ.

ಇನ್ನು ಕೋಲಾರದ ಬೊಮ್ಮಲಾಟ ಇವೆರಡಕ್ಕಿಂತಲೂ ವಿಶೇಷ. ಇವರ ಗೊಂಬೆಗಳು ಆಳೆತ್ತರದ ಸಪೂರ ಗೊಂಬೆಗಳು. ಕೋರೈಸುವ ಬಣ್ಣ, ದೊಡ್ಡ ಪರದೆಯ

ಹಸಿರಿನ ಮಡಿಲಲ್ಲಿ ತೊಗಲುಗೊಂಬೆ ಮೇಳ

ಹಿಂದೆ ಕಲಾವಿದರು ನಿಂತೇ ಆಟ ತೋರಿಸಬೇಕು. ಪರದೆಯ ಹಿಂದೆ ನಿಂತು ಇವರು ಗೊಂಬೆಗಳನ್ನು ಆಣಿ ಮಾಡಿ ಕೊಳ್ಳುತ್ತಿದ್ದಾಗ ಪರದೆ ತುಂಬಾ ತೆಳು ಪಂಚೆಯೊಳಗೆ ಕಲಾವಿದರು ಕಾಣುತ್ತಿದ್ದರು. ಗೊಂಬೆಗಳ ಜೊತೆ ಇವರೂ ಮಿಶ್ರವಾಗಿ ರಸಭಂಗವಾಗುತ್ತದೆಂಬುದು ನಮ್ಮ ಭಯ. ಆದರೆ ಆಟ ಪ್ರಾರಂಭವಾಯ್ತು. ಹಿಮ್ಮೇಳದವರು ಕೆಳಗೆ ಕೂತರು. ಗೊಂಬೆ ಆಡಿಸುವವರು ಸಪೂರ ಗೊಂಬೆಯ ಹಿಂದೆಯೇ ನಿಂತು ತಮ್ಮ ಶರೀರದ ಲವಲೇಶವೂ ಕಾಣಿಸದಂತೆ ಗೊಂಬೆಗಳ ಜೊತೆಯೇ ಕುಣಿಯತೊಡಗಿದರು. ಹೆಂಗಸರು ಗಂಡಸರಾದಿಯಾಗಿ ಕುಣಿಯುತ್ತಿದ್ದರು. ಕಾಲುಗಳಿಗೆ ಗೆಜ್ಜೆಯನ್ನು ಕಟ್ಟಿಕೊಂಡಿದ್ದರಿಂದ ಗೊಂಬೆಗಳು ನಿಜವಾಗಿಯೂ ಜೀವಂತ ಪಾತ್ರಗಳಾಗಿ ನರ್ತಿಸತೊಡಗಿದವು. ಗೊಂಬೆಗಳ ವಿನ್ಯಾಸ ಹಾಗೂ ಅವು ಕುಣಿಯುವ ಮೋಡಿಯ ಜೊತೆಗೆ ಗಿಡ, ಮರ, ಹೂ, ಪಕ್ಷಿ ಮುಂತಾದ ನಿಸರ್ಗ ಸಹಜ ಗೊಂಬೆಗಳನ್ನೂ ಔಚಿತ್ಯಪೂರ್ಣವಾಗಿ ತರುವುದರ ಮೂಲಕ ಅವರಿಗಿದ್ದ ಅಸಾಮಾನ್ಯ ಪರಿಸರ ಪ್ರೀತಿಯನ್ನು ಈ ಕಲಾವಿದರು ಪ್ರದರ್ಶಿಸಿದರು.

ಈ ಕಮ್ಮಟದಲ್ಲಿ ಈ ಎಲ್ಲ ವಿಷಯಗಳ ಜೊತೆಗೆ ತೀವ್ರವಾಗಿ ಜಿಜ್ಞಾಸೆಗೆ ಒಳಗಾದ ಮತ್ತೊಂದು ವಿಚಾರವೆಂದರೆ ಈ ಬದಲಾಗುತ್ತಿರುವ ಸಮಾಜದಲ್ಲಿ ಈ ಕಲೆಯನ್ನೂ ಉಳಿಸಿಕೊಳ್ಳುವ ಬಗೆ, ಸಾಮಾಜಿಕ ಪ್ರಸಂಗಗಳನ್ನು ಸಮಕಾಲೀನ ಘಟನೆಗಳನ್ನು ಹಾಗೂ ವೈಜ್ಞಾನಿಕ ವಿಚಾರಧಾರೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಹೊಸ ರೂಪ ಕೊಡಬೇಕೆ? ಜಪಾನ್, ರಷ್ಯಾ ಮುಂತಾದ ದೇಶಗಳು ಗೊಂಬೆಯಾಟದಲ್ಲಿ ಅಳವಡಿಸಿಕೊಳ್ಳುತ್ತಿರುವ ವಿಚಾರ ಮತ್ತು ಆಧುನಿಕ ರಂಗ ಪರಿಕರಗಳು ಹೇಗೆ ಅಲ್ಲಿನ ಆ ಕಲೆಯನ್ನು ಉನ್ನತ ಮಟ್ಟಕ್ಕೇರಿಸಿದೆ ಎಂಬುದರ ಬಗ್ಗೆಯೂ ಚರ್ಚಿಸಲಾಯಿತು. ●

ಭರವಸೆ ತಂದ ಸಮಾರಂಭ

ಬಿ. ವಿ. ಕೆ. ಶಾಸ್ತ್ರಿ

ಬಡತನವೇ ಜೀವನದ ಸಂಗಾತಿಯಾದ ಹಲವರಿಗೆ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ನೀಡಿದ್ದು ಗಮನಾರ್ಹ ಸಂಗತಿ. ಈ ಎಲ್ಲ ಕಲಾವಿದರೂ ತಮ್ಮ ಕಷ್ಟ-ಕಾರ್ಪಣ್ಯಗಳ ಮಧ್ಯೆಯೂ ತಮಗೆ ಪರಂಪರೆಯಿಂದ ಬಂದ ಕಲೆಯನ್ನು ಭದ್ರವಾಗಿ ಕಾಯ್ದುಕೊಂಡು ಬಂದಿದ್ದಾರೆ.

11, ಫೆಬ್ರವರಿ 1990

"ನಮ್ಮ ಶಾಸ್ತ್ರೀಯ ಕಲಾ ಪ್ರಕಾರಗಳ ಮೂಲ ಬೇರುಗಳು, ಜಾನಪದ ಕಲೆಗಳಲ್ಲಿ'' – ಇದು ಪ್ರಾಯಶಃ ಕಲಾಭಿಜ್ಞರೆಲ್ಲಾ ಹಾಡುವ ಪಲ್ಲವಿ. ಆದರೆ ತಲತಲಾಂತರದಿಂದ ಈ ಸಂಪ್ರದಾಯಗಳನ್ನು ಬೆಳೆಸಿಕೊಂಡು ಬಂದ ಜಾನಪದ ಕಲಾವಿದರ ಸ್ಥಿತಿ ಏನು? ಕಲಾಕ್ಷೇತ್ರದಲ್ಲಿ ಅವರ ಸ್ಥಾನ ಬಡಬಂಧುಗಳಂತೆ, ಕಲಾಕ್ಷೇತ್ರಕ್ಕೆ ದೊರಕುವ ಪ್ರೋತ್ಸಾಹಗಳಲ್ಲಿ ಅವರಿಗೆ ಎಷ್ಟು ಅಂಶ ತಲುಪುವುದೋ ತಿಳಿಯದು. ಆದರೆ ಸ್ವಾತಂತ್ರ್ಯ ನಂತರ ನಮ್ಮ ಜಾನಪದ ಕಲೆಗಳ ಬಗೆಗೆ ಪ್ರಶಂಸೆ ಮಾಡುವ ಮಾತುಗಳ ಮಳೆಗೇನೂ ಕೊರತೆ ಇಲ್ಲ. ದೇಶ–ವಿದೇಶಗಳಲ್ಲಿ ನಡೆದ ಕಲಾ ಮಹೋತ್ಸವಗಳಿಗೆ ಇವರನ್ನು ಹಿಂಡು ಹಿಂಡಾಗಿ ಕರೆದೊಯ್ಯಲಾಗುತ್ತಿದೆ. ಅಲ್ಲಿ ಬಂದ ಪ್ರಶಂಸೆಗಳಲ್ಲಿ ಬಹುಪಾಲು ಪ್ರಾಯಶಃ ಕರೆದುಕೊಂಡು ಹೋದ ಮೇಸ್ತ್ರಿಗಳಂತಿದ್ದ ಮುಖಂಡರಿಗೆ ದಕ್ಕುತ್ತವೆ. ಕಲೆಗಳನ್ನು ಬೆಳೆಸಿಕೊಂಡು ಬಂದವರಿಗೆ ಇದರಿಂದ ಎಷ್ಟು ಪ್ರಯೋಜನವಾಗಿದೆಯೋ, ಅವರ ಆರ್ಥಿಕ ಸ್ಥಿತಿ ಏನಾಗಿದೆಯೋ, ತಮ್ಮ ಸಂಪ್ರದಾಯದ ಬಗೆಗೆ ಏನು ಭರವಸೆ, ಹೆಮ್ಮೆಗಳು ಮೂಡಿವೆಯೋ ತಿಳಿಯದು.

ಈ ಹಿನ್ನೆಲೆಯಲ್ಲಿ ಈಚೆಗೆ ನಡೆದ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡಮಿಯ ವಾರ್ಷಿಕ ಪ್ರಶಸ್ತಿ ಸಾಮಾರಂಭವನ್ನು ಪ್ರಶಂಸಿಸಬೇಕಾಗಿದೆ. ಅಧ್ಯಕ್ಷ ಕರೀಂಖಾನರೇ ಹೇಳುವಂತೆ – ತಮ್ಮ ಆಸೆಯಷ್ಟು ಸಾಧಿಸಲಾಗಿಲ್ಲ. ಆದರೆ ಮಾಡಿದಷ್ಟನ್ನು ಅಳಿಲ ಸೇವೆಯ ರೀತಿ ನೋಡಬೇಕಾಗಿದೆ. ಮಾಡಿದುದು ಸ್ವಲ್ಪವೆಂದುಕೊಂಡರೂ ಜಾನಪದ ಕ್ಷೇತ್ರದಲ್ಲಿ ಒಂದು ಭರವಸೆ ಮೂಡಲು ಕಾರಣವೂ ಆಗಿದೆ ಎನ್ನಬಹುದು. ಈ ಹತ್ತು ವರುಷದಲ್ಲಿ ಇನ್ನೂರಕ್ಕೂ ಹೆಚ್ಚು ಜಾನಪದ ಕಲಾವಿದರನ್ನು ಗುರ್ತಿಸಿ ಪ್ರಶಸ್ತಿ ಇತ್ತು ಗೌರವಿಸಿದೆ. ಅನೇಕರಿಗೆ ಮಾಸಾಶನ ದೊರೆಯಲು ಶ್ರಮಿಸಿದೆ. ಜಾಗೃತಿ ಮೂಡುವಂತಹ ಇನ್ನೂ ಅನೇಕ ಕಾರ್ಯಕ್ರಮಗಳನ್ನು ನಡೆಸಿದೆ. ಈ ವರುಷವೂ 23 ಹಿರಿಯರಿಗೆ ಪ್ರಶಸ್ತಿ ಇತ್ತು ಗೌರವಿಸಿದೆ. ಪ್ರಶಸ್ತಿ ಪಡೆದವರಲ್ಲಿ ಈ ಕ್ಷೇತ್ರದ ಮೇಲ್ಮೆಗೆ ಶ್ರಮಿಸಿದ ಡಾ. ಎಚ್.ಎಲ್. ನಾಗೇಗೌಡ ಮತ್ತು ಜ್ಯೋತಿಹೊಸೂರ್ ಅವರುಗಳನ್ನು ಬಿಟ್ಟು ಉಳಿದವರೆಲ್ಲಾ ವೃತ್ತಿ ಕಲಾವಿದರೇ. ಸಂಗೀತ, ನೃತ್ಯ, ನಾಟಕ ಮುಂತಾದ ಪ್ರಕಾರಗಳಿಗೆ ಸೇರಿದವರು. ಹತ್ತೊಂಬತ್ತು ಜಿಲ್ಲೆಗಳಿಂದ ಆರಿಸಲಾದವರು. ಬುಡಕಟ್ಟು ಜನಾಂಗ ಮತ್ತು ಗಿರಿಜನರೂ ಇದ್ದಾರೆ. ಸಂಗೀತ ಭಾಗದಲ್ಲಿ ತಂಬೂರಿ ಪದ ದೊಂಬಿದಾಸರ ಪದ, ಗುಮ್ಮಟೆಪಾಂಗು, ಪಾಡ್ದನ ಕರ್ಬಲ ಡಪ್ಪು, ಚೌಡಿಕೆ ಪದ, ಲಾವಣಿ, ಸಂಪ್ರದಾಯದ ಹಾಡು, ಕುಣಿತದಲ್ಲಿ ವೀರಗಾಸೆ, ಕರಗ, ನಾಟಕ ಪ್ರಕಾರದಲ್ಲಿ ಯಕ್ಷಗಾನ, ಗೊಂಬೆಯಾಟ ಮುಂತಾದವುಗಳ ಕಲಾವಿದರಿಗೆ ಪ್ರಶಸ್ತಿ ಕೊಡಲಾಯಿತು. ಇಲ್ಲಿ ಗಮನಾರ್ಹವಾದ ವಿಷಯವೆಂದರೆ ಇವರಲ್ಲಿ ಮುಕ್ಕಾಲು ಮಂದಿಗೆ ಬಡತನ ಜೀವನದ ಸಂಗಾತಿ. ತಂಬೂರಿ ಪದದ ಬಸಪ್ಪ ಹಾಡಿಕೊಂಡು ಊರೂರು ತಿರುಗಿ ಭಿಕ್ಷೆ ಮಾಡಿ ಬದುಕಬೇಕಾಗಿದೆ. ಸಂಪ್ರದಾಯದ ಹಾಡುಗಳ ಎಲಿಸವ್ವ, ದುರ್ಗಮ್ಮ ಬ್ಯಾಡರ ಮುಂತಾದವರಾಗಲೀ, ಪಾಡ್ದನ ಗಾಯಕಿ ಕರ್ಗಿಯದಾಗಲೀ ಇದಕ್ಕಿಂತ ಉತ್ತಮ ಸ್ಥಿತಿಯೇನಲ್ಲ. ಆದರೆ ಕಷ್ಟ ಕಾರ್ಪಣ್ಯಗಳ ಮಧ್ಯೆಯೂ ತಮಗೆ ಪರಂಪರೆಯಿಂದ ಬಂದ ಕಲೆಯನ್ನು ಭದ್ರವಾಗಿ ಕಾಯ್ದುಕೊಂಡು ಬಂದಿದ್ದಾರೆ.

ಪ್ರಶಸ್ತಿ ಪಡೆದ ಜಾನಪದ ಕಲಾವಿದೆಯರು

ತೇಜಸ್ವಿನಿ

1989ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದ 23 ಮಂದಿಯಲ್ಲಿ ಐದು ಹೆಣ್ಣು ಜೀವಗಳು. ಎಲೆಮರೆಯ ಕಾಯಂತೆ ಇತರರಿಗೆ ನೆರವಾಗುತ್ತಾ ತಮ್ಮಲ್ಲಿ ತಾವೇ ಕಳೆದುಹೋಗಿದ್ದ ನತದೃಷ್ಟೆಯರು ಈ ಕಲಾವಿದೆಯರು. ತುತ್ತುಗಂಜಿಗೆ ಪರದಾಡುತ್ತಾ ಕಣ್ಣೀರಲ್ಲಿ ಕೈತೊಳೆದು ಬದುಕು ಸಾಗಿಸಿದ ಇವರ ಇಳಿವಯಸ್ಸಿನಲ್ಲಿ ಸಂದ ಈ ಪ್ರಶಸ್ತಿಗಳು ತಮ್ಮ ಬದುಕಿನ ಕಠೋರ ಪುಟಗಳಲ್ಲಿ ನಲಿವಿನಿಂದ ದಾಖಲಾದ ಕ್ಷಣ.

1989ರ ಸಾಲಿನ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ ಪ್ರಶಸ್ತಿ ಪಡೆದ ಗೌರವಕ್ಕೆ 23 ಮಂದಿಯಲ್ಲಿ ಐದು ಮಂದಿ ಮುಗ್ಧ ಹೆಣ್ಣು ಜೀವಗಳು ಪಾತ್ರವಾಗಿವೆ; ಇವರೇ ಕೊರಗರ ವೆಂಕಟಮ್ಮ, ಲಕ್ಷ್ಮಿಬಾಯಿ ಮಾದರ, ಬೊಮ್ಮಳ ಎಲಿಸವ್ವ, ಹರಿಜನ ಕರ್ಗಿ, ದುರ್ಗಮ್ಮ ಬ್ಯಾಡರ.

ಎಲೆಮರೆಯ ಕಾಯಂತೆ ಇತರರಿಗೆ ನೆರವಾಗುತ್ತಾ, ತಮ್ಮಲ್ಲಿ ತಾವೇ ಕಳೆದು ಹೋಗಿದ್ದ ನತದೃಷ್ಟೆಯರು ಈ ಕಲಾವಿದೆಯರು. ನಾಗರಿಕ ಜಗತ್ತಿನ ಥಳುಕಿನ ಸುದ್ದಿ ಮಾಧ್ಯಮಗಳ ಪರಿಚಯವೇ ಇಲ್ಲದ, ಪ್ರೋತ್ಸಾಹವಿಲ್ಲದ, ತುತ್ತು ಗಂಜಿಗೆ ಪರದಾಡುತ್ತಾ ಕಣ್ಣೀರಲ್ಲಿ ಕೈತೊಳೆವುದೇ ಇವರ ಬದುಕು. ಜೀವನದ ದುರ್ಬರ ಮುಖಗಳಿಗೆ, ಸಹಾಯಹಸ್ತ ಇಲ್ಲದ ಅಸಹಾಯಕ ಕಣಗಳ ಭಾವಗಳಿಗೆ ಇವರ ಹೃದಯ ಮಿಡಿದು ಕಟ್ಟಿದ ರಾಗಗಳೇ ಕ್ರಮೇಣ ಇವರ ನೈಜ ಕೊರಳುಗಳಲ್ಲಿ ಇಂಪಾದ ಹಾಡಾದದ್ದು. ಜೀವನದ ಇಳಿವಯಸ್ಸಿನಲ್ಲಿ ಪ್ರಶಸ್ತಿ ಸಂದಾಗ ಬದುಕಿನ ಕಠೋರ ಪುಟಗಳಲ್ಲಿ ನಲಿವಿನಿಂದ ದಾಖಲಾದ ಕ್ಷಣ ಇದಾಗಿರಬಹುದು. ಕೂಲಿಯನ್ನೇ ಗಂಜಿಗಾಗಿ ನೆಚ್ಚಿರುವ ಇವರ ಕುಳಿ ಕೆನ್ನೆಗಳು, ನೆರೆತು ಕೆದರಿದ ಕೂದಲು, ಶಕ್ತಿ ಉಡುಗಿದ ಕಾಲುಗಳು. ಬತ್ತಿಹೋದ ದೇಹಗಳು ಅಸಮಾನ ಸಮಾಜ ವ್ಯವಸ್ಥೆಯ ಕುರೂಪ ಚಿಹ್ನೆಗಳಾಗಿ ಕಾಣಿಸುತ್ತವೆ. ಪ್ರಶಸ್ತಿ ಧನವಾಗಿ ಸಂದ ತಲಾ 3 ಸಾವಿರ ರೂ.ಗಳಲ್ಲಿ, ಮೈಗೆ ಹೊದ್ದಿಸಿದ ಬೆಲೆಬಾಳುವ ಶಾಲುಗಳಾಗಲಿ, ತಲೆ ಮೇಲೆ ಸನ್ಮಾನ ಸಮಯದಿ ಸುರಿಸಿದ ಪುಷ್ಪ ದಳಗಳಾಗಲೀ ಇವರ ಬದುಕಿನ ಅಭದ್ರತೆಯನ್ನು ತೊಲಗಿಸುವುದಿಲ್ಲ. ಬದಲು ಮಾಸಿಕ ಜೀವನಾವಶ್ಯ ಹಣ ನೀಡಿದಾಗ ಮಾತ್ರ ಪ್ರಶಸ್ತಿಗೊಂದು ಅರ್ಥ ಬರಬಹುದು. ಈ ಮುಗ್ಧ ಅಪ್ರತಿಮ ಜಾನಪದ ಕಲಾವಿದೆಯರನ್ನು ಇವರದೇ ಪತ್ರಿಕೆಯಲ್ಲಿ ದಾಖಲುಗೊಳಿಸುವಾಗ ಹೃದಯ ತುಂಬುತ್ತದೆ.

ಕೊರಗರ ವೆಂಕಟಮ್ಮ

ನಿಸ್ತೇಜ ಕಣ್ಣುಗಳ, ನಡೆದಾಡಲು ತಡಕಾಡುವ ಕೊರಗರ ವೆಂಕಟಮ್ಮ ಹುಟ್ಟಿದ್ದು ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕಿನ ಕುಶಾಲನಗರದ ಬಳಿಯ ಸಿದ್ಧಲಿಂಗಪುರದಲ್ಲಿ. ಕೊರಗ ಬುಡಕಟ್ಟು ಜನಾಂಗದ ವೆಂಕಟಮ್ಮನಿಗೆ ಗುರುವಾದದ್ದು ಸ್ವಂತ ಅತ್ತೆಯೆ. ಉತ್ತರ ದೇವಿ, ಹೊನ್ನಮ್ಮ, ಕಪ್ಪಡಿರಾಜಪ್ಪ ಗೀತೆಗಳಲ್ಲದೆ ರಾಗಿ ಬೀಸುವ ಹಾಡು, ಸೋಬಾನೆ ಪದಗಳು ಈಕೆಗೆ ಕಂಠಪಾಠವಾಗಿದೆ. ಹಾಡುವುದರೊಂದಿಗೆ ಶಾಸ್ತ್ರ ಹೇಳುವುದು, ಬಲಿ ತೆಗೆಯುವುದು ಈಕೆಯ ಹವ್ಯಾಸ. ಹಲವರಿಗೆ ಹಾಡು ಕಲಿಸಿದ 70ರ ಇಳಿವಯಸ್ಸಿನ ಈಕೆ ಮುಪ್ಪಿನಲ್ಲಿ ತನ್ನೆಲ್ಲಾ ಕಷ್ಟ–ಸುಖ ಹಂಚಿಕೊಳ್ಳಲು ಹಾಡುಗಳ ಕರೆಯುತ್ತಾಳೆ.

ದುರ್ಗಮ್ಮ ಬ್ಯಾಡರ

ರಾಯಚೂರು ಜಿಲ್ಲೆಯ ಕೊತ್ತದೊಡ್ಡಿ ತಾಲ್ಲೂಕಿನ ದುರ್ಗಮ್ಮ ಬ್ಯಾಡರ ಜೀವನಾಧಾರ ಕೂಲಿ. 40 ವರ್ಷಗಳಿಂದ ಹಾಡುತ್ತಲೇ ಜೀವನ ಸವೆಸಿದ್ದಾಳೆ. 58 ವರ್ಷದ ದುರ್ಗಮ್ಮ ಇಂದು ಸುತ್ತಲ ಯಾವುದೇ ಮದುವೆ, ಮುಂಜಿ, ಹಬ್ಬ–ಹುಣ್ಣಿಮೆಗಳಲ್ಲಿ ಅವಿಭಾಜ್ಯ ಅಂಗ. ಅರ್ಥಪೂರ್ಣ ಕಲಾವಿದೆ ದುರ್ಗಮ್ಮ ಹಾಡು ಕಲಿತದ್ದು ಅಕ್ಕ ಹನುಮವ್ವಳಿಂದ. ಹುಟ್ಟು ಮೂಕ ಹಾಗೂ ಕಿವುಡ ಗಂಡನೊಂದಿಗೆ ತನ್ನೆಲ್ಲ ನೋವನ್ನು ಮರೆತು ಕಲೆಗೆ ಅರ್ಪಿಸಿಕೊಂಡ ತ್ಯಾಗಜೀವಿ ಕಲಾವಿದೆ ಈಕೆ.

ಬೊಮ್ಮಳ ಎಲಿಸವ್ವ

ಬಳ್ಳಾರಿ ಜಿಲ್ಲೆಯ ಹರಪನಹಳ್ಳಿ ಬಳಿಯ ಉಚ್ಚಂಗಿ ದುರ್ಗದ ಗುಣಸಾಗರಿ ಬೊಮ್ಮಳ ಎಲಿಸವ್ವಳೆಂದೇ ಖ್ಯಾತಿಯಾದ ಈಕೆ ಸಂಪ್ರದಾಯದ ಹಾಡುಗಳಿಗೆ ಹೊಸತನ ತುಂಬಿದಾಕೆ. ಹೊಲದಲ್ಲಿ ಕಳೆ ಕೀಳುವಾಗ, ನಾಟಿ ಹಾಕುವಾಗ ಕೇಳಿದ ಹಾಡುಗಳನ್ನು ತನ್ನ ಮನಸ್ಸಿನ ಕಣಜಕ್ಕೆ ತುಂಬಿಕೊಂಡರು. ಹಾಡುಗಳ ರಾಶಿ ಮುಗಿದಾಗ ತನಗೆ ಗೊತ್ತಿದ್ದ ಪದಗಳಿಗೆ ದನಿ ನೀಡಿ ಹಾಡು ಕಟ್ಟಿದಳು. ಕಾಳಿಂಗರಾಯನ ಪದ, ಮುದಗದ ಕೆಂಚಮ್ಮನ ಪದ, ಗುಣಸಾಗರಿ ಪದ, ದಂಡಿನ ದುರುಗಮ್ಮನ ಪದ, ಕೊರವಂಜಿ ಪದ, ಹತ್ತು–ಹಲವು ರಾಶಿ ಪದಗಳ ಭಂಡಾರ ಈಕೆ. ಬೀಸುವ, ಕುಟ್ಟುವ, ದೇವರ ಪದಗಳನ್ನು ಸ್ಥಳದಲ್ಲಿಯೇ ಕಟ್ಟಿಹಾಕುವ ನೈಪುಣ್ಯತೆಯೂ ಈಕೆಗಿದೆ.

ಬೆಂಗಳೂರು, ಧಾರವಾಡ, ಗುಲ್ಬರ್ಗಾ ಆಕಾಶವಾಣಿಯಲ್ಲಿ ಅನೇಕ ಕಾರ್ಯಕ್ರಮ ನೀಡಿರುವ ಈಕೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿಯ ಮಾಜಿ ಸದಸ್ಯೆ.

ಮದುವೆ ಮನೆಯೊಂದರಲ್ಲಿ ಸೋಬಾನದ ಹಾಡು ಹೇಳುವಾಗ ಸಂತಸದಲ್ಲಿ ಹುಚ್ಚೆದ್ದು ಮಧುವಣಿಗರ ಮೇಲೆರೆಚಿದ ಅಕ್ಕಿಕಾಳು ಈಕೆಯ ಕಣ್ಣಿಗೆ ಬಿದ್ದು ಕಣ್ಣಿನ ಶಸ್ತ್ರಚಿಕಿತ್ಸೆ ಆಗಿದೆ. ಗುಣಸಾಗರಿ ಎಲಿಸವ್ವಳ ಎಂದೂ ಕೈಬಿಡದ ಸಂಗಾತಿಗಳೇ ಈ ಹಾಡುಗಳು.

ಹರಿಜನ ಕರ್ಗಿ

ದಕ್ಷಿಣ ಕನ್ನಡ ಜಿಲ್ಲೆಯ ಉಡುಪಿ ತಾಲ್ಲೂಕಿನ ಅಂಜಾರುವಿನ ತೋಟದ ಮನೆಯ ಕರ್ಗಿ ಹರಿಜನ ಪಂಗಡದಾಕೆ. ಮಲೆನಾಡಿನ ಸೌಂದರ್ಯದ ಚಹರೆಗಳು ಇಣುಕುವ ಆಕೆಯ ಮುಖದ ಮುಗ್ಧತೆಯ ಹೊಳಪಿನ್ನೂ ಮಾಸಿಲ್ಲ. ಪಾಡ್ದನಗಳ ರಾಶಿ ಎಂದೆಸರಾದ ಕರ್ಗಿ ಅನೇಕ ಭೂತಾರಾಧನೆಯ. ಮೂಲ ಕಥೆಗಳನ್ನು ಹಾಡಿನ ರೂಪದಲ್ಲಿ, ಕಥೆಯ ರೂಪದಲ್ಲಿ ನಿರರ್ಗಳವಾಗಿ ಹೇಳುತ್ತಾಳೆ. ನಿತ್ಯದ ಆಯಾಸದ ದುಡಿತ ಮರೆಯಲು ಏಕಾಂತದಲ್ಲಿ ಪಾಡ್ದನಗಳ ಹಾಡಿಕೊಳ್ಳುತ್ತಿದ್ದ ಕರ್ಗಿ ಇಂದು ಅಪರೂಪದ ಪಾಡ್ದನ ಮತ್ತು ಕಥೆಗಳ ಉಗ್ರಾಣವಾಗಿದ್ದಾಳೆ. ವಿದೇಶೀ ವಿದ್ವಾಂಸರಿಗಂತೂ ಈಕೆ ಪಾಡ್ದನಗಳ ಕೈಪಿಡಿಯಂತೆ. ತುಳುನಾಡಿನ ಸಿರಿ, ಮುಂಜೊಟ್ಟೆ ಗೋಣ, ಅಬ್ಬಗ–ದಾರಗ, ನಾಗಸಿರಿ, ಚೆಲ್ಲಿ–ಪಿಲ್ಲಿ, ಹೊನ್ನುಡ–ಹೊನ್ನಮ್ಮ ಹೀಗೆ ಹಲವಾರು ಪಾಡ್ದನ ಈಕೆಯಲ್ಲಿವೆ. ಮೂಲ್ಕಿಯಲ್ಲಿ ನಡೆದ ಅಖಿಲ ಭಾರತ ತುಳು ಸಮ್ಮೇಳನ ಈಕೆಯನ್ನು ಸನ್ಮಾನಿಸಿದೆ.

ಲಕ್ಷ್ಮಿಬಾಯಿ ಮಾದರ

ಕಟ್ಟುಮಸ್ತಿನ ದೇಹಸಿರಿಯ, ಅಗಲ ಕುಂಕುಮದ, ಎದ್ದು ಕಾಣುವ ಮೂಗುತಿಯ, ಸೆರಗು ತಲೆಮೇಲೆ ಹೊದ್ದುಕೊಳ್ಳುವ ನೀಳ ಹೆಂಗಸು ಈ ಲಕ್ಷ್ಮಿಬಾಯಿ ಮಾದರ. "ಲಕ್ಷ್ಮಿಬಾಯಿ ಮಾದರ ಹಾಡು ಹಾಡಿದರೆ ಗುಡುಗು ಗುಡುಗಿದಂತೆ" ಎಂದು ಪ್ರೇಕ್ಷಕರಿಂದ ಪ್ರಶಂಸೆ ಪಡೆದ ಈಕೆಯ ಹುಟ್ಟೂರು ಬಿಜಾಪುರ ಜಿಲ್ಲೆಯ ಜಮಖಂಡಿ. ಹಾಡಿನೊಂದಿಗೆ ಚೌಡಿಕೆ ಬಾರಿಸುವುದರಲ್ಲೂ ಪರಿಣಿತೆ ಇರುವ ಈಕೆ ಮಹಾರಾಷ್ಟ್ರ, ದೆಹಲಿ, ಮದ್ರಾಸು, ಮುಂಬೈ, ಸಿಮ್ಲಾ ಒಳಗೊಂಡಂತೆ ಈವರೆಗೆ ಏಳು ಸಾವಿರಕ್ಕೂ ಹೆಚ್ಚು ಕಾರ್ಯಕ್ರಮ ನೀಡಿ ಪ್ರಶಂಸೆ ಪಡೆದಿದ್ದಾರೆ. ನಾಲ್ಕು ಯುಗಗಳ ಪುರಾಣ, ದಶಾವತಾರ, ನೀತಿ ಬೋಧಕ ಪದಗಳು, ಸ್ವಾತಂತ್ರ್ಯ ಯೋಧರ ಕತೆಗಳನ್ನು ಸುಶ್ರಾವ್ಯವಾಗಿ ಈಕೆ ಹಾಡುತ್ತಾರೆ. ಹಲವು ನಾಟಕಗಳಲ್ಲೂ ಅಭಿನಯಿಸಿರುವ ಈಕೆಯ ಪ್ರತಿಭೆ ಡಪ್ಪಿನ ಹಾಡು. ಸೋಬಾನ ಹಾಡುಗಳಿಗೂ ಹಬ್ಬಿದೆ.



ಇಂದಿನ ಶಾಸ್ತ್ರೀಯ ಕಲೆಗಳಲ್ಲಿ ಮುಳುಗಿರುವ ಯುವ ಜನಾಂಗಕ್ಕೆ ಜಾನಪದ ಸೊಗಡಿನ ಬಗ್ಗೆ ಅರಿವು ಮೂಡಿಸುವ ಹೊಣೆಗಾರಿಕೆ ಅಕಾಡೆಮಿ ಮೇಲಿದೆ. ಇಂತಹ ಇಳಿವಯಸ್ಸಿನ ಕಲಾವಿದರು ಅಳಿಯುವ ಮುನ್ನವೇ ರಾಜಧಾನಿ ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಈ ಕಲೆಗಳನ್ನು ಕ್ರಮಬದ್ಧವಾಗಿ ಕಲಿಸಲು ಶಿಬಿರಗಳನ್ನು ನಡೆಸಬೇಕಿದೆ. ರಾಷ್ಟ್ರೀಯ–ಅಂತರರಾಷ್ಟ್ರೀಯ ಉತ್ಸವಗಳಲ್ಲಿ ಪ್ರತಿನಿಧಿಸಲು ಶಿಸ್ತಿನ ಪರಿಣಿತ ತರುಣ–ತರುಣಿಯರ ಯುವ ತಂಡಗಳನ್ನು ತಯಾರು ಮಾಡಬೇಕಿದೆ. ಕನ್ನಡ ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ವಿಠ್ಠಲಮೂರ್ತಿ, ಕಲಾವಿದ ನಗೀನ್ ಅಹ್ಮದ್, ಜಾನಪದ ಅಕಾಡೆಮಿ ರಿಜಿಸ್ಟ್ರಾರ್ ಬೋರಲಿಂಗಯ್ಯ ಈ ಕುರಿತು ಆಸ್ತೆವಹಿಸುವ ಮಾತಾಡಿದ್ದಾರೆ. ನಿಜಕ್ಕೂ ಈ ತಂಡ ಇಂತಹ ಒಂದು ಸವಾಲಾದ ಈ ಕಾರ್ಯವನ್ನು ಮಾಡಿದರೆ ಜಾನಪದ ಕ್ಷೇತ್ರಕ್ಕೇ ಒಂದು ದೊಡ್ಡ ಕೊಡುಗೆ ನೀಡಿದಂತಾಗುತ್ತದೆ. ಮಿತವಾದ ಖರ್ಚುಗಳಲ್ಲಿ ಅಕಾಡೆಮಿಗಳನ್ನು ನಡೆಸಿ, ಸರಕಾರ ಪ್ರತಿ ನಾಣ್ಯವನ್ನೂ ಅರ್ಥಪೂರ್ಣವಾಗಿ ವಿನಿಯೋಗಿಸಬೇಕಿದೆ. ಕ್ರಿಯಾತ್ಮಕವಾದ ಈ ಕೆಲಸವನ್ನ ಮೇಲಿನ ಮೂವರು ಕೈಗೆತ್ತಿಕೊಂಡರೆ ಕಲಾ ಪ್ರಿಯರಾದ ವೀರಪ್ಪಮೊಯ್ಲಿಯವರೂ ನಿಜಕ್ಕೂ ಪ್ರೋತ್ಸಾಹಕ ಧನಸಹಾಯ ಮಾಡುವರೆಂಬ ವಿಶ್ವಾಸ ನಮಗಿದೆ.

Folk artistes honoured

B. V. K. Shastry

Folk artistes honoured

48-year-old Eeramma from
trict to the 90-year-old Syed
Hassan. The average age
o be around 70. Except the
of universities and one or
ers of theatre troupes, the
an unsettled life, eking out
libood by miscellaneous jobs.
m wandering from place to
rforming.
ey seem to find joy in their art without thought of monetary recompense or honours. They receive whatever is given and do not complain. They go around villages, sing either to entertain or as a part of some social religious function, and move on to the next place.

Take the case of Syed Ishaq. He is a Yakshagana veteran reputed for the portrayal of roles such as Bhima, Virabhadra, and demons. But he is keeping body and soul together
vending peanuts and sugarcane in
streets. This is true of Hyder
Mohideen Sab of Afzhalpur or
septuagenerian Obalavva of Tur
nur, Devayya, Lakkamma all on
wrong side of the 70s. And th
people are not shouting about
tional integration and commu
harmony because these have bee
part of their lives.

Obalamma (folk song)

Syed Ishaq. (folk theatre)



Helavara Lakkayya (folk song)

The Karnataka Janapada and Yakshagana Academy confered the annual awards on 23 veterans in the field of Folk Arts recently. The award carried a cash prize of Rs. 3,000, a medal and other paraphernalia. Though the function was held in Bangalore, it is strange that it did not draw as much attention as similar functions of other Academies.

They represented a wide variety of forms and activities relating to folk arts. Two scholars, six each of singers and folk theatre artistes, two each from folk dance and shadow theatre, three folk drummers and one mukha veena player received the award. For good measure a tribal folk singer was also included.

Among the forms represented were Sobane pada, Lavani, Gi Gi pada under folk music; Yakshagana, Doddata, Kelike in the theatre; Veeragase, Kudiyara Kunita under dance; Halage, Khani, Thammate under drums. The artistes hailed from different corners of the state from coastal Canara to Bidar, and Belagaum to Kolar.

A closer look at these honoured artistes makes an intersting study in more than one respect. They ranged from the 48-year-old Eeramma from Bidar district to the 90-year-old Syed Ishaq of Hassan. The average age seemed to be around 70. Except the two dons of universities and one or two owners of theatre troupes, the rest lead an unsettled life, eking out their livelihood by miscellaneous jobs apart from wandering from place to place performing.

But they seem to find joy in their art without thought of monetary recompense or honours. They receive whatever is given and do not complain. They go around villages, sing either to entertain or as a part of some social religous function, and move on to the next place.

Take the case of Syed Ishaq. He is a Yakshagana veteran reputed for the portrayal of roles such as Bhima, Virabhadra, and demons. But he is keeping body and soul together by vending peanuts and sugarcane in the streets. This is true of Hyder Sab Mohideen Sab of Afzhalpur or the septugenerian Obalavva of Turuvanur, Devayya, Lakkamma all on the wrong side of the 70s. And these people are not shouting about national integration and communal harmony because these have been a part of their lives.

Bordering on the poverty line, these artistes may occasionally dream of the numerous measures adopted by the State for bettering their lives. But these seem beyond their reach. The simple folk are too unworldly either to comprehend or to compete with the urban art fraternity in grabbing facilities offered by the government. Meanwhile, they keep the lamp of tradition burning bright. ●

Touch of Class to Folk Arts

S. Prasad

